
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 15 ಏಪ್ರಿಲ್ 10, 2005 ಬೆಲೆ ರೂ. 3.00

18 ನೇ ಮಹಾಧಿವೇಶನ
ಸಿಪಿಐ(ಎಂ)
6-11 ಏಪ್ರಿಲ್ 2005, ದೆಹಲಿ

ಸವಾಲುಗಳನ್ನು ಎದುರಿಸುವ ವಿಶ್ವಾಸ







ಕರ್ನಾಟಕದಲ್ಲೊಂದು ಕಂಪನ



ಮಂಗಳೂರಿನಲ್ಲಿ ಹಿಟ್ಲರ್ ಸಂತತಿ



ಸಿನಿಮಾ : 'ಅಮು'


ಸಿಖ್ ಹತ್ಯಾಕಾಂಡಕ್ಕೆ ಕನ್ನಡಿ

- ರಾಜಕೀಯ ನೈತಿಕತೆ ಕೀಳ್ಮಟ್ಟಕ್ಕೆ ಇಳಿಸುತ್ತಿರುವ ಬಿಜೆಪಿ

- ಜಾಗತೀಕರಣಕ್ಕೆ ಮತ್ತೊಂದು ಮುಖಭಂಗ ಬೊಲಿವಿಯಾ ಅಧ್ಯಕ್ಷರ ರಾಜಿನಾಮೆ

ಬೂರ್ಜ್ವಾ ಪ್ರಜಾಸತ್ತೆಯಲ್ಲಿ ಸಂಸತ್ತು :

ಪ್ರಶ್ನೋತ್ತರ



- ಇ.ಎಂ.ಎಸ್ ನಂಬೂದರಿಪಾಡ್

ಬೂರ್ಜ್ವಾ ಪ್ರಜಾಸತ್ತೆಯನ್ನು ಕುರಿತು ಲೆನಿನ್ ಹೀಗೆ ಹೇಳಿದ್ದಾರೆ : ಬೂರ್ಜ್ವಾ ಆಳ್ವಿಕೆಯಲ್ಲಿ ಸಂಸತ್ತಿಗೆ ಸರಿಯಾದ ಅಧಿಕಾರವೇನೂ ಇರುವುದಿಲ್ಲ. ದೇಶದ ಕೆಲಸ ಕಾರ್ಯಗಳು ಆಯಾಯ ಇಲಾಖೆಗಳ ಕೈಯಲ್ಲಿರುತ್ತವೆಯೇ ಹೊರತು ಸಂಸತ್ತಿಗಿರುವುದಿಲ್ಲ. ಸಂಸತ್ತು ಕೇವಲ ಹರಟೆ ಕಟ್ಟೆ ಮಾತ್ರ. ಆಳುವವರ ಅಧಿಕಾರ ನಡೆಯುವುದು; ಇಲಾಖೆಗಳಿಂದ, ಛಾನ್ಸೆಲರುಗಳಿಂದ ಮತ್ತು ಅಧಿಕಾರ-ನೌಕರರಿಂದ. ಹೀಗಿರುವಾಗ ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ಶ್ರದ್ಧಾಪೂರ್ವಕ ನಂಬಿಕೆ ಇಟ್ಟಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಂಸತ್ತಿನಲ್ಲಿ ಭಾಗವಹಿಸುತ್ತಿರುವ ಗುಟ್ಟೇನು?

ಮಾರ್ಕ್ಸ್, ಲೆನಿನ್ ಹಾಗೂ ಏಂಗೆಲ್ಸ್‌ನ ಗ್ರಂಥಗಳನ್ನು ಓದಿದ ಕೆಲವರಿಗೆ ತಮಗೆ ಇಷ್ಟವಾದ ಮಾತುಗಳು ಸಿಕ್ಕರೆ ಅದೇ ಮಾರ್ಕ್ಸ್‌ವಾದ -ಲೆನಿನ್‌ವಾದ ಎಂದು ತೀರ್ಮಾನಿಸಿ ಬಿಡುತ್ತಾರೆ. ಆದರೆ ಅದೇ ಗ್ರಂಥಗಳಲ್ಲಿ ತಮಗಿಷ್ಟವಾದ ಮಾತಿನ ಹಿಂದೆ ಅಥವಾ ಮುಂದೆ ತಮಗಿಷ್ಟವಲ್ಲದ ಮಾತುಗಳಿದ್ದರೆ ಅದು ಮಾರ್ಕ್ಸ್ ಲೆನಿನ್‌ವಾದ ಅಲ್ಲವೆಂದು ಪರಿಗಣಿಸುವವರು ಅಂಥವರೇ. ಇದು ಅನೇಕರಿಗೆ ಸಂಭವಿಸಬಹುದಾದ ತಪ್ಪು.

ಕಾರ್ಮಿಕ-ರೈತಾಪಿ ವರ್ಗವು ಜೀವನದ ಹಲವಾರು ಕ್ಷೇತ್ರಗಳಲ್ಲಿ ಪ್ರತಿಸಲವೂ ಬೂರ್ಜ್ವಾಗಳಿಗೆದುರಾಗಿ ನಡೆಸುವ ಸಂಘಟನಾ ಹೋರಾಟಗಳೇ ಮಾರ್ಕ್ಸ್ ಲೆನಿನ್-ವಾದಗಳ ತಿರುಳು. ಈ ಹೋರಾಟಗಳು ಕೆಲವೊಮ್ಮೆ ಪರೋಕ್ಷವಾಗಿಯೂ ಕೆಲವೊಮ್ಮೆ ಪ್ರತ್ಯಕ್ಷವಾಗಿಯೂ ಇನ್ನೂ ಕೆಲವು ಬಾರಿ ಮಂದಗತಿಯಲ್ಲೂ ಅಥವಾ ಸಂಘಟನಾತ್ಮಕವಾಗಿಯೂ ನಡೆಯುತ್ತವೆ.

ಕೂಲಿ ಹೆಚ್ಚಳಕ್ಕೆ ಅಥವಾ ಆಹಾರಧಾನ್ಯಗಳ ಬೆಲೆ ಇಳಿತಕ್ಕೆ ನಡೆಯುವ ಆರ್ಥಿಕ ಹೋರಾಟಗಳು, ಅಧಿಕಾರಮದದಿಂದಿರುವ ಸರ್ಕಾರಿ ಅಧಿಕಾರಿಗಳ ವಿರುದ್ಧ, ಕಂಪನಿ ಮಾಲೀಕರ ಮತ್ತು ಅವರ ಬಾಲಬಡುಕರ ದಬ್ಬಾಳಿಕೆಗೆ ಎದುರಾಗಿ ನಡೆಯುವ ಪ್ರತಿಭಟನೆಗಳು, ಪ್ರಜಾಸತ್ತೆಯ ಹಕ್ಕು-ಭಾದ್ಯತೆಗಳನ್ನೂ ಹತ್ತಿಕ್ಕುವ ಸರಕಾರದ ದಮನ ನೀತಿಗೆ ಎದುರಾಗಿ ಎಲ್ಲಾ ಜನವಿಭಾಗಗಳನ್ನು ಸಂಘಟಿಸಿ ನಡೆಸುವ ಜನತಾ ಆಂದೋಲನಗಳು ಮುಂತಾದ ಸಾಮಾಜಿಕ ಚಟುವಟಿಕೆಗಳ ರಾಜಕೀಯ ರೂಪವಾದ ಚುನಾವಣಾ ಹೋರಾಟಗಳನ್ನು ನಡೆಸುವುದು, ದೇಶದ ಪರಿಸ್ಥಿತಿಯನ್ನು ಗಮನಿಸಿ ಅಗತ್ಯವೆನಿಸಿದರೆ ಚುನಾವಣೆಗಳನ್ನು ಸಂಸತ್ತಿನ ಚಟುವಟಿಕೆಗಳನ್ನು ಬಹಿಷ್ಕರಿಸಬೇಕಾದ ಕಡೆ ಬಹಿಷ್ಕರಿಸುವುದು ಕ್ರಾಂತಿಕಾರಿ ಕಾರ್ಯನಿರ್ವಹಣೆಗೆ ಪರಿಸ್ಥಿತಿ ಪಕ್ವವಾದಾಗ ಸಂಸತ್ತಿನ ವ್ಯವಸ್ಥೆಗೆದುರಾಗಿ ನಡೆಸಬಹುದಾದ ಕ್ರಾಂತಿ. ಇವೇ ಮಾರ್ಕ್ಸ್-ಲೆನಿನ್‌ವಾದಿಗಳ ಕ್ರಾಂತಿತಂತ್ರಗಳು.

ಈ ಕ್ರಾಂತಿ ತಂತ್ರಗಳು ಸಮಯಾನುಸಾರ ಬದಲಾಗುತ್ತವೆಯೆಂದು ಬೇರೆ ಹೇಳಬೇಕಾಗಿಲ್ಲ. ಈ ತಂತ್ರಗಳನ್ನು ಪೂರ್ಣವಾಗಿ ಪಾಲಿಸುವುದು ಅಥವಾ ಬಿಡುವುದು ಅಥವಾ ಎಷ್ಟು ಬಿಡಬೇಕು, ಎಷ್ಟು ಕಟ್ಟಬೇಕು ಎಂದು ನಿರ್ಧರಿಸುವುದು ಮತ್ತು ಪರಿಸ್ಥಿತಿಗೆ ಒಪ್ಪುವ ಧೋರಣೆಯನ್ನು ರೂಪಿಸಬೇಕೆಂದೇ ಮಾರ್ಕ್ಸ್-ಲೆನಿನ್‌ವಾದಗಳು ಹೇಳುವುದು.

ಆದರೆ ಈ ಸಡಿಲವಾದ ತಂತ್ರಗಳ ಜೊತೆಯಲ್ಲೇ ಕಟ್ಟುನಿಟ್ಟಾದ ಒಂದು ತತ್ವವೂ ಇದೆ. ಅದು, ಕೆಲವೇ ಮಂದಿ ಇರುವ ಶೋಷಕ ವರ್ಗಗಳಿಗೆದುರಾಗಿ ಜನಸಾಮಾನ್ಯರನ್ನೆಲ್ಲಾ (ಶೋಷಿತ ವರ್ಗಗಳನ್ನೂ) ಸಂಘಟಿಸಿ ಹೊಸದೊಂದು ಜನಸಾಮಾನ್ಯರ ಕ್ರಾಂತಿ ಸೇನೆಯೊಂದನ್ನು ಅಣಿಗೊಳಿಸುವುದೇ ಆಗಿದೆ. ಈ ಜವಾಬುದಾರಿಯನ್ನು ಈಡೇರಿಸುವಲ್ಲಿ ಯಾವ ರೀತಿಯ ಸಡಿಲತೆಯಾಗಲೀ ರಿಯಾಯಿತಿಯಾಗಲಿ ಇಲ್ಲ. ಅಂದರೆ ಬೂರ್ಜ್ವಾ ಪ್ರಜಾಸತ್ತೆಯ ವ್ಯವಸ್ಥೆಯನ್ನು "ಪರಮೋತ್ತಮ" ಎನ್ನುವಂತೆ ಅದರ ತತ್ವಗಳಿಗೂ ಅಧಿಕಾರಕ್ಕೂ ಅಧೀನವಾಗಿ ಮಾತ್ರ ನಡೆಯಬೇಕೆಂಬ ಜನರಿಗೆ ಮಾರ್ಕ್ಸ್-ಲೆನಿನ್ ವಾದಗಳಲ್ಲಿ ಯಾವ ರಿಯಾಯಿತಿಯೂ ಇಲ್ಲ.

ಹಾಗೆಯೇ ಕಾರ್ಮಿಕ ಹಾಗೂ ಉಳಿದ ಶ್ರಮಿಕ ವರ್ಗಗಳ ಜನಸಾಮಾನ್ಯರನ್ನು ಕ್ರಾಂತಿ ಸೇನೆಯನ್ನಾಗಿ ಮಾರ್ಪಡಿಸುವುದರಲ್ಲಿ ಬೂರ್ಜ್ವಾ ಸಂಸದೀಯ ಪ್ರಜಾಸತ್ತೆ ಚೌಕಟ್ಟಿನಲ್ಲಿರುವ ಕ್ರಾಂತಿಕಾರಿ ಅಂಶಗಳ ಪಾತ್ರವನ್ನು ತಿರಸ್ಕರಿಸುವ ಎಡ ತೀವ್ರವಾದಿ ಸಮಯಸಾಧಕರಿಗೂ ಮಾರ್ಕ್ಸ್-ಲೆನಿನ್ ವಾದದಲ್ಲಿ ರಿಯಾಯಿತಿ ಇಲ್ಲ.

ಅಂತರರಾಷ್ಟ್ರೀಯ ಕಾರ್ಮಿಕ ಚಳುವಳಿಯಲ್ಲಿ ಬಲ ಮಂದಗಾಮಿ ಸಮಯ ಸಾಧಕರು ಪ್ರಭಾವಶಾಲಿಯಾಗಿದ್ದ ಕಾಲದಲ್ಲಿ ಅವರಿಗೆದುರಾಗಿ ಹೋರಾಟಗಳ ಮೂಲಕ ಲೆನಿನ್ ವಿಶ್ವಕ್ರಾಂತಿ ಸಂಘಟನೆಯ ನೇತಾರನಾಗಿ ಮುಂದೆ ಬಂದರು. ಆದ್ದರಿಂದಲೇ ಸ್ವಾಭಾವಿಕವಾಗಿ ಬಲ ಮಂದಗಾಮಿ ಸಮಯ ಸಾಧಕರಿಗೆದುರಾಗಿ ತೀವ್ರ ಹೋರಾಟ ನಡೆಸಿದರು. ಎಡ ತೀವ್ರಗಾಮಿ ಸಮಯ ಸಾಧಕರಿಗೂ ಅವರು ಯಾವ ರಿಯಾಯಿತಿಯನ್ನೂ ತೋರಿಸಲಿಲ್ಲ. ಆದ್ದರಿಂದಲೇ ಅಂತರರಾಷ್ಟ್ರೀಯ ಕಮ್ಯೂನಿಸಂ ಮೊದಲ ವರ್ಷಗಳಲ್ಲಿ "ಎಡ ಪಕ್ಷ ತೀವ್ರಗಾಮಿ ಕಮ್ಯೂನಿಸಂ" ಒಂದು ವ್ಯಾಪಕ ಸಂಘಟನೆಯಾಗಿ ಮೇಲೆ ಬಂತು. ಇದಕ್ಕೆ ಎದುರಾಗಿ, ಹೋರಾಟದ ಒಂದು ಭಾಗವಾಗಿ "ಎಡ ತೀವ್ರಗಾಮಿ ಕಮ್ಯೂನಿಸಂ ಒಂದು ಬಾಲಾರಿಷ್ಟ" ಎಂಬ ಒಂದು ಗ್ರಂಥವನ್ನು ರಚಿಸಿದರು. ಈ ಗ್ರಂಥದಲ್ಲಿ ಸಂಸತ್ತಿನ ಕಾರ್ಯಕಲಾಪಗಳ ಬಗ್ಗೆ ಎತ್ತಿದ ಪ್ರಶ್ನೆಗಳಿಗೆ ವಿವರವಾದ ಉತ್ತರವಿದೆ.

ರಾಜಕೀಯ ನೈತಿಕತೆಯನ್ನು ಕೀಳಮಟ್ಟಕ್ಕೆ ಇಳಿಸುತ್ತಿರುವ ಬಿಜೆಪಿ

ತಾನೊಂದು 'ಭಿನ್ನ ವಿಧದ ಪಕ್ಷ' ಎಂದು ಹೇಳಿಕೊಳ್ಳುತ್ತಿದ್ದ ಬಿಜೆಪಿ ನಿಜಕ್ಕೂ ಭಿನ್ನ ಎಂದು ಸಾಬೀತಾಗುತ್ತಿದೆ! ಅದು ಸ್ವತಂತ್ರ ಭಾರತದ ರಾಜಕೀಯ ಇತಿಹಾಸದಲ್ಲಿ ರಾಜಕೀಯ ನೈತಿಕತೆಯ ಹೊಸ ವ್ಯಾಖ್ಯೆಗಳನ್ನು ಬರೆಯಹೊರಟಿದೆ.

ಸಾಮಾನ್ಯವಾಗಿ ರಾಜಕೀಯ ಅನೈತಿಕತೆಯೆಂಬುದು ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಿರುತ್ತದೆ. ಈ ವಿಷಯದಲ್ಲೂ ತಾನೊಂದು ಭಿನ್ನ ವಿಧದ ಪಕ್ಷ ಎಂದು ಬಿಜೆಪಿ ತೋರಿಸಿಕೊಟ್ಟಿದೆ. ವಾಜಪೇಯಿಯವರ ಆರು ವರ್ಷಗಳ ಆಳ್ವಿಕೆಯಲ್ಲಿ ಭ್ರಷ್ಟಾಚಾರ ಹಗರಣಗಳ ಅಭೂತಪೂರ್ವ ಸರಮಾಲೆಯೇ ಇಡೀ ದೇಶಕ್ಕೆ ಆಘಾತ ತಂದಿತು. ಟೆಲಿಕಾಂ ಹಗರಣ, ಸಕ್ಕರೆ ಹಗರಣ, ಯುಟಿಐ ಆಭಾಸ, ಖೇತನ್ ಪಾರೆಕ್ ಶೇರು ಮಾರುಕಟ್ಟೆ ಹಗರಣ, ತೆಹಲ್ಕಾ ಬಯಲಿಗೆಳೆದ ರಕ್ಷಣಾ ವ್ಯವಹಾರಗಳಲ್ಲಿನ ಹಗರಣ, ಶವಪೆಟ್ಟಿಗೆ ಮತ್ತು ಕಾರ್ಗಿಲ್ ಯುದ್ಧದ ವೇಳೆ ಇತರ ಖರೀದಿಗಳ ಹಗರಣ, ವಿದೇಶೀ ಸಾಂಸ್ಥಿಕ ಹೂಡಿಕೆದಾರರ ಲೂಟಿಗೆ ಮಾರಿಶಸ್ ದಾರಿ ಒದಗಿಸಿದ್ದು, ಭೂಹಗರಣ, ಮಹಾ ಪೆಟ್ರೋ ಹಗರಣ ಮತ್ತು ಸಾರ್ವಜನಿಕ ವಲಯದ ಖಾಸಗೀಕರಣಕ್ಕೆ ಸಂಬಂಧಪಟ್ಟ ಹಗರಣಗಳು - ಇವು ದೇಶದಲ್ಲಿ ಬಿಜೆಪಿ ನೇತೃತ್ವದ ಸರ್ಕಾರದ ಆಳ್ವಿಕೆಯನ್ನು ಬೆಳಗಿಸಿದ ಹಗರಣಗಳಲ್ಲಿ ಕೆಲವು.

ಹೀಗೆ ಒಂದೆಡೆ ಅವರು ಲೂಟಿ ಹೊಡೆಯುವ ಕಲೆಯನ್ನು ಪರಿಪೂರ್ಣಗೊಳಿಸುತಿದ್ದರೆ, ಇನ್ನೊಂದೆಡೆ ರಾಜಕೀಯ ನೈತಿಕತೆಯಲ್ಲಿ ಹೊಸ ವ್ಯಾಖ್ಯೆಗಳನ್ನೇ ಬರೆಯಲಾರಂಭಿಸಿದರು. ತಮ್ಮ ರಾಜಕೀಯ ಅಜೆಂಡಾವನ್ನು ಅನುಸರಿಸಲು ಅವರು ದೇಶದ ವಿವಿಧ ಭಾಗಗಳಲ್ಲಿ ಹೂಡಿದ, ಮುರಿದ ನೀತಿ ಬಾಹಿರ ಮೈತ್ರಿಕೂಟಗಳಂತೂ ಭಾರತದಲ್ಲಿ ಸಮಯಸಾಧಕ ಮತ್ತು ಅನುಕೂಲಸಿಂಧು ರಾಜಕಾರಣದಲ್ಲಿ ಒಂದು ಹೊಸ ಅಧ್ಯಾಯವನ್ನೇ ತೆರೆದವು. ಇತ್ತೀಚೆಗೆ ಝಾರ್ಖಂಡ್ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನೇ ಸೋಲಿಸಿ ಬಂದವರನ್ನೇ ತನ್ನ ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿ ಸೇರಿಸಿಕೊಂಡು ನಡೆಸಿದ ನೀತಿಬಾಹಿರ ಕುದುರೆ ವ್ಯಾಪಾರ ಅಧಿಕಾರಕ್ಕಾಗಿ ಎಂತಹ ನೀಚ ಮಟ್ಟಕ್ಕೆ ಅವರು ಇಳಿಯಬಲ್ಲರು ಎಂಬುದನ್ನು ತೋರಿಸಿಕೊಟ್ಟಿದೆ. ಅವರು ಅಧಿಕಾರದಲ್ಲಿ ಹೇಗಾದರೂ ಇರಲು ಯತ್ನಿಸುವುದು ಜಾತ್ಯತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಆರ್.ಎಸ್.ಎಸ್. ಕಣ್ನೋಟವನ್ನು ಸಾಕಾರಗೊಳಿಸುವ ಏಕೈಕ ಉದ್ದೇಶದಿಂದ ಎಂಬುದನ್ನು ಕ್ಷಣವೂ ಮರೆಯಬಾರದು.

2004 ರಲ್ಲಿ ಚುನಾವಣೆಗಳಲ್ಲಿ ಹೀನಾಯ ಸೋಲು ಕಂಡು ವಿರೋಧ ಪಕ್ಷವಾಗಿ ಕುಳಿತುಕೊಳ್ಳಬೇಕಾಗಿ ಬಂದ ಮೇಲೆ ಈಗ ಬಿಜೆಪಿ ರಾಜಕೀಯ ಅನೈತಿಕತೆಯ ವ್ಯಾಖ್ಯೆಗೆ ತನ್ನ ಕೊಡುಗೆ ನೀಡುವುದರಲ್ಲಿ ಒಂದು ಹೊಸ ಅಧ್ಯಾಯವನ್ನೇ ಸೇರಿಸಿದೆ. ಅಧಿಕಾರದಲ್ಲಿದ್ದಾಗ ತಾವೇ ಮುಂದಿಟ್ಟ ಹಲವಾರು ಧೋರಣಾ ಕ್ರಮಗಳಿಂದ ಅವರು ಈಗ ಹಿಂದೆ ಸರಿಯುತ್ತಿದ್ದಾರೆ - ತಾವು ವಿರೋಧ ಪಕ್ಷದಲ್ಲಿ ಕುಳಿತಿರುವ ಏಕೈಕ ಕಾರಣಕ್ಕಾಗಿ. ಆಳುವ ಪಕ್ಷವಾಗಿರುವುದು ಅಥವಾ ವಿರೋಧ ಪಕ್ಷವಾಗಿರುವುದನ್ನು ಬಿಟ್ಟು ಬಿಜೆಪಿಗೆ ಒಂದು ನೀತಿಯೆಂಬುದು ಇಲ್ಲವೇನೋ ಎಂಬಂತೆ ಕಾಣುತ್ತಿದೆ. ಏಕೆಂದರೆ ಅದರ ನಿಲುವು ಅದು ಎಲ್ಲಿದೆ - ಆಳುವ ಪಕ್ಷವಾಗಿಯೋ ಅಥವಾ ವಿರೋಧ ಪಕ್ಷವಾಗಿಯೋ - ಎಂಬುದನ್ನು ಅವಲಂಬಿಸಿರುವಂತೆ ಕಾಣುತ್ತದೆ!

ಇದರ ಇತ್ತೀಚಿನ ಉದಾಹರಣೆಯೆಂದರೆ ಪೇಟೆಂಟ್ ತಿದ್ದುಪಡಿ ಮಸೂದೆಯ ಬಗ್ಗೆ ಅದರ ನಾಚಿಕೆಗೇಡಿ ತಿಪ್ಪರಲಾಗ. ಈ ಮೊದಲು ವ್ಯಾಟ್ ಜಾರಿಯ ಪ್ರಶ್ನೆಯ ಮೇಲೆ ಇಂತಹ ತಿಪ್ಪರಲಾಗವನ್ನು ಅವರು ಹಾಕಿದ್ದರು. ಈ ಹಿಂದೆ ಅವರ ಹಣಕಾಸು ಮಂತ್ರಿಗಳೇ ಈ ವ್ಯಾಟ್ ಪದ್ಧತಿಯ ಜಾರಿಯ ಮುಂಚೂಣಿಯಲ್ಲಿದ್ದರು. ಈಗ ಬಂದಿರುವ ಪೆನ್ಶನ್ ನಿಯಂತ್ರಣ ಪ್ರಾಧಿಕಾರ ಮಸೂದೆ ಕೂಡಾ ಹಿಂದೆ ವಾಜಪೇಯಿ ಸರ್ಕಾರ ಆರಂಭಿಸಿದ ಹೊಸ ಪೆನ್ಶನ್ ಯೋಜನೆಯ ಪರಿಣಾಮವೇ. ಈ ಯೋಜನೆಯನ್ನು ಕಾರ್ಮಿಕ ಸಂಘಗಳೊಡನೆ ಸಮಾಲೋಚಿಸದೆಯೇ ಅದು ತಂದಿತ್ತು. ಈಗ ಅವರೇ ಅದನ್ನು ವಿರೋಧಿಸುತ್ತಿದ್ದಾರೆ!

ವಾಜಪೇಯಿ ಸರ್ಕಾರ ಪೇಟೆಂಟ್ ತಿದ್ದುಪಡಿ ಮಸೂದೆಯನ್ನು ತಂದಾಗ ಸಿಪಿಐ(ಎಂ) ಈಗ ಯುಪಿಎ ಸರ್ಕಾರ ಒಪ್ಪಿಕೊಂಡಂತಹುದೇ ತಿದ್ದುಪಡಿಗಳನ್ನು ಆಗಲೂ ಸೂಚಿಸಿತ್ತು. ಬಿಜೆಪಿ ಸರ್ಕಾರ ಅದನ್ನು ಪರಿಶೀಲಿಸಲೂ ನಿರಾಕರಿಸಿತು. ಏಕೆಂದರೆ ಅವರು ಆಗ ಅಮೆರಿಕನ್ ಸಾಮ್ರಾಜ್ಯಶಾಹಿಯೊಡನೆ ಚೆಂಡಾಟ ಆಡುತ್ತಿದ್ದರು. ಅಮೆರಿಕನ್ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಸಂತೃಪ್ತಗೊಳಿಸುವ ಅದಕ್ಕೆ ತಲೆಬಾಗುವ ಅದರ ಆಕಾಂಕ್ಷೆಯನ್ನು ಯಾರೂ ಸರಿಗಟ್ಟಲಾರರು.

ಭಾವೋದ್ರೇಕಗಳನ್ನು ಬಡಿದೆಬ್ಬಿಸಲು ಅಸಮರ್ಥವಾಗಿರುವ ಅವರು ಈಗ ಜನಗಳ ಬೆಂಬಲ ಗಳಿಸಲು, ತಾವೇ ಹಿಂದೆ ಅಧಿಕಾರದಲ್ಲಿದ್ದಾಗ ತಳೆದ ನಿಲುವುಗಳನ್ನು ತಿರುಗುಮುರುಗು ಗೊಳಿಸುತ್ತಿದ್ದಾರೆ. ಇಂತಹ ಗೋಸುಂಬೆತನಕ್ಕೆ ಯಾರೂ ಮೋಸ ಹೋಗಲಾರರು. ಬೇರೆಲ್ಲಾ ಮಹತ್ವಪೂರ್ಣ ವಾದ, ಭಾರಿ ಕಾರಣಗಳಿಲ್ಲದೆ. ರಾಜಕೀಯ ನೈತಿಕತೆಯನ್ನು ಕೀಳಮಟ್ಟಕ್ಕೆ ಇಳಿಸುವ ಅವರ ಪ್ರಯತ್ನಕ್ಕಾಗಿಯೇ ಬಿಜೆಪಿಯನ್ನು ಪ್ರಭುತ್ವ ಅಧಿಕಾರದಿಂದ ಎಷ್ಟು ದೂರ ಸಾಧ್ಯವೋ ಅಷ್ಟು ದೂರದಲ್ಲಿ ಇಡುವುದು ಭಾರತದ ಒಳಿತಿನ ದೃಷ್ಟಿಯಿಂದ ಒಳ್ಳೆಯದು.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಏಪ್ರಿಲ್ 6 ರಿಂದ 11, 2005**
  ಸಿಪಿಐ(ಎಂ) ಅಖಿಲ ಭಾರತ ಅಧಿವೇಶನ ನವ ದೆಹಲಿ. 11 ರಂದು ಬೃಹತ್‌ರ್‍ಯಾಲಿ
- **ಏಪ್ರಿಲ್ 7, 2005**
  ಕೃಷಿ ಉತ್ಪನ್ನಗಳ ಮಾರುಕಟ್ಟೆ 'ಮಾದರಿ ಕಾನೂನು-2004 ರಾಜ್ಯಮಟ್ಟದ ಸಮಾವೇಶ. ಮಿಥಿಕ್ ಸೊಸೈಟಿ, ಬೆಂಗಳೂರು. ಬೆಳಿಗ್ಗೆ 11 ಗಂಟೆಗೆ
- **ಏಪ್ರಿಲ್ 14, 2005**
  ಅಂಬೇಡ್ಕರ್ ಜಯಂತಿ, ಜಾತಿ ಪದ್ಧತಿ, ಅಸ್ಪೃಶ್ಯತೆ ವಿರುದ್ಧ ವಿಚಾರಸಂಕಿರಣ, ಸಮಾವೇಶ. ಕೃಷಿಕೂಲಿಕಾರರ ಸಂಘದ ಕರೆ
- **ಏಪ್ರಿಲ್ 16 ರಿಂದ 18, 2005**
  ಅಂಗನವಾಡಿ ನೌಕರರ ಸಂಘ(ಸಿಐಟಿಯು)ದ ರಾಜ್ಯ ಸಮ್ಮೇಳನ, ಗುಲ್ಬರ್ಗಾ.
- **ಏಪ್ರಿಲ್ 24-25, 2005**
  ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಕಾರ್ಯಕಾರಿಣಿ ಸಭೆ, ಬೆಂಗಳೂರಿನಲ್ಲಿ. 25 ರಂದು ಸಂಜೆ ಸರ್ಕಾರಿ ನೌಕರರ ಬೃಹತ್ ರ್‍ಯಾಲಿ
- **ಮೇ 1, 2005**
  ರಾಜ್ಯದೆಲ್ಲೆಡೆ ಮೇ ದಿನಾಚರಣೆ

ಕರ್ನಾಟಕದಲ್ಲೊಂದು ರಾಜಕೀಯ ಕಂಪನ

ಸಾಕಷ್ಟು ಪ್ರಚಾರದೊಂದಿಗೆ, ಇತ್ತೀಚಿಗೆ ಎರಡು ರಾಜಕೀಯ ಪಕ್ಷಗಳು ಹುಟ್ಟಿಕೊಂಡಿರುವುದು ರಾಜ್ಯದ ರಾಜಕೀಯ ವಲಯದಲ್ಲಿ ಮೆಲ್ಲನೆಯ ಕಂಪನವನ್ನು ಉಂಟುಮಾಡಿದೆ. ಅವುಗಳಲ್ಲಿ ಒಂದು ಸಮಾಜವಾದವನ್ನು ಉಸಿರಾಗಿಸಿಕೊಳ್ಳುವ ಗುರಿಯನ್ನು ಘೋಷಿಸಿಕೊಂಡಿದ್ದರೆ, ಇನ್ನೊಂದು 'ಸಮಾಜವಾದಿ' ಎಂದು ಹೆಸರಿಸಿಕೊಂಡಿದೆ.



'ಸರ್ವೋದಯ ಕರ್ನಾಟಕ'ಕ್ಕಾಗಿ ರೈತರು ಮತ್ತು ದಲಿತರು ಒಟ್ಟಿಗೆ ಹೆಜ್ಜೆ ಹಾಕಲು ನಿಜವಾಗಿಯೂ ಸಾಧ್ಯವಾದರೆ, ಗ್ರಾಮೀಣ ಕರ್ನಾಟಕದಲ್ಲಿ ಒಂದು ಆರೋಗ್ಯಕರ ಸಂಚಲನೆ ಮೂಡುವುದು ಖಂಡಿತ. ರೈತರು ಮತ್ತು ಹೆಚ್ಚಾಗಿ ಕೃಷಿ ಕೂಲಿಕಾರರೇ ಆಗಿರುವ ದಲಿತರು ಎರಡು ಪ್ರಮುಖ ಗ್ರಾಮೀಣ ಜನವಿಭಾಗಗಳು. ಕೃಷಿಯಲ್ಲಿ ಪರಸ್ಪರ ಅವಲಂಭಿತರಾಗಿದ್ದರೂ ಅವರ ನಡುವೆ ಶತಮಾನಗಳ ಆಚೆಯಿಂದ ಬೆಳೆದು ಬಂದಿದೆ ಕಂದರ. ಈಗ ಜಾಗತೀಕರಣದ ಪ್ರಹಾರವು ಈ ಎರಡೂ ವಿಭಾಗಗಳನ್ನು ತಟ್ಟಿದರೂ ಅವರಿನ್ನೂ ತಮ್ಮ ಸಾಮಾನ್ಯ ಶತ್ರುವಿನ ಚಹರೆಯನ್ನು ಗುರುತಿಸುತ್ತಿಲ್ಲ. ಅಸ್ಪೃಶ್ಯತೆ ಮತ್ತು ಜಾತಿ ದಮನ ಇನ್ನೂ ಮುಂದುವರೆದಿದೆ.

ಕರ್ನಾಟಕದಲ್ಲಿ ಬಹಳ ನಿರೀಕ್ಷೆಯನ್ನು ಹುಟ್ಟು ಹಾಕಿದ ಕರ್ನಾಟಕ ರಾಜ್ಯ ರೈತ ಸಂಘವು ದಲಿತರೇ ಆಗಿರುವ ಕೃಷಿ ಕೂಲಿಕಾರರ ಕೂಲಿಯ ಪ್ರಶ್ನೆ, ಭೂಮಿಯ ಪ್ರಶ್ನೆಯನ್ನು ಎತ್ತಿಕೊಳ್ಳಲೇ ಇಲ್ಲ. ದಲಿತ ಸಂಘರ್ಷ ಸಮಿತಿಯಂತೂ ರೈತರನ್ನು ಶೋಷಿತರೆಂದು ಪರಿಗಣಿಸಲೇ ಇಲ್ಲ. ಈ ನಡುವೆ ರಾಜ್ಯ ರೈತ ಸಂಘವು ಸೈದ್ಧಾಂತಿಕ ಖಚಿತತೆಯ ಕೊರತೆಯಿಂದಾಗಿ ಎರಡು ಹೋಳಾಗಿ, ಆ ಎರಡು ಬಣಗಳು ಪರಸ್ಪರ ಕತ್ತಿ ಮಸಿಯುತ್ತಾ ರೈತರ ವಿಶ್ವಾಸ ಕಳೆದುಕೊಂಡು ದಯನೀಯ ಸ್ಥಿತಿ ತಲುಪಿದ್ದನ್ನು ನೋಡಿದ್ದಾಯಿತು. ಅದರಂತೆಯೇ ದಲಿತ ಸಂಘರ್ಷ ಸಮಿತಿಯು ಅದೆಷ್ಟೋ ಬಣಗಳಾಗಿ ಒಡೆದು ಚೂರು ಚೂರಾಗಿರುವುದು ದಲಿತರಿಗೆ ಅವರ ನಾಯಕರಿಂದಾದ ವಂಚನೆಯ ಪ್ರತೀಕವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯರೈತ ಸಂಘದ ಒಂದು ಬಣ ಮತ್ತು ದಲಿತ ಸಂಘರ್ಷ ಸಮಿತಿಯ ಒಂದು ಬಣ ಕೂಡಿಕೊಂಡು ಒಂದು ರಾಜಕೀಯ ಪಕ್ಷವಾಗಲು ಹೊರಟಿರುವುದನ್ನು ರಾಜ್ಯದ ಎಲ್ಲ ಪ್ರಗತಿಪರರು ಸ್ವಾಗತಿಸಿದ್ದಾರೆ.

ಪರ್ಯಾಯ ರಾಜಕೀಯದ ಹುಡುಕಾಟದೊಂದಿಗೆ ರಾಜ್ಯರೈತಸಂಘದ ಒಂದು ಬಣ ಮತ್ತು ದಲಿತ ಸಂಘರ್ಷ ಸಮಿತಿಯ ಒಂದು ಬಣ ಪರಸ್ಪರ ಒಗ್ಗೂಡಲು ಸಾಧ್ಯವಾಗುವುದಾದರೆ ರೈತ ಸಂಘದ ಎರಡ್ರ ಬಣಗಳು ಪರಸ್ಪರ ಕೈಜೋಡಿಸಿಕೊಳ್ಳಲು ಸಾಧ್ಯವಾಗಬೇಕು ಎಂದು ಬಯಸುವುದು ಸಹಜವಾಗಿದೆ. ಕೇವಲ ನಾಯಕರ ವೈಯಕ್ತಿಕ ಪ್ರತಿಷ್ಠೆಯಿಂದಾಗಿ ಇಬ್ಭಾಗವಾದ ಈ ಚಳುವಳಿ ಮತ್ತೆ ಒಂದುಗೂಡಿದರೆ ಇದುವರೆಗೆ ರಾಜ್ಯದ ರೈತ ಚಳುವಳಿಗೆ ಆಗಿರುವ ಹಾನಿಯನ್ನು ಸರಿಪಡಿಸಲು ಸಾಧ್ಯವಾಗಬಹುದು. ಅದರಂತೆಯೇ ವಿವಿಧ ಆಮಿಷಗಳಿಗೆ ಒಳಗಾಗಿ ಛಿದ್ರಗೊಂಡ ದಲಿತ ಚಳುವಳಿ ಮತ್ತೆ ಒಂದುಗೂಡಲು ಸಾಧ್ಯವಾದರೆ ಅದನ್ನು ಬಂಡವಾಳಶಾಹಿ ರಾಜಕೀಯ ಪಕ್ಷಗಳನ್ನು ಬಿಟ್ಟು ಬೇರೆ ಯಾರೂ ಸ್ವಾಗತಿಸದೆ ಇರಲಾರರು. ಸರ್ವೋದಯ ಕರ್ನಾಟಕವು ಈ ನಿರೀಕ್ಷೆಗಳನ್ನು ನಿಜವಾಗಿಸುವ ಬೆಳವಣಿಗೆಗಳಿಗೆ ನಾಂದಿಯಾಗಲಿ.

ರಾಜ್ಯ ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ ಒಂದಾಗುವುದನ್ನು ಸ್ವಾಗತಿಸುವುದಕ್ಕೆ ಇನ್ನೊಂದು ಬಲವಾದ ಕಾರಣವಿದೆ. ರಾಜ್ಯ ರೈತಸಂಘದ ಎರಡೂ ಬಣಗಳು ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣವನ್ನು, ವಿಶ್ವಬ್ಯಾಂಕ್, ಐ.ಎಂ.ಎಫ್ ಮತ್ತು ವಿಶ್ವ ವಾಣಿಜ್ಯ ಸಂಘಟನೆಯ ನೀತಿಗಳನ್ನು ಬಲವಾಗಿ ವಿರೋಧಿಸುತ್ತಾ ಬಂದಿವೆ. ಅದೇ ಸಮಯದಲ್ಲಿ ಕೋಮುವಾದ ನಮ್ಮ ಜನರ ಪ್ರಮುಖ ಶತ್ರು ಎಂದು ಪರಿಗಣಿಸಿವೆ. ದಲಿತ ಸಂಘರ್ಷ ಸಮಿತಿಯ ಮುಖ್ಯ ಬಣಗಳು ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣವನ್ನು ಹಾಗೂ ಕೋಮುವಾದಿ ಶಕ್ತಿಗಳನ್ನು ವಿರೋಧಿಸುವಲ್ಲಿ ಹಿಂದೆ ಬಿದ್ದಿಲ್ಲ. ಈ ದ್ವಿಮುಖಿ ಹೋರಾಟವನ್ನು ಮುನ್ನಡೆಸುವುದು, ತೀವ್ರಗೊಳಿಸುವುದು ಮುಂದಿನ ದೊಡ್ಡ ಸವಾಲು ಆಗಿರುವುದರಿಂದ ರೈತಸಂಘ ಮತ್ತು ದಲಿತ ಸಂಘರ್ಷ 'ಸಮಿತಿಯ ಎರಡು ಬಣಗಳು ಒಂದಾಗುವ ತೀರ್ಮಾನ ಸ್ವಾಗತಾರ್ಹವಾಗುತ್ತದೆ.


ನಿತ್ಯಾನಂದಸ್ವಾಮಿ

ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ಕೂಡಿ ಕೆಲಸ ಮಾಡುವ ಆಶಯವನ್ನು ಸರ್ವೋದಯ ಕರ್ನಾಟಕ ವ್ಯಕ್ತಪಡಿಸಿರುವುದು ಸ್ವಾಗತಾರ್ಹವಾಗಿದೆ. ಕಮ್ಯೂನಿಸ್ಟರು ಸ್ವಾತಂತ್ರ್ಯಪೂರ್ವದ ದಿನಗಳಿಂದಲೂ ರಾಜ್ಯದಲ್ಲಿ ರೈತರನ್ನು, ಗೇಣಿದಾರರನ್ನು, ದಲಿತರೇ ಆಗಿರುವ ಕೃಷಿ ಕೂಲಿಕಾರರನ್ನು ಸಂಘಟಿಸುತ್ತಾ ಬಂದಿದ್ದಾರೆ. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿ ನಿರೀಕ್ಷಿಸಿದಷ್ಟು ಬೆಳೆಯದೆ ಇದ್ದರೂ ರಾಜ್ಯದ ಹಲವೆಡೆಗಳಲ್ಲಿ ಬಲಿಷ್ಟವಾದ ನೆಲೆಗಳನ್ನು ಹೊಂದಿದೆ. ಜಾಗತೀಕರಣದ ದಾಳಿಯನ್ನು ಆರಂಭದಿಂದಲೇ ಗುರುತಿಸಿ ಅದರ ವಿರುದ್ಧ ಜನಾಂದೋಲನವನ್ನು ಅವರು ಸಂಘಟಿಸಿದ್ದಾರೆ. ಕೋಮುವಾದಿ ಶಕ್ತಿಗಳ ವಿರುದ್ಧ ರಾಜಿ ಇಲ್ಲದ ಹೋರಾಟ ನಡೆಸಿದ್ದಾರೆ. ಕಮ್ಯುನಿಸ್ಟ್ ಪಕ್ಷಗಳನ್ನು ಕಡೆಗಣಿಸಿ ರಾಜ್ಯದಲ್ಲಿ ಪರ್ಯಾಯ ರಾಜಕೀಯದ ಪ್ರಸ್ತಾವಕ್ಕೆ ಅರ್ಥವಿಲದು. ಭಾರತದ ಸಮಾಜವಾದಿಗಳು ಬೆಳೆಸಿಕೊಂಡು ಬಂದ ಕಮ್ಯೂನಿಸ್ಟ್ ದ್ವೇಷದಿಂದ ದೇಶದ ಎಡ ಚಳುವಳಿಗೆ ಸಾಕಷ್ಟು ಹಾನಿಯಾಗಿದೆ. ಅದರಿಂದ ಅವರಿಗೂ ಯಾವ ಪ್ರಯೋಜನವಾಗಿಲ್ಲ. ಬದಲಾಗಿ ಸೈದ್ಧಾಂತಿಕ ಗೊಂದಲಕ್ಕೆ ಬಲಿಯಾದ ಲೋಹಿಯಾ ಸಮಾಜವಾದಿ ಚಳುವಳಿ ಛಿದ್ರ ಛಿದ್ರವಾಗಿದೆ. ಜಾರ್ಜ್ ಫರ್ನಾಂಡೀಸ್‌ರಂತಹ ಸಮಾಜವಾದಿಗಳು ಸಮಯಸಾಧಕ ರಾಜಕೀಯದ ಭಾಗವಾಗಿರುವುದು ಒಂದು ದೊಡ್ಡ ದುರಂತವಾಗಿದೆ. ಆದರೆ ಕಮ್ಯೂನಿಸ್ಟರು ಸೈದ್ಧಾಂತಿಕ ಸ್ಪಷ್ಟತೆಯನ್ನು ಉಳಿಸಿಕೊಂಡು, ದೇಶದ ಕೆಲವು ಭಾಗಗಳಲ್ಲಾದರೂ ಜನತೆಯ ವಿಶ್ವಾಸವನ್ನು ಗಳಿಸಿಕೊಂಡು ದೇಶದ ರಾಜಕೀಯದಲ್ಲಿ ಶೋಷಿತ ಜನರ ಪರವಾಗಿ ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸುವಂತಾಗಿದೆ.

ಇದೇ ಸಂದರ್ಭದಲ್ಲಿ ಸರ್ವೋದಯ ಕರ್ನಾಟಕವು ಬಿ.ಎಸ್.ಪಿ.ಯನ್ನು 'ಸಹಮನಸ್ಕ' ಪಕ್ಷ ಎಂದು ಗುರುತಿಸಲು ಹೊರಟಿರುವುದು ಆಶ್ಚರ್ಯವನ್ನು ಉಂಟು ಮಾಡುತ್ತದೆ. ಕರ್ನಾಟಕದ ಬಿಎಸ್‌ಪಿಯನ್ನು ಅರ್ಥಮಾಡಿಕೊಳ್ಳಲು ಇನ್ನೂ ಸ್ವಲ್ಪಕಾಲ ಕಾಯಬೇಕಾಗಬಹುದು. ಆದರೆ ಉತ್ತರ ಪ್ರದೇಶದಲ್ಲಿನ ಅದರ ಅವತಾರ ನೋಡುವಾಗ ಅದನ್ನು 'ಸಹಮನಸ್ಕ' ಪಕ್ಷ ಎಂದು ಅಪ್ಪಿಕೊಳ್ಳಲು ಹೊರಟಿರುವ 'ಸರ್ವೋದಯ ಕರ್ನಾಟಕ'ದ ಬಗ್ಗೆ ಅನುಮಾನ ಉಂಟಾಗುತ್ತದೆ. ಉತ್ತರ ಪ್ರದೇಶದ ಬಿ.ಎಸ್.ಪಿ. ಅನುಸರಿಸುತ್ತಾ ಬಂದಿರುವ ಅವಕಾಶವಾದಿ ರಾಜಕೀಯದಿಂದಾಗಿ ದಲಿತರಿಗೆ ಆದಷ್ಟು ವಂಚನೆ ಬೇರೆ ಯಾರಿಗೂ ಆಗಿಲ್ಲ. ಹೇಗಾದರೂ ಮಾಡಿ ಅಧಿಕಾರಕ್ಕೆ ಬರಬೇಕೆನ್ನುವ ಅದರ ಧೋರಣೆಯಿಂದಾಗಿ ಉತ್ತರ ಪ್ರದೇಶದಲ್ಲಿ ಕೋಮುವಾದಿ ಬಿಜೆಪಿಗೆ ಒಂದು ನೆಲೆಯನ್ನು ಅದು ಒದಗಿಸಿತು. ಈಗ ದಲಿತರ ವಿಶ್ವಾಸ ಕಳೆದುಕೊಂಡ ಬಿಎಸ್‌ಪಿ ಮನುವಾದಿ ಬ್ರಾಹ್ಮಣರನ್ನು ಓಲೈಸಲು ಹೊರಟಿದೆ.

ಕೇವಲ ಗುರಿ, ಘೋಷಣೆಗಳಿಂದ ಪರ್ಯಾಯ ರಾಜಕೀಯ ಬೆಳೆದುಬರಲಾರದು. ಬಂಡವಾಳಶಾಹಿ - ಭೂಮಾಲಕ ಆಳುವ ವರ್ಗಗಳ ನೀತಿಗಳಿಗೆ ಪರ್ಯಾಯವಾದ ನೀತಿಗಳಿಗೋಸ್ಕರ ನಡೆಸಬೇಕಾದ ವಿಶಾಲ ಜನ ಚಳುವಳಿಯಿಂದ ಮಾತ್ರ ಪರ್ಯಾಯ ರಾಜಕೀಯ ಮೂಡಿಬರಲು ಸಾಧ್ಯ. ರಾಜ್ಯದ ಕೃಷಿ, ಕೈಗಾರಿಕೆ, ಶಿಕ್ಷಣ, ಸಂಸ್ಕೃತಿ, ಆಡಳಿತ ಮೊದಲಾದ ಎಲ್ಲಾ ರಂಗಗಳಿಗೆ ಸಂಬಂಧಪಟ್ಟಂತೆ ಪರ್ಯಾಯ ನೀತಿಗಳನ್ನು ಜನರೆದುರಿಗಿಟ್ಟು ಅವುಗಳಿಗಾಗಿ ಹೋರಾಡಲು ಸಿದ್ಧವಿರುವ ವ್ಯಕ್ತಿಗಳನ್ನು ಮತ್ತು ಶಕ್ತಿಗಳನ್ನು 'ಸಹಮನಸ್ಕ'ರೆಂದು ಗುರುತಿಸಿಕೊಳ್ಳಬಹುದು. ಇಂದಿನ ಕೊಳಕು ರಾಜಕಾರಣಕ್ಕೆ ಮೂಕ ಪ್ರೇಕ್ಷಕರಾಗಿ ಉಳಿದಿರುವ ಅನೇಕ ಜನ ಆಗ ಪರ್ಯಾಯ ರಾಜಕಾರಣವನ್ನು ಬೆಂಬಲಿಸಲು ಮುಂದೆ ಬರುವವರು.

ಲೋಹಿಯಾ, ಗೋಪಾಲಗೌಡರ ಸಮಾಜವಾದಿ ಪಾರ್ಟಿಯ ಮೂಲಕ ರಾಜಕೀಯ ಪ್ರವೇಶಿಸಿದ ಬಂಗಾರಪ್ಪ ಈಗ ಬಿಜೆಪಿ ತೊರೆದು ಮುಲಾಯಂ ಸಿಂಗ್ ಯಾದವ್ ನೇತೃತ್ವದ ಸಮಾಜವಾದಿ ಪಕ್ಷಕ್ಕೆ ಸೇರಿಕೊಂಡಿದ್ದಾರೆ. ಬಂಗಾರಪ್ಪನವರು ಪಕ್ಷಗಳನ್ನು ಕಟ್ಟಿದ್ದು, ಪಕ್ಷಗಳನ್ನು ಬಿಟ್ಟಿರುವುದನ್ನು ಕಳೆದ ನಾಲ್ಕು ದಶಕಗಳಿಂದ ನೋಡುತ್ತಾ ಬಂದಿರುವ ಕರ್ನಾಟಕದ ಜನತೆ ಅವರ



ಈ ಹೊಸ ಪ್ರಯೋಗದ ಬಗ್ಗೆ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ರಾಜ್ಯದ ಜನರ ನಾಡಿ ಮಿಡಿತವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲ ಬಿಬ್ಬ ರಾಜಕಾರಣಿ ಸಮಾಜವಾದದಲ್ಲಿ ಅವರಿಗೆಷ್ಟು ನಂಬಿಕೆ ಇದೆ ಎಂಬುದು ಬೇರೆ ಪ್ರಶ್ನೆ. ಆದರೆ ಅವರ ಮಾತುಗಳು ಜನರ ನಡುವೆ ಕ್ಲಿಕ್ ಆಗುತ್ತವೆ. ಅವರು ಯಾವ ಪಕ್ಷ ಬಿಟ್ಟು ಯಾವ ಪಕ್ಷ ಸೇರಿದರೂ ಅವರನ್ನು ಹಿಂಬಾಲಿಸುವ ಜನ ಕರ್ನಾಟಕದಲ್ಲಿ ಇದ್ದಾರೆ ಎಂಬುದು ಮಾರ್ಚ್ 25 ರಂದು ಪಕ್ಷದ ಉದ್ಘಾಟನೆಗಾಗಿ ಬೆಂಗಳೂರು ಅರಮನೆ ಮೈದಾನದಲ್ಲಿ ಸೇರಿದ ಜನಸ್ತೋಮವೇ ಸಾಕ್ಷಿ.

'ನಾನು ಸುಮ್ಮನೆ ಬಿಡುವವನಲ್ಲ; ಬಂಗಾರಪ್ಪ ಫೈಟರ್', ಅನ್ನೋದನ್ನು ಮತ್ತೆ ತೋರಿಸ್ತೀನಿ. ಬಿಜೆಪಿಯ ತೊಡೆ ಕಡಿದು, ಕಾಂಗ್ರೆಸ್‌ನ ಸೊಂಟ ಮುರಿಯುತ್ತೇನೆ' ಎಂದು ಬಂಗಾರಪ್ಪ ಘರ್ಜಿಸಿದ್ದಾರೆ. ಬಂಗಾರಪ್ಪ ಬಿಜೆಪಿಯಿಂದ ಹೊರಬಂದು ಸಮಾಜವಾದಿ ಪಕ್ಷ ಕಟ್ಟುವುದರಿಂದ ಯಾರಿಗೆ ಎಷ್ಟು ನಷ್ಟವಾಗಲಿದೆ ಎಂಬುದನ್ನು ಕಾದುನೋಡಬೇಕು. ಆದರೆ ಬಂಗಾರಪ್ಪ ಹೊಸ ಪಕ್ಷವೊಂದನ್ನು ಹುಟ್ಟು ಹಾಕಿದಾಗಲೆಲ್ಲಾ ಕಾಂಗ್ರೆಸ್‌ಗೆ ಹೆಚ್ಚು ಹಾನಿಯಾಗಿರುವುದನ್ನು ಜನ ನೆನಪಿಸಿಕೊಳ್ಳುತ್ತಾರೆ. ಈ ಬಾರಿಯೂ ಬಿಜೆಪಿಗಿಂತಲೂ ಕಾಂಗ್ರೆಸ್ಸಿಗೆ ಹೆಚ್ಚು ಹಾನಿಯಾಗಲಿದೆ ಎಂಬ ಲೆಕ್ಕಾಚಾರ ಕೇಳಿಬರುತ್ತಿದೆ. ಬಂಗಾರಪ್ಪ ಬಿಜೆಪಿಗೆ ಹೋದದ್ದು ಬಿಜೆಪಿಗೆ ಲಾಭವಾಗಿತ್ತು. ಅಷ್ಟರಮಟ್ಟಿಗೆ ಬಿಜೆಪಿಗೆ ಈಗ ಹಾನಿ ಆಗಲಿದೆ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಹೆಚ್ಚು ಹೆಚ್ಚು ಬಲಹೀನವಾಗುವುದು ಅಪಾಯಕಾರಿಯಾಗಿದೆ ಎಂದೇ ಹೇಳಬೇಕಾಗುತ್ತದೆ. ಕಾಂಗ್ರೆಸ್ ಮೂಲೆಗುಂಪಾಗಿರುವುದರಿಂದ ಬಿಜೆಪಿಗೆ ಲಾಭವಾಗುವುದು ಹೆಚ್ಚು ಅಪಾಯಕಾರಿ.

ಕೋಮುವಾದದ ಹೊರತಾಗಿ ಬಿಜೆಪಿಗೂ ಕಾಂಗ್ರೆಸ್ಸಿಗೂ ಅಂಥಾ ಯಾವ ವ್ಯತ್ಯಾಸಗಳಿಲ್ಲ ಎಂಬುದು ಹೆಚ್ಚೆಚ್ಚು ಸಾಬೀತಾಗುತ್ತಿರುವಾಗ 'ತೃತೀಯ ರಂಗ'ದ ಪ್ರಸ್ತಾವಕ್ಕೆ ಮತ್ತೆ ಚಾಲನೆ ಸಿಗತೊಡಗಿದೆ. ಈ ದೃಷ್ಟಿಯಿಂದ ಬಂಗಾರಪ್ಪ ಅವರ ಸಮಾಜವಾದಿ ಪಕ್ಷದ ಬೆಳವಣಿಗೆಯನ್ನು ಕಾದು ನೋಡಬೇಕಾಗಿದೆ. ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಹಾಗೂ ಹೊಸದಾಗಿ ಹುಟ್ಟಿಕೊಂಡಿರುವ ಸರ್ವೋದಯ ಕರ್ನಾಟಕ ಪಕ್ಷದೊಂದಿಗೆ ಕೂಡಿ ಕೆಲಸ ಮಾಡುವ ಇಚ್ಛೆಯನ್ನು ಬಂಗಾರಪ್ಪ ವ್ಯಕ್ತಪಡಿಸಿರುವುದು ಆ ದೃಷ್ಟಿಯಿಂದ ಸ್ವಾಗತಾರ್ಹವಾಗಿದೆ. ಆದರೆ ರಾಜ್ಯದ ಜನತೆಯನ್ನು ಕಾಡುತ್ತಿರುವ ಮುಖ್ಯ ಪ್ರಶ್ನೆಗಳ ಬಗ್ಗೆ ಬಂಗಾರಪ್ಪ ಅವರ ಸಮಾಜವಾದಿ ಪಕ್ಷದ ನಿಲುವೆ ಹೇಗಿರುತ್ತದೆ ಎಂಬುದರ ಆಧಾರದಲ್ಲಿ ರಾಜ್ಯದಲ್ಲಿ ತೃತೀಯ ರಂಗದ ಬೆಳವಣಿಗೆ ಅವಲಂಬಿಸಿರುತ್ತದೆ.

ರಾಜ್ಯದಲ್ಲಿ ಬಿಜೆಪಿಯಂತೂ ಸಂಘ ಪರಿವಾರ ಎಂಬ ಫ್ಯಾಸಿಸ್ಟ್ ಪಡೆಯನ್ನು ಕಟ್ಟಿಕೊಂಡು ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡಲು ತಲೆಕೆಟ್ಟು ನಿಂತಿದೆ. ಆಂತರಿಕವಾಗಿ ಅದು ಬಿಕ್ಕಟ್ಟು ಗ್ರಸ್ತವಾಗಿದ್ದರೂ ಕೋಮು ವಿಷ ಜ್ವಾಲೆ ಹಬ್ಬಿಸುವ ವಿಷಯದಲ್ಲಿ ಅದು ಒಗ್ಗಟ್ಟಾಗಿದೆ. ಸಮ್ಮಿಶ್ರ ಸರ್ಕಾರದಲ್ಲಿರುವ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವಿನ ಕಿತ್ತಾಟ ಬಿಜೆಪಿಗೆ ನೆರವಾಗುತ್ತಿದೆ. ಕರಾವಳಿ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರ ಮೇಲೆ ಸಂಘ ಪರಿವಾರದ ಗೂಂಡಾಗಳ ದಾಳಿಗಳು ಇಷ್ಟೊಂದು ತೀವ್ರವಾಗುತ್ತಿರುವಾಗಲೂ ಅಲ್ಲಿಯವರೇ ಆಗಿರುವ ಕೆಪಿಸಿಸಿ ಅಧ್ಯಕ್ಷ ಜನಾರ್ಧನ ಪೂಜಾರಿ ಬಾಯಿ ಮುಚ್ಚಿಕೊಂಡಿದ್ದಾರೆ. 'ಜಾತ್ಯತೀತ' ಎಂದು ಬೋರ್ಡ್ ಹಾಕಿಕೊಂಡಿರುವ ದೇವೇಗೌಡರು ಸಾಧು ಸಂತರ ಪಾದಪೂಜೆಯಲ್ಲಿ ಕಾಲ ಕಳೆಯುತ್ತಾ ಆಗೊಮ್ಮೆ ಈಗೊಮ್ಮೆ ಕಾಂಗ್ರೆಸ್ ವಿರುದ್ಧ ಶಬ್ದ ಮಾಡುತ್ತಾರೆಯೇ ಹೊರತು ಬಿಜೆಪಿ ವಿರುದ್ಧ ಮಾತೆತ್ತುವುದಿಲ್ಲ. ಪರ್ಯಾಯ ರಾಜಕೀಯವನ್ನು ಹುಡುಕುತ್ತಿರುವವರಿಗೆ ರಾಜ್ಯದಲ್ಲಿ ಬೆಳೆಯುತ್ತಿರುವ ಕೋಮುವಾದ ಒಂದು ಮುಖ್ಯ ಸವಾಲು ಆಗಿದೆ.

ಅಕ್ಷರದಾಸೋಹ ಕಾರ್ಯಕರ್ತೆಯರ ಪ್ರಥಮ ಸಮ್ಮೇಳನ

"ಬಿಸಿ ಅಡುಗೆ ಯೋಜನೆಯನ್ನು ಖಾಸಗೀಯವರಿಗೆ ವಹಿಸುವುದು ಬೇಡ", "ನಮಗೂ ಬದುಕಲು ಬಿಡಿ"- ಈ ಘೋಷಣೆಗಳೊಂದಿಗೆ ಜಿಲ್ಲೆಯ ಸಹಸ್ರಾರು ಬಿಸಿ ಅಡುಗೆಯ ಕಾರ್ಯಕರ್ತೆಯರು ಬೆಳಗಾವಿಯಲ್ಲಿ ಮೆರವಣಿಗೆ ನಡೆಸಿ, ನಾಗನೂರು ಮಠದ ಸಭಾಂಗಣದಲ್ಲಿ ನಡೆದ ಪ್ರಥಮ ಸಮ್ಮೇಳನದಲ್ಲಿ ಪಾಲ್ಗೊಂಡರು. ಮಧ್ಯಾಹ್ನದ ಉರಿಬಿಸಿಲಲ್ಲಿ ಕೂಸುಗಳನ್ನು ಬಗಲಲ್ಲಿ ಕಟ್ಟಿಕೊಂಡು ಖಾಸಗೀಕರಣದ ವಿರುದ್ಧ ಭಾರೀ ಆಕ್ರೋಶ ವ್ಯಕ್ತಪಡಿಸಿ ಕಾರ್ಯಕರ್ತೆಯರು ನಡೆಸಿದ ಮೆರವಣಿಗೆ ಬೃಹತ್ ಸ್ವರೂಪದ್ದಾಗಿತ್ತು. ನಗರದಲ್ಲಿ ಇತ್ತೀಚೆಗೆ ಈ ಸ್ವರೂಪದ ಮೆರವಣಿಗೆ ಕಂಡಿರಲಿಲ್ಲ.

ಜಿಲ್ಲೆಯಲ್ಲಿ 2999 ಪ್ರಾಥಮ್ಮಿಕ ಶಾಲೆಗಳಿದ್ದು, 2348 ಬಿಸಿ ಅಡುಗೆ ಕೇಂದ್ರಗಳಿವೆ 6823 ಕಾರ್ಯಕರ್ತೆಯರು ಜಿಲ್ಲೆಯ ಸಹಸ್ರಾರು ಪುಟ್ಟ ಮಕ್ಕಳಿಗೆ ಉಣಬಡಿಸುವ ಕೆಲಸದಲ್ಲಿ ತೊಡಗಿದ್ದಾರೆ. ಅತ್ಯಂತ ಕಡಿಮೆ ಸಂಬಳ (3 ಶ್ರೇಣಿ) ರೂ.650/-, ರೂ.450/-, ರೂ.300/-ದಲ್ಲಿ ಯಾವುದೇ ಸೇವಾ ಸೌಲಭ್ಯಗಳಿಲ್ಲದೇ ಹತ್ತು ತಿಂಗಳ ಅವಧಿಗೆ ಮಾತ್ರ ನೇಮಕಗೊಂಡು ಕೆಲಸ ನಿರ್ವಹಿಸುತ್ತಿದ್ದಾರೆ.

ಇತ್ತೀಚೆಗೆ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಸಂಘಟಿತರಾಗಿರುವ ಈ ಕಾರ್ಯಕರ್ತೆಯರು ದಿನಾಂಕ 27 ರಂದು ಬೆಳಗಾವಿಯಲ್ಲಿ ಜಿಲ್ಲಾ ಸಮ್ಮೇಳನ ನಡೆಸಿದ್ದಾರೆ.

ಸಮ್ಮೇಳನ ಉದ್ಘಾಟಿಸಿದ ಹಿರಿಯ ಕಾರ್ಮಿಕ ಮುಖಂಡರಾದ ನಿತ್ಯಾನಂದ ಸ್ವಾಮಿಯವರು ಮಾತನಾಡಿ ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಕಾಳಜಿಯಿಂದ ಆರಂಭಿಸಿರುವ ಈ ಯೋಜನೆಯಿಂದ ಸರ್ಕಾರ ವಿಮುಖವಾಗಬಾರದೆಂದು ತಿಳಿಸಿದರು. ಗ್ರಾಮೀಣ ಭಾಗದ ಬಡ ಮಹಿಳೆಯರಿಗೆ ಆಧಾರವಾಗಿರುವ ಯೋಜನೆಯನ್ನು ಖಾಸಗೀಯವರಿಗೆ ನೀಡಿ ಅಸಹಾಯಕ ಮಹಿಳೆಯರನ್ನು ಬೀದಿಗೆ ತಳ್ಳಬಾರದೆಂದು ಎಚ್ಚರಿಸಿದರು.


ಸಮ್ಮೇಳನದ ಪ್ರಯುಕ್ತ ಬೃಹತ್ ರ‍್ಯಾಲಿ

ಪ್ರಾಸ್ತಾವಿಕವಾಗಿ ಕಾರ್ಮಿಕ ಮುಖಂಡ ವಿ.ಪಿ.ಕುಲಕರ್ಣಿಯವರು ಮಾತನಾಡಿ ಬೆಳಗಾವಿ ನಗರದಲ್ಲಿ ಏಪ್ರಿಲ್ 1 ರಿಂದ ಸಮೃದ್ಧಿ ಸೇವಾ ಸಂಸ್ಥೆ ಎಂಬ ಎನ್.ಜಿ.ಓ.ಗೆ ಅಡುಗೆ ಕೆಲಸ ವಹಿಸಿರುವ ಬೆಳಗಾವಿ ಡಿ.ಸಿ.ಯವರ ಆದೇಶದ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಜಿಲ್ಲಾಧಿಕಾರಿಗಳು ಆದೇಶ ವಾಪಸ್ ಪಡೆಯದಿದ್ದಲ್ಲಿ ತೀವ್ರ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ಜಿಲ್ಲಾಧಿಕಾರಿಗಳ ಪರವಾಗಿ ಸಮ್ಮೇಳನಕ್ಕೆ ಶುಭ ಕೋರಲು ಆಗಮಿಸಿದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಚನ್ನಬಸಪ್ಪಾ ಕೊಡ್ಲಿಯವರು ಮಾತನಾಡಿ ಎಲ್ಲಾ ತಾಯಂದಿರ ಅಳಲನ್ನು ಜಿಲ್ಲಾಧಿಕಾರಿಗಳಿಗೆ ಮುಟ್ಟಿಸುವ ಭರವಸೆ ನೀಡಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ನಿವೃತ್ತ ಕಾರ್ಮಿಕಾಧಿಕಾರಿಗಳು ಹಾಗೂ ಸಿ.ಐ.ಟಿ.ಯು. ಜಿಲ್ಲಾಧ್ಯಕ್ಷರಾದ ಸಿ.ಎ.ಖರಾಡೆಯವರು ವಹಿಸಿದ್ದರು.

ವಿಮಾ ನೌಕರರ, ಅಂಗನವಾಡಿ ನೌಕರರ, ಔಷಧಿ ವಿತರಕರ ಸಂಘಗಳ ಮುಖಂಡರು ಸಮ್ಮೇಳನದಲ್ಲಿ ಪಾಲ್ಗೊಂಡು ಶುಭ ಕೋರಿದರು.

ಜಿಲ್ಲಾ ಸಮಿತಿ ಆಯ್ಕೆ : ಸಮ್ಮೇಳನದಲ್ಲಿ ಜಿಲ್ಲಾ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು, ಅಧ್ಯಕ್ಷರಾಗಿ ವ್ಹಿ.ಪಿ.ಕುಲಕರ್ಣಿ; ಉಪಾಧ್ಯಕ್ಷರಾಗಿ ಎಲ್.ಎಸ್.ನಾಯಕ, ಮತ್ತು ಇತರ ಒಂಭತ್ತು ಜನ; ಕಾರ್ಯದರ್ಶಿಯಾಗಿ ಗೈಬು ಎಂ.ಜೈನೇಖಾನ; ಸಹಕಾರ್ಯದರ್ಶಿಯಾಗಿ ಚಂದ್ರಕಾಂತ ಹಲಗಲಿ: ಮತ್ತು ಇತರ ಒಂಭತ್ತು ಜನ; ಖಜಾಂಚಿಯಾಗಿ ದುರ್ಗಾರ್ಘುರವಿ ಮತ್ತು ನಾಗಪ್ಪಾ ಸಂಗೊಳ್ಳಿ, ಇವರೊಟ್ಟಿಗೆ 27 ಸದಸ್ಯರ ಕಾರ್ಯಕಾರಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆ.

ನಾಗನೂರು ಕಲ್ಯಾಮಂಟಪದಲ್ಲಿ ಕಾಲಿಡಲೂ ಸ್ಥಳಾವಕಾಶವಿಲ್ಲದಂತೆ ಈ ಸಮ್ಮೇಳನಕ್ಕೆ ಜಿಲ್ಲೆಯಿಂದ ಸುಮಾರು ಮೂರುವರೆ ಸಾವಿರ ಮಹಿಳಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು. ○

ಯುದ್ಧ ಬೇಡ ಶಾಂತಿ ಬೇಕು - ವಿಜಾಪುರದಲ್ಲಿ ಯುದ್ಧ ವಿರೋಧಿ ದಿನಾಚರಣೆ

ಯುದ್ಧದಿಂದ ನಾಶವೇ ಹೊರತು ಅಭಿವೃದ್ಧಿ ಹೊಂದಲು ಸಾಧ್ಯವಿಲ್ಲವೆಂದು ವ್ಹಿ.ಎಂ. ಕಟ್ಟೆ ವಕೀಲರು ಹೇಳಿದರು. ಮಾರ್ಚ್ 21 ರಂದು ಬಿಜಾಪುರ ನಗರದಲ್ಲಿ ಸಿಐಟಿಯು ಕಾರ್ಮಿಕ ಸಂಘಟನೆಯು ಆಯೋಜಿಸಿದ್ದು ಯುದ್ಧವಿರೋಧಿ ದಿನಾಚರಣೆಯ ಅಂಗವಾಗಿ ಅತಿಥಿಗಳಾಗಿ ಮಾತನಾಡುತ್ತಿದ್ದ ಅವರು ಈವರೆಗೆ ಒಂದನೇ ಮಹಾ ಯುದ್ಧ 2ನೆ ಮಹಾಯುದ್ಧಗಳು ನಡೆದು ಅಪಾರ ಆಸ್ತಿ-ಪಾಸ್ತಿ ಜನ ಸಾಮಾನ್ಯರ ಪ್ರಾಣಹಾನಿ ಸಂಭವಿಸಿದೆ. ಏನು ಅದರಿಂದ ಸಾಧಿಸಲಾಗಿದೆ ಎಂದು ಪ್ರಶ್ನೆ ಮಾಡಿದರು. ಈ ಯುದ್ಧಗಳಿಗೆ ಕಾರಣರಾದ ಮುಸಲೋನಿ, ಅಡಾಲ್ಪ ಹಿಟ್ಲರ್‌ನಂತ ಮಹಾತ್ವಾಕಾಂಕ್ಷಿಗಳ ಪರಿಸ್ಥಿತಿ ಏನಾಯಿತು. ತಾವು ಸಾಯುವುದಲ್ಲದೆ ನಿರಪರಾದಿ ಜನಸಾಮಾನ್ಯರನ್ನು ಸಾಯಿಸಿದರು. ಮೂರನೇ ಮಹಾಯುದ್ಧದಲ್ಲಿ ಯಾವ, ಯಾವ ಆಯುಧ ಬಳಸುತ್ತಾರೆ ಗೊತ್ತಿಲ್ಲ. ಆದರೆ, ನಾಲ್ಕನೇ ಮಹಾಯುದ್ಧ ನಡೆದರೆ ಕಲ್ಲು ಬಡಿಗೆಗಳಿಂದ ನಡೆಯುತ್ತದೆ ಎಂದು ಐನ್‌ಸ್ಟೀನರು ಹೇಳಿದ್ದಾರೆ ಎಂದು ಉದಾಹರಿಸಿ ಹೇಳಿದರು.

ಅತಿಥಿಗಳಾದ ಅಖಿಲಭಾರತ ಗ್ರಾಮೀಣ ಬ್ಯಾಂಕ್ ನೌಕರರ ಸಂಘದ ಕೇಂದ್ರಸಮಿತಿ ಸಹ ಕಾರ್ಯದರ್ಶಿಗಳಾದ ಜಿ.ಜಿ.ಗಾಂಧಿಯವರು ಮಾತನಾಡುತ್ತ ರಾಮಾಯಣ, ಮಹಾಭಾರತದ ಯುದ್ಧಗಳು ನಡೆದವು. ರಾಜ-ರಾಜರುಗಳ ನಡುವೆ ಯುದ್ಧ ಬೇಡ ಎಂದು ಅನುಭವಿಗಳು ಹೇಳಿದರು. ಈ ಯುದ್ಧಗಳು ನಡೆದವು. ಆದರೆ, ಅದರ ಪರಿಣಾಮದ ಭೀಕರತೆಯಿಂದ ಅಶೋಕ ಚಕ್ರವರ್ತಿ ಬಾಹುಬಲಿಯಂತವರು, ಸನ್ಯಾಸತ್ವ ಸ್ವೀಕರಿಸಿ ತಮ್ಮ ಜೀವಿತಾವಧಿ ಮುಕ್ತಾಯದವರೆಗೂ ಶಾಂತಿ ಸಂದೇಶಗಳನ್ನು ಸಾರಿದರು.

ಯುದ್ಧ ನಡೆಯುವುದೇ ತಮ್ಮ ಸ್ವಾರ್ಥಕ್ಕಾಗಿ ತಮ್ಮ ಲಾಭಕ್ಕಾಗಿ ಎಂಬುದರಲ್ಲಿ ಎರಡು ಮಾತಿಲ್ಲ ಎಂದರು. ಈ ಯುದ್ಧಗಳನ್ನು ಒಂದು ರೀತಿ ಜನರನ್ನು ನಾಶಮಾಡುತ್ತಿದ್ದರೆ ಡಬ್ಲ್ಯೂ.ಟಿ.ಓ ಪೇಟೆಂಟ್‌ನಂತ ಕಾನೂನುಗಳನ್ನು ತಂದು ಜನರನ್ನು ಇನ್ನೊಂದು ರೀತಿ ಸುಲಿಗೆಗೆ ಒಳಪಡಿಸಿ ಸಾಯಿಸುತ್ತಿದ್ದಾರೆ ಎಂದರು.

ಯುದ್ಧ ಹಾಗೂ ಇಂಥಹ ಜನವಿರೋಧಿ ಕಾನೂನುಗಳನ್ನು ನಮ್ಮ ಸರಕಾರಗಳು ವಿರೋಧ ಮಾಡುವುದೇ ಇಲ್ಲ. ಎಡಪಕ್ಷಗಳು ಮಾತ್ರ ಇಂಥವುಗಳನ್ನು ವಿರೋಧಿ ಕೆಲಸ ಮಾಡುತ್ತಿದೆ. ಇದು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಇನ್ನೊಬ್ಬ ಅತಿಥಿಯಾಗಿದ್ದ ಕೆ.ಬಸಣ್ಣಾ ವಕೀಲರು ಮಾತನಾಡಿ "ಯುದ್ಧದ ಪರಿಣಾಮ ಗಳಿಂದ ಜನಸಾಮಾನ್ಯರ ಬದುಕು ಅಸಹನೀಯವಾಗುತ್ತದೆ ಯಾದ್ದರಿಂದ ಯುದ್ಧ ಯಾವಾಗಲೂ ಬೇಡ ಶಾಂತಿ ಬೇಕು ಎಂದರು.


ರೈತ ಸಂಘದ ಅಧ್ಯಕ್ಷರಾದ ಭೀಮಶಿ ಕಲಾದಗಿಯವರು ಮಾತನಾಡಿ ಅಮೇರಿಕಾ ಮುಂತಾದ ರಾಷ್ಟ್ರಗಳ ಹೈಡ್ರೊಜನ್‌ಬಾಂಬ್, ಅಣುಬಾಂಬ್ ಮುಂತಾದಭ್ಭಯಂಕರ ಬಾಂಬು ಗಳನ್ನು ತಯಾರಿಸಿದ್ದು ಇವುಗಳನ್ನು ಪ್ರಯೋಗಿಸಿದರೆ ಜನರ ಸರ್ವನಾಶವೇ ಆಗುತ್ತದೆಯಾದ್ದರಿಂದ ಈ ಯುದ್ಧಗಳನ್ನು ವಿರೋಧಿಸಲು ಮುಂದಾಗಬೇಕು ಎಂದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಗೇರ ಮಾತನಾಡಿ ಇಡಿ ಜಗತ್ತನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಳ್ಳ ಬೇಕೆಂಬ ದುಷ್ಟ ಸ್ವಾರ್ಥದಿಂದ ಅಮೇರಿಕಾ, ಬ್ರಿಟನ್, ಜರ್ಮನ್, ಜಪಾನದಂತಹ ಸಾಮ್ರಾಜ್ಯಶಾಹಿ ದೇಶಗಳು ಎರಡು ಜಾಗತಿಕ ಮಹಾಯುದ್ಧಗಳು ನಡೆಸಿವೆ ಎಂದರು.

ಸಮೂಹನಾಶಕ ಬಾಂಬುಗಳಿವೆ, ಜೈವಿಕ ಬಾಂಬುಗಳು ಇವೆ ಎಂದು ಕಾರಣ ಮುಂದು ಮಾಡಿದ ಇರಾಕ್ ದೇಶವನ್ನು ಎರಡು ವರ್ಷಗಳಿಂದ ಆಕ್ರಮಿಸಿಕೊಂಡಿದ್ದು ಅಮೇರಿಕಾಕ್ಕೆ ಇಲ್ಲಿಯವರೆಗೆ ಅಲ್ಲಿ ಯಾವುದೇ ಸಮೂಹ ನಾಶಕ ಬಾಂಬುಗಳು ಸಿಕ್ಕಿರುವುದಿಲ್ಲವೆಂದು ಹೇಳಿದರು. ಅಮೇರಿಕಾಕ್ಕೆ ಆದೇಶದ ಪೆಟ್ರೋಲ್ ಬೇಕಾಗಿತ್ತೆ ಹೊರತು ಸಮೂಹನಾಶಕ ಬಾಂಬು ಒಂದು ಕಾರಣವಷ್ಟೆ ಎಂದರು.

ತೃತೀಯ ಜಗತ್ತಿನ ರಾಷ್ಟ್ರಗಳ ತಾನು ಹೇಳುವಂತೆ ಕೇಳುವ ಕೈಕೊಂಡ ಸರಕಾರಗಳನ್ನು ಅಧಿಕಾರಕ್ಕೆ ತರುವ ಸಂಚು ಸದಾ ಮಾಡುತ್ತಿರುತ್ತದೆ. ಈಗ ಅದರ ದೃಷ್ಟಿ ಇರಾಕ್‌ನ, ಕೋರಿಯಾ ದೇಶಗಳ ಮೇಲೆ ಇದೆ. ಯಾವಾಗ ಯುದ್ಧ ಸಾರುತ್ತದೆ ಹೇಳುವಂತೆ ಇಲ್ಲ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ ಸಿಐಟಿಯು ಮುಖಂಡ ವ್ಹಿ.ಎಂ.ಸೊನ್ನದ ಅವರು ಅಧ್ಯಕ್ಷೀಯ ಭಾಷಣ ಮಾಡುತ್ತಾ ಯುದ್ಧವು ನಮ್ಮೆಲ್ಲರ ಸರ್ವ ನಾಶವಾಗಿದೆ. ಶಾಂತಿಯು ನಮಗೆ ನೆಮ್ಮದಿಯ ಬದುಕು ನೀಡುತ್ತದೆಯಾದ್ದರಿಂದ ಯುದ್ಧ ಬೇಡ ಶಾಂತಿ ಬೇಕು ಎಂದು ಘೋಷಿಸಿದರು.

ಇದಕ್ಕೂ ಮೊದಲು ಜನವಾದಿ ಮಹಿಳಾ ಸಂಘದ ಜಿಲ್ಲಾ ಕಾರ್ಯದರ್ಶಿ ಸುರೇಖಾ ರಜಪೂತ ಅವರು ಸ್ವಾಗತಿಸಿದರು. ಭಾರತ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಸಂಚಾಲಕ ಸುರೇಶ ಜಿ.ಬಿಯವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಧರ ಕುಲಕರ್ಣಿ ವಕೀಲರು ಕಾರ್ಯಕ್ರಮ ನಿರೂಪಣೆ ಹಾಗೂ ವಂದನಾರ್ಪಣೆ ಮಾಡಿದರು. ○



ಮಹಿಳಾ ಹಕ್ಕೊತ್ತಾಯವಾಗಿ ಮಹಿಳಾ ದಿನಾಚರಣೆ

ದುಡಿಯುವ ಮಹಿಳೆಯ ಸಮನ್ವಯ ಸಮಿತಿ (ಸಿಐಟಿಯು) ಮಹಿಳಾ ಉಪ ಸಮಿತಿ, ವಿಮಾ ನೌಕರರ ಸಂಘ, ಅಖಿಲ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಒಕ್ಕೂಟ ರಾಯಚೂರು ಇವರ ಜಂಟಿ ನೇತೃತ್ವದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಹಿಳೆಯರ ಹಕ್ಕೊತ್ತಾಯಿಸಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸುವ ಮೂಲಕ ಆಚರಿಸಲಾಯಿತು.

10 ಬೇಡಿಕೆಗಳ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ಅಧಿಕಾರಿಯವರಿಗೆ ಸಮನ್ವಯ ಸಮಿತಿ ಸಂಚಾಲಕರಾದ ಹೆಚ್.ಪದ್ಮ ನೀಡಿದರು. ಜನವಾದಿ ಮಹಿಳಾ ಸಂಘಟನೆಯ ಸುಲೋಚನ ಮಹಿಳೆಯರ ಸಮಸ್ಯೆಗಳ ಕುರಿತು ವಿವರಿಸಿ ಪರಿಹಾರಕ್ಕೆ ಕ್ರಮ ಕೈಗೊಳ್ಳಲುಆಗ್ರಹಿಸಿದರು.

ವಿಮಾ ನೌಕರರ ಸಂಘ ರಾಯಚೂರು ವಿಭಾಗದ ಮಹಿಳಾ ಉಪಸಮಿತಿಯ ಸಂಚಾಲಕರಾದ ಶ್ರೀಮತಿ ಎಲ್.ವಿ.ಗುಡಿಯವರು ಅಂತರ್ರಾಷ್ಟ್ರೀಯ ಮಹಿಳಾ ದಿನದ ಬಗ್ಗೆ ವಿವರಿಸಿ ಈ ದಿನವನ್ನು ಎಲ್ಲಾ ವಲಯದ ದುಡಿಯುವ ಮಹಿಳೆಯರು ಐಕ್ಯತೆಯಿಂದ ಜಾಗತೀಕರಣದ ಸವಾಲುಗಳ ಎದುರಿಸಲು ಕರೆ ನೀಡಿದರು. ಅಖಿಲ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಒಕ್ಕೂಟದ ಮಹಿಳಾ ಉಪಸಮಿತಿ ಸಂಚಾಲಕರಾದ ಚಂದ್ರಕಲಾ ಹಾಗೂ ಅಕ್ಷರದಾಸೋಹ ಅಡುಗೆ ಕಾರ್ಮಿಕ ಸಂಘದ ಕಾರ್ಯದರ್ಶಿ ಕರುಣಾಕ್ಷಿ ಉಪಸ್ಥಿತರಿದ್ದರು.

ಅಭಿವೃದ್ಧಿಗೆ ಅಡ್ಡಗೋಡೆಯಾದ ಕಾವೇರಿ ಸೇನೆ

ಖಂಡನಾರ್ಹ ಎರಡು ಘಟನೆಗಳು

ಇಂದು ವಿದ್ಯುತ್ ಜನಜೀವನದ ಅವಿಭಾಜ್ಯ ಭಾಗವಾಗಿದೆ. ವಿದ್ಯುಚ್ಛಕ್ತಿ ಇಲ್ಲದಿದ್ದರೆ ಕೃಷಿಯ ಬೆಳವಣಿಗೆ ಇಲ್ಲ, ಕೈಗಾರಿಕಾ ಅಭಿವೃದ್ಧಿ ಇಲ್ಲ, ಉದ್ಯೋಗ ನಿರ್ಮಾಣವಿಲ್ಲ, ಮತ್ತು ಜನಜೀವನ ಉತ್ತಮಗೊಳ್ಳುವಂತಿಲ್ಲ. ಆದ್ದರಿಂದ ನಮ್ಮಲ್ಲೇ ಲಭ್ಯವಿರುವ ಆಂತರಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಕಡಿಮೆ ದರದಲ್ಲಿ ವಿದ್ಯುತ್ ಉತ್ಪಾದಿಸುವ ಮಾರ್ಗಗಳನ್ನು ಉಪಯೋಗಿಸಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

ನಮ್ಮ ದೇಶದಲ್ಲಿ ನಮಗೆ ಬೇಕಷ್ಟು ವಿದ್ಯುತ್ತನ್ನು ಉತ್ಪಾದಿಸಲು ಬೇಕಾದ ಪ್ರಾಕೃತಿಕ ಸಂಪತ್ತು ಹೇರಳವಾಗಿದೆ. ಮುಖ್ಯವಾಗಿ ಇವು ಜಲಶಕ್ತಿ ಮತ್ತು ಕಲ್ಲಿದ್ದಲು, ಇವುಗಳ ಜೊತೆಗೆ ಅಣು ಶಕ್ತಿ, ಸೌರಶಕ್ತಿ, ಜೈವಿಕ ಅನಿಲದ ಮೂಲಗಳು, ವಾಯುಶಕ್ತಿ ಮೊದಲಾದ ಮೂಲಗಳನ್ನೂ ಸೇರಿಸಿಕೊಳ್ಳಬಹುದು. ಆದರೆ ಅಭಿವೃದ್ಧಿಗೆ ಅಗತ್ಯವಾದ ಪ್ರಮಾಣದಲ್ಲಿ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಉತ್ಪಾದಿಸಬಹುದಾದ ವಿಧಾನಗಳು ಜಲ ವಿದ್ಯುತ್ ಮತ್ತು ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ವಿಧಾನಗಳು.

ನಮ್ಮ ದೇಶದಲ್ಲಿ 90,000 ಮೆ.ವಾಗಳಷ್ಟು ವಿದ್ಯುತ್ತನ್ನು ಜಲಮೂಲದಿಂದ ಉತ್ಪಾದಿಸಬಹುದಾಗಿದೆ. ಅದರಲ್ಲಿ ಶೇ.28ನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಹಾಗೆಯೇ ಕಲ್ಲಿದ್ದಲು (ಸ್ವಲ್ಪ ಲಿಗ್ನೈಟ್ ಕೂಡ ಸೇರಿ) 20,000 ಕೋಟಿ ಟನ್‌ಗಳಷ್ಟು ಲಭ್ಯವಿದೆ ಎಂದು ಅಂದಾಜು ಮಾಡಲಾಗಿದೆ. ಇದು ಇನ್ನೂ ನೂರು ವರ್ಷಕ್ಕೂ ಹೆಚ್ಚು ಕಾಲ ನಮ್ಮ ದೇಶದ ವಿದ್ಯುತ್ತಿನ ಅಗತ್ಯವನ್ನು ಪೂರೈಸಬಲ್ಲುದು.

ನಮ್ಮ ರಾಜ್ಯದಲ್ಲಿ ಕಲ್ಲಿದ್ದಲು ಲಭ್ಯವಿಲ್ಲದಿದ್ದರೂ 7750 ಮೆ.ವಾಗಳಷ್ಟು ಜಲ ವಿದ್ಯುತ್ ಸಾಮರ್ಥ್ಯ ಲಭ್ಯವಿದೆ. ಇದರಲ್ಲಿ ಈಗ ಕೇವಲ 3050 ಮೆ.ವಾ.ನಷ್ಟು ಮಾತ್ರ ಜಲ ವಿದ್ಯುತ್ತನ್ನು ಬಳಸಿಕೊಳ್ಳಲಾಗಿದೆ.

ಜಲ ಮೂಲದ ವಿದ್ಯುತ್ ಉತ್ಪಾದನೆ ಬೇರೆ ಮೂಲಗಳಿಂದ ವಿದ್ಯುತ್ ಉತ್ಪಾದನೆಗೆ ಬೇಕಾಗುವಷ್ಟು ಬಂಡವಾಳವನ್ನು ಬೇಡುವಂತಹದಲ್ಲ.

ಆದ್ದರಿಂದಲೇ ಜಲ ಮೂಲದಿಂದ ವಿದ್ಯುತ್ ಉತ್ಪಾದಿಸುವ ಕಿರು ಯೋಜನೆಗಳ ಮೂಲಕ ಸಾಧ್ಯವಿರುವಲ್ಲೆಲ್ಲಾ ವಿದ್ಯುತ್ ಉತ್ಪಾದನಾ ಕಾರ್ಯ ನಡೆಸಲು ಯೋಜನೆಗಳನ್ನೂ ರೂಪಿಸಲಾಗಿದೆ.

ಕೊಡಗಿನಲ್ಲೂ ಇಂತಹ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಕೆಲವು ಸಂಸ್ಥೆಗಳು ಮುಂದೆ ಬಂದಿವೆ.

ಹಿಂದೆ ಇರ್ಪುವಿನಲ್ಲಿ ಸ್ಥಾಪಿಸಹೊರಟಾಗ ವಿರೋಧ ಬಂದಿತು. ಚೇಲಾವರದಲ್ಲಿ ಇಂತಹ ಯೋಜನೆಯೊಂದು ಬರುವುದೆನ್ನುವಾಗ ಅಲ್ಲಿನ ಬ್ರಿಟೀಷನೊಬ್ಬನ ರಿಸೋರ್ಟಿಗೆ ಇದರಿಂದ ತೊಂದರೆಯಾಗುವುದರಿಂದ ಅವನ ಪರವಾಗಿ ವಕಾಲತು ವಹಿಸಿದ ಭಾ.ಜ.ಪ ತೀವ್ರ ವಿರೋಧ ವ್ಯಕ್ತಪಡಿಸಿತು.

ಈಗ ಬರಪೊಳೆ ನದಿಯನ್ನು ಉಪಯೋಗಿಸಿಕೊಂಡು ಇಂತಹುದೇ ಕಿರು ಯೋಜನೆಯೊಂದನ್ನು ಸ್ಥಾಪಿಸಲು ಬೆಂಗಳೂರಿನ ಪಟ್ರಿಂಯಾ ಎಂಬ ಸಂಸ್ಥೆ ಮುಂದೆ ಬಂದಿದೆ.

ಈ ಸಂಸ್ಥೆಯ ಪ್ರಕಾರ -

ಶರಶಬ್ಬಿ ಜಲಪಾತದ ಹರಿವಿನಲ್ಲಿ ತಮಗೆ 6 ಮೆ.ವಾ ವಿದ್ಯುತ್ ಉತ್ಪಾದಿಸುವ ಯೋಜನೆ ಅನುಷ್ಠಾನಕ್ಕೆ ತರಲು ಅನುಮತಿ ಕೊಟ್ಟಿದ್ದು ಇದರಿಂದ ಯಾವುದೇ ಕೃಷಿ ಭೂಮಿಯಾಗಲಿ, ತೋಟಗಳಾಗಲಿ ಮುಳುಗಡೆಯಾಗುವುದಿಲ್ಲ. ಯಾವುದೇ ರೀತಿಯಲ್ಲೂ ಪರಿಸರ ಮಾಲಿನ್ಯ ಉಂಟಾಗುವುದಿಲ್ಲ. ಯಾವುದೇ ಕಾಡಿನ ನಾಶವಾಗುವುದಿಲ್ಲ.

ಉತ್ಪಾದನೆಯಾಗುವ ವಿದ್ಯುತ್ ಸಮೀಪದ ಸಬ್ ಸ್ಟೇಶನ್ನಿಗೆ ಸರಬರಾಜಾಗುವುದರಿಂದ ಸುತ್ತುಮುತ್ತಲಿನ ಪ್ರದೇಶಗಳಿಗೇ ಹೆಚ್ಚಿನ ವಿದ್ಯುತ್ ದೊರೆತು ಕೊಡಗಿಗೇ ಉಪಯೋಗವಾಗುತ್ತದೆ.

ಆದರೆ ಈ ಯೋಜನೆಯನ್ನು 'ಕಾವೇರಿ ಸೇನೆ'ಯವರು ಕಟುವಾಗಿ ವಿರೋಧಿಸುತ್ತಿದ್ದಾರೆ. ಅವರ ಪ್ರಕಾರ ಈ ಯೋಜನೆ ಅನುಷ್ಠಾನಕ್ಕೆ ಬಂದರೆ ಸಾಕಷ್ಟು ಪ್ರದೇಶ ಮುಳುಗಡೆಯಾಗುತ್ತದೆ, ಪರಿಸರಕ್ಕೆ ತೀವ್ರ ಧಕ್ಕೆ ಇದೆ. ಉತ್ಪಾದನೆಯಾಗುವ ವಿದ್ಯುತ್ ನಮ್ಮ ನಾಡಿಗೇ ಸಿಗುವುದಿಲ್ಲ. ಕೇರಳದಲ್ಲೂ ಇಂತಹದೊಂದು ಯೋಜನೆ ಅನುಷ್ಠಾನಕ್ಕೆ ಬರಲಿದ್ದು ಅದರಿಂದ ಕೊಡಗಿನ ಕೆಲವು ಭಾಗಗಳೂ ಮುಳುಗುತ್ತವೆ.

ಕೇರಳದವರ ಪ್ರಕಾರ ಅವರ ಪ್ರದೇಶದಲ್ಲಿ ಅನುಷ್ಠಾನಕ್ಕೆ ಬರುವ ಯೋಜನೆಯಿಂದ ಕೊಡಗಿಗೆ ಯಾವ ಆಪತ್ತೂ ಇಲ್ಲ.

ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಾಣವಾಗುತ್ತಿದ್ದು ಅದು ಬರಪೊಳೆ ಯೋಜನೆಗೆ ಸಹಾಯಕವಾದದ್ದು ಎಂದು ಪ್ರಚಾರ ಬಂತು. ಬರಪೊಳೆ ಯೋಜನೆಯನ್ನು ನಖಶಿಖಾಂತ ವಿರೋಧಿಸುವ ಅರುಣ್ ಮಾಚಯ್ಯನವರೇ ಅದಕ್ಕೆ ಉತ್ತರವಾಗಿ "ಪ್ರಸ್ತುತ ಅರಣ್ಯ ಪ್ರದೇಶದ ನಡುವೆ ರಸ್ತೆಯೊಂದನ್ನು ನಿರ್ಮಿಸಲಾಗುತ್ತಿದ್ದು ಈ ರಸ್ತೆಗೂ ಬರಪೊಳೆ ಯೋಜನೆಗೂ ಯಾವುದೇ ಸಂಬಂಧವಿಲ್ಲ. ಅರಣ್ಯದಲ್ಲಿ ಗಾಂಜಾ ಬೆಳೆ ಮತ್ತಿತರ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು, ಅರಣ್ಯ, ಸಿಬ್ಬಂದಿಗಳಿಗೆ ಗಸ್ತು ತಿರುಗಲು ಅನುಕೂಲವಾಗುವಂತೆ ರಸ್ತೆ ನಿರ್ಮಾಣ ಕಾರ್ಯ ನಡೆಯುತ್ತಿದೆ. ಜನತೆಯಲ್ಲಿ ಯಾವುದೇ ಆತಂಕ ಬೇಡ" ಎಂದರು.

ಈ ರೀತಿ ತೀರಾ ವಿರೋಧಿ ವಿಚಾರಗಳು ಜನ ಸಮಕ್ಷ ಮಂಡನೆಯಾಗಿವೆ.

ಕೊಡಗಿನ ಅಭಿವೃದ್ಧಿಗೆ ಪೂರಕವಾದ ಇಂತಹ ವಿಚಾರದಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ಮೂಡಿ ಬಂದ ಪರಿಸ್ಥಿತಿಯಲ್ಲಿ ಇಬ್ಬದಿಯ ವಿಚಾರಗಳನ್ನೂ ಜನರ ಮುಂದೆ ಮಂಡಿಸಿ ಸಂವಾದ ನಡೆಸಿ ಅನಂತರ ಜನ ಸಾಮಾನ್ಯರು ಒಂದು ತೀರ್ಮಾನಕ್ಕೆ ಬರಲು ಸಹಾಯಕವಾಗುವಂತೆ ಒಂದು ಸಂವಾದ ಕಾರ್ಯಕ್ರಮ ಏರ್ಪಡಿಸಲು ಕೊಡಗು ಜಿಲ್ಲಾ ರೈತಸಂಘ, ಪಂಪ್‌ಸೆಟ್ ಬಳಕೆದಾರರ ಸಂಘ, ವಿರಾಜಪೇಟೆ ತಾಲ್ಲೂಕು ರೈತ ಸಂಘ ಸಂಯುಕ್ತವಾಗಿ ತೀರ್ಮಾನಿಸಿ ಒಂದು ಕಾರ್ಯಕ್ರಮ ಆಯೋಜಿಸಿದ್ದು ಪ್ರಸ್ತುತವೇ ಆಗಿತ್ತು. ಆದರೆ ಕಾವೇರಿ ಸೇನೆಯವರು ತೆಗೆದುಕೊಂಡ ನಿಲುವು ಅತ್ಯಂತ ಆತಂಕಕಾರಿಯದ್ದಾಗಿತ್ತು. ತಾವು ತೆಗೆದುಕೊಂಡ ನಿಲುವೇ ಅಂತಿಮವೆಂದುದಲ್ಲದೆ ಭಿನ್ನ ಧ್ವನಿಗಳನ್ನು ಆಲಿಸಲೂ ಸಿದ್ಧರಿಲ್ಲವೆಂದು ತೋರಿದರು. "ನಮ್ಮ ನಿಲುಮೆಗೆ ವ್ಯತಿರಿಕ್ತವಾದ ಅಭಿಪ್ರಾಯಗಳನ್ನು ಯಾರೂ ಎಲ್ಲಿಯೂ ವ್ಯಕ್ತಪಡಿಸಕೂಡದು. ನಾವು ಅದನ್ನು ಹತ್ತಿಕ್ಕುತ್ತೇವೆ" ಎಂದು ಅದಕ್ಕನುಗುಣವಾಗಿ ಗೋಣಿಕೊಪ್ಪಲಿನಲ್ಲಿ ವರ್ತಿಸಿ ಕಾರ್ಯಕ್ರಮ ನಡೆಯದಂತೆ ನೋಡಿಕೊಂಡರು. ತಮ್ಮ ನಿಲುವಿಗೆ ವ್ಯತಿರಿಕ್ತವಾದ ನಿಲುಮೆಗೆ ಅಸಹನೆಯಿಂದ ವರ್ತಿಸುವುದು ಫ್ಯಾಸಿಸ್ಟ್ ಪ್ರವೃತ್ತಿಯಾಗಿದೆ. ರಾಜ್ಯದಲ್ಲಿ ಪೋಲಿಸರು ಈ ಫ್ಯಾಸಿಸ್ಟ್ ಮನೋಭಾವಕ್ಕೆ ಬೆಂಬಲವಾಗಿ ನಿಂತರು ಎನ್ನುವುದೂ ಅಷ್ಟೇ ಆತಂಕದ ಘಟನೆಯಾಗಿದೆ.

ಇಂದು ಚರ್ಚೆ ಎ.ಕೆ.ಸುಬ್ಬಯ್ಯನವರ ಬಗ್ಗೆ ಆಗುತ್ತಿದೆಯಲ್ಲದೆ ಕಿರು ವಿದ್ಯುತ್ ಜಲ ಯೋಜನೆಯ ಬಗ್ಗೆ ಅಲ್ಲ. ಇದು ಸರಿಯಲ್ಲ. ಇಲ್ಲಿ ಸಂವಾದಕ್ಕೆ ಆಹ್ವಾನಿಸಿದ ಸುಬ್ಬಯ್ಯನವರು ಮುಖ್ಯವಾಗಿರಲಿಲ್ಲ. ಕೊಡಗಿನ ಅಭಿವೃದ್ಧಿಗೆ ಅತ್ಯಂತ ಅಗತ್ಯವಾದ ವಿದ್ಯುತ್ತಿನ ಉತ್ಪಾದನೆಗೆ ಅನುಸರಿಸಬೇಕಾದ ಸುಲಭ ಮತ್ತು ಸ್ವಾವಲಂಬೀ ಮಾರ್ಗ ಯಾವುದು ಎನ್ನುವುದು ಮುಖ್ಯ ಪ್ರಶ್ನೆಯಾಗಿತ್ತು. ಇದೇ ಮುಕ್ತ ಚರ್ಚೆಯಿಂದ ವಂಚಿತವಾಯಿತು ಎನ್ನುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಇದರ ಪರಿಣಾಮ ಅತ್ಯಂತ ದೂರಗಾಮಿಯಾದುದು ಎಂದು ಈ ಜಿಲ್ಲೆಯ ಎಲ್ಲಾ ಚಿಂತಕರೂ ಅಭಿವೃದ್ಧಿ ಬಗ್ಗೆ ಕಾಳಜಿಯುಳ್ಳವರು, ಕಳವಳದಿಂದ ಗಮನಿಸಬೇಕಾಗಿದೆ.

ಪ್ರಸಂಗ ಎರಡು: ಕೊಡಗು-ಕೇರಳದ ಸಂಬಂಧ ಇಂದು ನಿನ್ನೆಯದಲ್ಲ. ಕೊಡಗಿನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ರಂಗಗಳ ಮೇಲೆ ಕೇರಳದ ಪ್ರಭಾವ ದಟ್ಟವಾದುದು ಮತ್ತು ಅತ್ಯಂತ ಹಳೆಯದು.



ಇಂದು ಕೊಡಗಿನ ಆರ್ಥಿಕತೆಗೆ ಕೇರಳದ ಸಂಬಂಧ ಅನಿವಾರ್ಯವಾಗಿದೆ.

ಕೊಡಗಿನಲ್ಲಿ ಬೆಳೆಯುವ ಕರಿಮೆಣಸು, ಏಲಕ್ಕಿ, ಭತ್ತ, ಹುಲ್ಲು, ಅರಣ್ಯ ಉತ್ಪನ್ನಗಳಾದ ಕರ್ಪಚಿಕ್ಕೆ, ಮತ್ತಿತರ ಉತ್ಪನ್ನಗಳು, ಜಾನುವಾರುಗಳು ಮೊದಲಾದವುಗಳಿಗೆ ಕೇರಳದ ಮಾರುಕಟ್ಟೆಯೇ ಪ್ರಮುಖ ಮಾರುಕಟ್ಟೆಯಾಗಿದೆ.

ಕೊಡಗಿನಿಂದ ಕಾಫಿ ಕೇರಳದ ಕೊಚ್ಚಿಗೆ ಸಾಗಿಸಲ್ಪಟ್ಟು ಅಲ್ಲಿಂದ ವಿದೇಶಗಳಿಗೆ ರಫ್ತಾಗುತ್ತದೆ.

ಕೊಡಗಿನ ಬಡ, ಮಧ್ಯಮ ಜನ ಇಂದಿನ ಪರಿಸ್ಥಿತಿಯಲ್ಲಿ ಕುರಿಯ ಮಾಂಸ ದುಬಾರಿ ಎಂದುಕೊಳ್ಳಲು ಹಿಂಜರಿಯುವಾಗ ಅವರಿಗೆ ಆಸರೆಯಾಗಿ ದೊರೆಯುವುದು ಕೇರಳದಿಂದ ಯಥೇಚ್ಛವಾಗಿ ಬರಬಹುದಾದ ಮೀನು.

ಹೀಗೆ ಕೊಡಗಿನ ವಾಣಿಜ್ಯಕ್ಕೆ ಕೇರಳವೇ ಪ್ರಮುಖ ಕ್ಷೇತ್ರವಾಗಿದ್ದು ಇಲ್ಲಿಗೆ ಸಾಗಣಿಕೆ ಸುಗಮವಾಗಿರುವುದು ಕೊಡಗಿನ ವಾಣಿಜ್ಯಾಭಿವೃದ್ಧಿಗೆ ಅನಿವಾರ್ಯ ವಾಗಿದೆ.

ಕೇರಳದೊಂದಿಗಿನ ಈ ವ್ಯಾಪಾರ ಸಂಬಂಧಕ್ಕೆ ಇರುವ ಮುಖ್ಯ ದಾರಿ ವಿರಾಜಪೇಟೆ-ಮಾಕುಟ್ಟ ದಾರಿಯಾಗಿದೆ.

ಈ ಎಲ್ಲಾ ಕಾರಣಗಳಿಂದಲೂ ಕೊಡಗಿನ ಜನರ ಬದುಕಿನೊಂದಿಗೆ ಅವಿನಾ ಸಂಬಂಧವಿರುವ ಈ ರಸ್ತೆಯ ಶೋಚನೀಯ ಸ್ಥಿತಿ ಮೊದಲೇ ಕೃಷಿ ಉತ್ಪನ್ನಗಳ ಬೆಲೆ ಕುಸಿತದಿಂದ ಬಸವಳಿದಿರುವ ಸ್ಥಿತಿಯನ್ನು ಮತ್ತಷ್ಟು ಕಂಗೆಡಿಸಿದೆ.

ಅಷ್ಟೇ ಅಲ್ಲ ಕರ್ನಾಟಕ ತುಂಗಾ, ಹೇಮಾವತಿ ನದೀ ತೀರಗಳಲ್ಲಿ ಬೆಳೆಯುವ ಭತ್ತಕ್ಕೆ ಕೇರಳವೇ ಪ್ರಮುಖ ಮಾರುಕಟ್ಟೆಯಾಗಿದ್ದು ಅದು ಕೇರಳ ತಲುಪಲು ಇರುವ ಅತ್ಯಂತ ಹತ್ತಿರದ ಮಾರ್ಗವೆಂದರೆ ಹಾಸನದ 18ನೇ ನಂಬರಿನ ಹೆದ್ದಾರಿಯ ಮೂಲಕ ಕೊಡಗಿನ ಕುಶಾಲನಗರ, ವಿರಾಜಪೇಟೆ ಮಾರ್ಗವಾಗಿ ಕೇರಳ ಸೇರುವುದು.

ಕೊಡಗಿನಿಂದ ಕೇರಳಕ್ಕೆ ಒಯ್ಯುವ ವಾಹನಗಳ ಇಂಧನ ಮತ್ತಿತರ ಖರ್ಚು ಕಡಿಮೆಯಾದರೆ ಕೊಡಗಿನ ಉತ್ಪನ್ನಗಳಿಗೆ ಸಿಗುವ ಬೆಲೆಯೂ ಸ್ವಲ್ಪ ಹೆಚ್ಚು ಇಲ್ಲಿನ ಬೆಳೆಗಾರರಿಗೆ ಉಯೋಗವಾಗುವುದೆನ್ನುವುದರಲ್ಲೂ ಸಂಶಯವಿಲ್ಲ.

ಹೀಗೆ ಕೊಡಗಿನ ಅಭಿವೃದ್ಧಿಗೆ ಅನಿವಾರ್ಯವಾಗಿರುವ ಮಾರುಕಟ್ಟಾ ರಸ್ತೆಯ ಮಹತ್ವವನ್ನು ನಮ್ಮ ಜಿಲ್ಲೆಯ ಪ್ರಮುಖ ರಾಜಕೀಯ ಪಕ್ಷಗಳವರು, ಶಾಸಕರುಗಳು, ಲೋಕಸಭಾ ಸದಸ್ಯರುಗಳು ಸಾಕಷ್ಟು ತಿಳಿದುಕೊಂಡಂತಿಲ್ಲ. ಹೀಗಾಗಿ ಅದು ನಿರ್ಲಕ್ಷಕ್ಕೊಳಗಾಗಿದೆ.

ಆದ್ದರಿಂದಲೇ ಆ ಮಾರ್ಗ ಅತ್ಯಂತ ಹದಗೆಟ್ಟುಹೋಗಿ ಶೋಚನೀಯ ಸ್ಥಿತಿಯಲ್ಲಿದೆ. ಪ್ರತಿ ದಿನ ಆ ಮಾರ್ಗದಲ್ಲಿ ಹೋಗುವ ವಾಹನಗಳಲ್ಲಿ ಒಂದಾದರೂ ಮಗುಚಿ ಬೀಳುವುದು ನಿತ್ಯ ಕಾಣುವ ದೃಶ್ಯ. ಮಾರ್ಗದುದ್ದಕ್ಕೂ ಹೊಂಡಗಳೇ ಹೊಂಡಗಳು.

ಕೇರಳದ ಭಾಗದಲ್ಲಿ ಇದಕ್ಕೆ ಸಮವಾದ ರಸ್ತೆಯನ್ನು 'ಕೊಚ್ಚಿ ಬಂದರಿಗೆ ತನ್ನ ಹಿಂದಿನ ಪ್ರದೇಶವನ್ನು ಸಂಪರ್ಕಿಸುವ ಮಾರ್ಗವೆಂದು ಗುರುತಿಸಿ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದವರಾದ ಅಲ್ಲಿನ ಸಂಸದ ಅಬ್ದುಲ್ಲಾ ಕುಟ್ಟಿ ಆಸ್ಥೆವಹಿಸಿ ಕೇಂದ್ರ ಸರಕಾರದ ಸಹಾಯದಿಂದ ಚತುಷ್ಪಥ ರಸ್ತೆಯನ್ನಾಗಿ ಮಾರ್ಪಡಿಸುತ್ತಿದ್ದಾರೆ.

ಆದೇ ಸಂದರ್ಭದಲ್ಲಿ ನಮ್ಮ ಭಾಗದ ಮಾಕುಟ್ಟಾ ರಸ್ತೆಯನ್ನು 'ಕಳ್ಳ ಸಾಗಾಣಿಕೆಗಾಗಿ ಇರುವ ಮಾರ್ಗ' ವೆಂದು ತಿರಸ್ಕಾರದಿಂದ ನೋಡಲಾಗುತ್ತಿದೆ. ವ್ಯಾಪಾರ ದೃಷ್ಟಿಯಿಂದ ಆ ರಸ್ತೆಗಿರುವ ಪ್ರಾಮುಖ್ಯತೆಯನ್ನು ನಮ್ಮ ಕೂಪ ಮಂಡೂಕ ಮನೋಭಾವದ ಕೆಲವು ರಾಜಕಾರಣಿಗಳು ಅರ್ಥ ಮಾಡಿಕೊಳ್ಳಲು ಸಿದ್ಧರಿಲ್ಲ.

ಕರ್ನಾಟಕದ ಭಾಗದಲ್ಲಿ ಆ ರಸ್ತೆಯನ್ನು ತೇಪೆ ಮಾಡುವುದೇ ಮಹತ್ಸಾಧನೆ ಎಂಬಂತೆ ನಮ್ಮ ಜಿಲ್ಲೆಯ ಕೆಲವು ಶಾಸಕರುಗಳು ಮಾತನಾಡುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಹಲವು ಸಂಘಟನೆಗಳು ಸೇರಿ 'ರಸ್ತೆ ಹೋರಾಟ ಸಮಿತಿ' ಎಂಬ ಸಮಿತಿ ರಚಿಸಿ ಆ ಮಾರ್ಗದ ದುರಸ್ತಿಗಾಗಿ ಹೋರಾಡಲು ರಂಗಕ್ಕಿಳಿದರು. 2004 ರ ನವೆಂಬರ್ 9 ರಂದು ರಸ್ತೆ ತಡೆ ಕಾರ್ಯಕ್ರಮ ಕೈಗೊಂಡಾಗ ಸ್ಥಳೀಯ ಶಾಸಕರು ಈ ಕಡೆಗೆ ತಿರುಗಿಯೂ ನೋಡಲಿಲ್ಲ. ಶ್ರೀ ಅರುಣ್ ಮಾಚಯ್ಯನವರು ಮಾತ್ರವೇ ಸ್ಪಂದಿಸಿ ಸ್ಥಳಕ್ಕೆ ಆಗಮಿಸಿ "ಹದಿನೈದು ದಿನಗಳಲ್ಲಿ ದುರಸ್ತಿ

ಪುಟ 8 ರಿಂದ

ಹದಿನೆಂಟನೇ ಮಹಾಧಿವೇಶನದತ್ತ.......

18ನೇ ಮಹಾಧಿವೇಶನ
ಸಿಪಿಐ(ಎಂ)
6-11 ಏಪ್ರಿಲ್ 2005, ದೆಹಲಿ

ಸವಾಲುಗಳನ್ನು ಎದ

ಸಿಪಿಐ(ಎಂ) ಮತ್ತು ಎಲ್ಲಾ ಎಡಪಕ್ಷಗಳ ದುರ್ಬಲತೆ ಮುಂದುವರೆಯುತ್ತಿದ್ದರೂ ರಾಷ್ಟ್ರಮಟ್ಟದಲ್ಲಿ ಅವುಒಂದು ನಿರ್ಣಾಯಕ ಪಾತ್ರ ವಹಿಸುತ್ತಿರುವ ಸಂದರ್ಭದಲ್ಲಿ ಸಿಪಿಐ(ಎಂ)ನ 18ನೇ ಮಹಾಧಿವೇಶನ ನಡೆಯುತ್ತಿದೆ. 1964 ರಲ್ಲಿ ನಾವು ಪಕ್ಷದ ಮರು ಸಂಘಟನೆಗಿಳಿದಾಗ ಹಲವು ರಾಷ್ಟ್ರೀಯ, ಅಂತರ್ರಾಷ್ಟ್ರೀಯ ವೀಕ್ಷಕರು ನಮ್ಮನ್ನು 'ಒಡಕುಂಟುಮಾಡಿದವರು' ಎಂದು ಜರೆಯುತ್ತಾ ನಮ್ಮ ಕಥೆ ಬೇಗನೆ ಮುಗಿದುಬಿಡುತ್ತದೆ ಎಂದು ಭವಿಷ್ಯ ನುಡಿದಿದ್ದರು. ಈ ಭವಿಷ್ಯವಾಣಿಯ ಗತಿಯೇನಾಗಿದೆ ಎಂಬುದು ಈಗ ಎಲ್ಲರ ಮುಂದಿದೆ.

ಅವು ನಿಜಕ್ಕೂ ದೇಶದ ಕಮ್ಯುನಿಸ್ಟರಿಗೆ ಬಹಳ ಕಷ್ಟದ ದಿನಗಳು. ಮೊದಲನೆಯದಾಗಿ, ನಾವು ಚೀಣಾ ಕಮ್ಯುನಿಸ್ಟ್ ಪಕ್ಷದ ಅಣತಿಯಂತೆ ಪಕ್ಷವನ್ನು 'ಒಡೆದವು' ಎಂದು ಆಳುವವರ್ಗಗಳು, ಅವರ ಮಾಧ್ಯಮಗಳು ಪ್ರಚಾರ ಮಾಡಿದವು. ಸೈದ್ಧಾಂತಿಕ ಮತ್ತು ರಾಜಕೀಯ ಪ್ರಶ್ನೆಗಳ ಮೇಲೆ ಭಿನ್ನಾಭಿಪ್ರಾಯಗಳು ಅವಿಭಜಿತ ಪಕ್ಷದಲ್ಲಿ ತೆಲಂಗಾಣ ಹೋರಾಟದ ದಿನಗಳಿಂದಲೇ ಆರಂಭವಾಗಿದ್ದವು ಎಂಬುದನ್ನು ಈ ಪ್ರಚಾರಗಳು ಮರೆಮಾಚಿದವು. ಪಕ್ಷದಲ್ಲಿ ಆಗ ಪ್ರಾಬಲ್ಯ ನಡೆಸುತ್ತಿದ್ದ ಮುಖಂಡತ್ವ ಈ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಲು ನಾವು ನಡೆಸಿದ ಎಲ್ಲಾ ಪ್ರಯತ್ನಗಳನ್ನು ತಿರಸ್ಕರಿಸಿ, ನಾವು ಪಕ್ಷದೊಳಗೆ ಇದ್ದು ಕೆಲಸ ಮಾಡದಂತೆ ಮಾಡಿದ್ದರು. ಅಷ್ಟೇ ಅಲ್ಲ, 1962 ರಲ್ಲಿ ಚೀಣಾದೊಂದಿಗೆ ಘರ್ಷಣೆ ನಡೆದಾಗ ಗಡಿ ವಿವಾದವನ್ನು ಶಾಂತಿಯುತವಾಗಿ ಇತ್ಯರ್ಥಮಾಡಿಕೊಳ್ಳಿ ಎಂದು ಪ್ರತಿಪಾದಿಸಿದ್ದಕ್ಕೇ ಭಾರತ ಸರ್ಕಾರ ನಾವು 'ಚೀಣೀ ಏಜೆಂಟ್' ರೆಂದು ಹಣೆಪಟ್ಟಿ ಹಚ್ಚಿದರು (ಈಗ ಅವರೇ ಸ್ವತಃ ಶಾಂತಿಯುತ ಇತ್ಯರ್ಥವನ್ನು ಪ್ರತಿಪಾದಿಸುತ್ತಿದ್ದಾರೆ!) ಆಗ ಪಕ್ಷದ ಮುಖಂಡತ್ವದ ಈ ವಿಭಾಗ ಇದನ್ನು ಪ್ರತಿಭಟಿಸಲಿಲ್ಲಾ ಮಾತ್ರವಲ್ಲ, ನಮ್ಮ ವಿರುದ್ಧ ಆಕ್ರಮಣವನ್ನು ಸಮ್ಮತಿಸಿದರು.

ಪಕ್ಷದ ಮರು ಸಂಘಟನೆಯಾದ ಮೇಲೂ ಮತ್ತೆ ನಾವು ಕಠಿಣ ಪರಿಸ್ಥಿತಿ ಎದುರಿಸಬೇಕಾಯಿತು. 1965 ಲ್ಲಿ ಪಾಕಿಸ್ತಾನದೊಂದಿಗೆ ಯುದ್ಧ ನಡೆದಾಗ ಭಾರತ ಸರ್ಕಾರ ಎರಡನೇ ಸುತ್ತಿನ ಅಪಪ್ರಚಾರಕ್ಕಿಳಿಯಿತು. ಈ ಬಾರಿಯೂ ಶಾಂತಿಯುತ ಇತ್ಯರ್ಥವನ್ನು ಪ್ರತಿಪಾದಿಸಿದ ಅಪರಾಧಕ್ಕಾಗಿ! ನಮ್ಮ ಪ್ರಮುಖ ಸಂಗಾತಿಗಳನ್ನೆಲ್ಲಾ ಜೈಲಿಗಟ್ಟಲಾಯಿತು.

ಬೇಗನೇ 1967 ರಲ್ಲಿ ಪಕ್ಷ ಮತ್ತೊಂದು ಧಾಳಿ ಎದುರಿಸಬೇಕಾಯಿತು. ಒಳಗಿನಿಂದಲೇ ಅತಿ ಎಡಪಂಥೀಯ ದುಸ್ಸಾಹಸಗಳಿಂದ ಈ ಎರಡು ಬಲಪರಿಷ್ಕರಣವಾದಿ ಮತ್ತು ಎಡ ದುಸ್ಸಾಹಸವಾದಿ - ಮಾರ್ಗಚ್ಯುತಿಗಳಿಗೆ ಭಾರಿ ಬೆಲೆ ತೆರಬೇಕಾಯಿತು - ವಿಶೇಷವಾಗಿ ಆಂಧ್ರ ಪ್ರದೇಶದಲ್ಲಿ ಅಲ್ಲಿಯ ಪಕ್ಷ ಒಂದೊಮ್ಮೆ ಪಕ್ಷದ ಅತಿ ಬಲಾಢ್ಯ ಘಟಕವಾಗಿತ್ತು.

1960 ರ ದಶಕ ಉತ್ತರಾರ್ಧದಲ್ಲಿನ ಗಂಭೀರ ಪರಿಸ್ಥಿತಿಯನ್ನು ಸಾರರೂಪದಲ್ಲಿ ಹೀಗನ್ನಬಹುದು - ಭಾರತ ಸರ್ಕಾರ ನಮ್ಮ ಮೇಲೆ ಆಕ್ರಮಣ ನಡೆಸುತ್ತಿದ್ದಾಗ, ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪಕ್ಷಗಳು ನಮ್ಮ ಮೇಲೆ ಟೀಕಾ ಪ್ರಹಾರ ಮಾಡುತ್ತಿದ್ದವು. ಇತ್ತ ನಕ್ಸಲೀಯರು ನಮ್ಮ ಮೇಲೆ ದೈಹಿಕ ಆಕ್ರಮಣಗಳನ್ನೇ ಹರಿಯಬಿಟ್ಟಿದ್ದರು. ಇದೂ ಸಾಲದೆಂಬಂತೆ, ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಹಾಗೂ ಚೀಣಾ ಕಮ್ಯುನಿಸ್ಟ್ ಪಕ್ಷ ನಮ್ಮ ಮೇಲೆ ವ್ಯವಸ್ಥಿತವಾಗಿ ದೂಷಣೆಗಳ ಧಾಳಿ ನಡೆಸಿದ್ದವು.

ಆದರೆ ಎಲ್ಲಾ ಮಟ್ಟಗಳಲ್ಲಿ ಪಕ್ಷದ ಕಾರ್ಯಕರ್ತರ ಸಮರ್ಪಣಾಭಾವ, ಬದ್ಧತೆಯಿಂದಾಗಿ ಈ ಕಷ್ಟದ ದಿನಗಳನ್ನು ಹಾದುಬಂದದ್ದಷ್ಟೇ ಅಲ್ಲ, ಪಕ್ಷ ಬೆಳೆಯಿತು, ಒಂದು ಶಕ್ತಿಯೆಂದು ಎಲ್ಲರೂ ಗುರುತಿಸುವಂತಾಯಿತು. 1971 ರ ಮಧ್ಯಾವಧಿ ಚುನಾವಣೆಗಳಲ್ಲಿ ಇಂದಿರಾಗಾಂಧಿ 'ಗರೀಬಿ ಹಟಾವೋ' ಘೋಷಣೆಯೊಂದಿಗೆ ಇತರೆಲ್ಲಾ ರಾಜಕೀಯ ಪಕ್ಷಗಳು ನೆಲಕಚ್ಚುವಂತೆ ಮಾಡಿದ್ದಾಗ ಸಿಪಿಐ(ಎಂ) ಮಾತ್ರವೇ ಈ 'ಇಂದಿರಾ ಅಲೆಯನ್ಸ್' ಎದುರಿಸಿ ನಿಂತು ಸದನದಲ್ಲಿ ಎರನಡೇ ಪಕ್ಷವಾಗಿ ಮೂಡಿಬಂತು. ಪಶ್ಚಿಮ ಬಂಗಾಳದಲ್ಲಿ 1967 ರಿಂದ 1969 ರ ನಡುವೆ, ನಂತರ 1971 ರ ವಿಧಾನಸಭಾ ಚುನಾವಣೆಗಳವರೆಗೆ ಆಳುವ ವರ್ಗಗಳ ವಂಚನೆ, ಧಾಳಿಗಳನ್ನು ಎದುರಿಸುವಲ್ಲಿ ಪಕ್ಷ ಗಮನಾರ್ಹ ಮುನ್ನಡೆಸಾಧಿಸಿತು.


ಬೇಗನೆ ಪಕ್ಷ ಪಶ್ಚಿಮ ಪಂಗಾಳದಲ್ಲಿ ತೀವ್ರ ಧಾಳಿಯನ್ನೆದುರಿಸಬೇಕಾಗಿ ಬಂತು. ಐದು ವರ್ಷಗಳ ವರೆಗೆ ನಡೆದ ಅರೆ-ಫ್ಯಾಸಿಸ್ಟ್ ಧಾಳಿಗಳವು. 1972-77 ರಲ್ಲಿ ನಾವು ಪಶ್ಚಿಮ ಬಂಗಾಳದಲ್ಲಿ ಎದುರಿಸಿದ್ದನ್ನು ನಂತರ ತುರ್ತು ಪರಿಸ್ಥಿತಿಯಲ್ಲಿ 19 ತಿಂಗಳಲ್ಲಿ ದೇಶದಲ್ಲಿ ಎದುರಿಸಬೇಕಾಗಿಬಂತು. ಆ ಐದು ವರ್ಷಗಳಲ್ಲಿ ನಮ್ಮ 1100 ಕಾರ್ಯಕರ್ತರ ಕೊಲೆ ನಡೆಯಿತು. 20000 ಕಾರ್ಯಕರ್ತರು ರಾಜ್ಯ ಬಿಟ್ಟು ಬೇರೆಡೆಗೆ ಹೋಗಬೇಕಾಯಿತು. ನಮ್ಮ ನೂರಾರು ಕಚೇರಿಗಳನ್ನು ಆಳುವ ಪಕ್ಷದ ಗೂಂಡಾಗಳು ಆಕ್ರಮಿಸಿಕೊಂಡರು. ನಮ್ಮ ಪಕ್ಷ ತುರ್ತುಪರಿಸ್ಥಿತಿಯ ವಿರುದ್ಧ ಹಾಗೂ ಪ್ರಜಾಪ್ರಭುತ್ವದ ಮರುಸ್ಥಾಪನೆಯ ಹೋರಾಟದಲ್ಲೂ ಗಮನಾರ್ಹ ಪಾತ್ರ ವಹಿಸಿತು. ಇವೆಲ್ಲಾ ಸೇರಿ ದೇಶದಲ್ಲಿ ಪಕ್ಷದ ಪ್ರತಿಷ್ಠೆ ಬೆಳೆಯಿತು.

ಹೆಚ್ಚುತ್ತಿರುವ ಪಾತ್ರ - ಪ್ರತಿಷ್ಠೆ

ಪಶ್ಚಿಮ ಬಂಗಾಳದಲ್ಲಿ 1977 ರಲ್ಲಿ ಹಾಗೂ ಒಂದು ವರ್ಷದ ನಂತರ 1978 ರಲ್ಲಿ ತ್ರಿಪುರಾದಲ್ಲಿ ಅಧಿಕಾರಕ್ಕೆ ಬಂದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಪಕ್ಷ ಮತ್ತು ಎಡ ಶಕ್ತಿಗಳು ಹೇಗೆ ಬಂಡವಾಳಶಾಹಿ-ಭೂಮಾಲಿಕ ಪಕ್ಷಗಳಿಗಿಂತ ಭಿನ್ನವಾಗಿವೆ ಎಂಬುದನ್ನು ಕಾರ್ಯತಃ ತೋರಿಸಿಕೊಟ್ಟವು. ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆಯ ತೀವ್ರ ಮಿತಿಗಳೊಳಗೆ ಕೆಲಸಮಾಡುತ್ತಾ ಈ ಎಡರಂಗ ಸರ್ಕಾರಗಳು ಜನಸಮೂಹಗಳಿಗೆ ಪರಿಹಾರ ಒದಗಿಸುವಲ್ಲಿ, ಭೂ ಸುಧಾರಣೆಗಳು ಮತ್ತು ಇತರ ಜನ-ಪರ ಕ್ರಮಗಳಲ್ಲಿ ಗಮನಾರ್ಹ ಪಾತ್ರ ವಹಿಸಿದವು. ಅವು ಎಂತಹ ಕಠಿಣ ಸಂದರ್ಭದಲ್ಲೂ ಸದಾ ದುಡಿಯುವ ಜನಗಳೊಂದಿಗೆ, ಅವರ ಹೋರಾಟಗಳ ಪರವಾಗಿ ನಿಂತವು. ಕೇರಳದಲ್ಲಿ ಎಡನೇತೃತ್ವದ ಸರ್ಕಾರಗಳಿದ್ದಾಗಲೂ ಅವು ಇಂತಹುದೇ ಪಾತ್ರವಹಿಸಿದವು.

1980 ರ ದಶಕದ ಮಧ್ಯ ಭಾಗದಲ್ಲಿ ಪಂಜಾಬ್ ಮತ್ತಿತರ ಕಡೆ ಭಯೋತ್ಪಾದನೆಯ ಬೆದರಿಕೆಯನ್ನು ಎದುರಿಸುವಲ್ಲಿಯೂ ಒಂದು ಧೀರ ಪಾತ್ರವಹಿಸಿತು. ನಮ್ಮ ಸಂಗಾತಿಗಳು ದೇಶದ ಐಕ್ಯತೆ ಮತ್ತು ಸಮಗ್ರತೆಯ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಲೂ ಹಿಂಜರಿಯಲಿಲ್ಲ. ಹೀಗೆ ಪಕ್ಷದ ಪಾತ್ರ, ಅದರೊಡನೆ ಅದರ ಪ್ರತಿಷ್ಠೆ ಈ ಅವಧಿಯಲ್ಲಿ ಬೆಳೆಯುತ್ತಾ ಸಾಗಿತು,

1980 ರ ಎರಡನೇ ದಶಕದಲ್ಲಿ ಬಹುಸಂಖ್ಯಾತ ಕೋಮುವಾದ ತಲೆ ಎತ್ತಿದ್ದನ್ನು ಕಂಡೆವು. ಇದು ನಮ್ಮ ರಾಷ್ಟ್ರೀಯ ಐಕ್ಯತೆಗೇ ಬೆದರಿಕೆಯೊಡ್ಡಿತು. ಅಂತಿಮವಾಗಿ ಇದು ಡಿಸೆಂಬರ್ 1992 ರಲ್ಲಿ ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣವಾಯಿತು. ಇದು ಪಕ್ಷಕ್ಕೆ ಭಾರಿ ಪರೀಕ್ಷೆಯ ಸಮಯ. ಆದರೆ ಆಗಾಗ ಸೂಕ್ತ ಕಾರ್ಯತಂತ್ರಗಳನ್ನು ಅನುಸರಿಸಿದ್ದರಿಂದ ನಾವು ಪರಿಸ್ಥಿತಿಯನ್ನು ಯೋಗ್ಯ ರೀತಿಯಲ್ಲೇ ಎದುರಿಸಿ ನಿಂತೆವು. ಕನಿಷ್ಠ ಎರಡು ಬಾರಿ (1989 ಮತ್ತು 1996 ರಲ್ಲಿ) ಕೇಂದ್ರದಲ್ಲಿ ಸರ್ಕಾರದ ಮೇಲೆ ಪ್ರಾಬಲ್ಯವನ್ನು ಗಳಿಸದಂತೆ ಅಥವಾ ಅಧಿಕಾರ ಗಿಟ್ಟಿಸದಂತೆ ಬಿಜೆಪಿಯ ಪ್ರಯತ್ನಗಳನ್ನು ವಿಫಲಗೊಳಿಸಲಾಯಿತು. 1991 ರಿಂದ ಪಕ್ಷ ಐಎಂಎಫ್-ವಿಶ್ವಬ್ಯಾಂಕ್ ಬೆಂಬಲದ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಗಳ ಧಾಳಿಗಳ ವಿರುದ್ಧವೂ ಹೋರಾಟ ನಡೆಸಿದೆ. ಈ ನೀತಿಗಳು ಮಾರ್ಚ್ 1998 ರಲ್ಲಿ ಅಧಿಕಾರಕ್ಕೆ ಬಂದ ಕೋಮುವಾದಿ ಶಕ್ತಿಗಳಿಗೆ ಇನ್ನಷ್ಟು ಕುಮ್ಮಕ್ಕು ನೀಡಿತು. ಕಾಂಗ್ರೆಸ್ ಪಕ್ಷ ಕೋಮುವಾದಿ ಶಕ್ತಿಗಳಿಗೆ ಶರಣಾದದ್ದು ಪರಿಸ್ಥಿತಿಯನ್ನು ಇನ್ನಷ್ಟು ಕ್ಲಿಷ್ಟಗೊಳಿಸಿತು. ಈ ಮೂಲಕ ಬಿಜೆಪಿಗೆ ನೆರವಾಗಿ ಕಾಂಗ್ರೆಸ್‌ನ ಸಾಮೂಹಿಕ ನೆಲೆಗೆ ಧಕ್ಕೆ



ತಂದುಕೊಂಡಿತು.

ಫ್ಯಾಸಿಸ್ಟ್ ಭೂತ

1998 ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಅದು ಒಂದು ಬಂಡವಾಳಶಾಹಿ- ಭೂಮಾಲಕ ಪಕ್ಷದ ಬದಲು ಇನ್ನೊಂದು ಬಂಡವಾಳಶಾಹಿ-ಭೂಮಾಲಕ ಪಕ್ಷ ಅಧಿಕಾರಕ್ಕೆ ಬಂದ ಸಂಗತಿಯೇನಲ್ಲ. ಸಿಪಿಐ(ಎಂ) ನ 16ನೇ ಮಹಾಧಿವೇಶನ (ಕೋಲ್ಕತ್ತಾ, ಅಕ್ಟೋಬರ್ 1998) ಗಮನಿಸಿದಂತೆ ಬಿಜೆಪಿಯ ಹಿಂದೆ ದೇಶದ ಮೇಲೆ ಒಂದು ಮತೀಯ ಪ್ರಭುತ್ವವನ್ನು ಹೇರಬಯಸುವ ಕೋಮುವಾದಿ-ಫ್ಯಾಸಿಸ್ಟ್ ಆರ್‌ಎಸ್‌ಎಸ್ ನಿಂತಿದೆ. ಅಲ್ಲದೆ ಆರ್‌ಎಸ್‌ಎಸ್ ಈಗ ಅಧಿಕಾರದ ಎಲ್ಲಾ ಸ್ಥಳಗಳ ಹತೋಟಿ ಪಡೆಯಿತು ಹಾಗೂ ಅದನ್ನು ತಮ್ಮ ದುಷ್ಟ ಉದ್ದೇಶಗಳ ಈಡೇರಿಕೆಗಾಗಿ ಬಳಸಲಾರಂಭಿಸಿತು. ಈ ಅವಧಿಯಲ್ಲಿ ದೇಶದ ಅತೀ ಸಣ್ಣ ಸಂಖ್ಯೆಯ ಅಲ್ಪಸಂಖ್ಯಾತರಾದ ಕ್ರಿಶ್ಚಿಯನ್ ಸಮುದಾಯದ ಮೇಲೆ ಗುಜರಾತ್ ಮತ್ತಿತರ ಹಲವು ಭಾಗಗಳಲ್ಲಿ ಮಾರಣಾಂತಿಕ ಧಾಳಿ ನಡೆಸಲಾಯಿತು. ಶಾಲಾ ಪಠ್ಯ ಪುಸ್ತಕಗಳು, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳು ಹಾಗೂ ಮಾಧ್ಯಮ ಸಂಸ್ಥೆಗಳು ಇತ್ಯಾದಿಗಳನ್ನು ಕೇಸರೀಕರಣಗೊಳಿಸಿ ಸಾರ್ವಜನಿಕ ಅಭಿಪ್ರಾಯವನ್ನು ವಿಶೇಷವಾಗಿ, ಮಕ್ಕಳ ಮಾನಸಿಕತೆಯನ್ನು ವಿಕೃತಗೊಳಿಸಲು ಪ್ರಯತ್ನಿಸಲಾಯಿತು. ಕೇಸರೀಪಡೆಗಳು ಗುಜರಾತಿನಲ್ಲಿ ಸ್ವಾತಂತ್ರ್ಯದನಂತರದ ಇತಿಹಾಸದಲ್ಲೇ ಅತೀ ಭೀಕರವಾದ ಮುಸ್ಲಿಂ-ವಿರೋಧಿ ನರಸಂಹಾರವನ್ನು ತಮ್ಮ ಹತೋಟಿಯಲ್ಲಿದ್ದ ಮತ್ತು ಕೇಂದ್ರ ಸರ್ಕಾರಗಳ ನೇರ ನೆರವು ಮತ್ತು ಪೋಷಣೆಯಿಂದ ಅವರು ನಡೆಸಿದ್ದು ಈ ಅವಧಿಯಲ್ಲೇ. ಈ ಸಾಮೂಹಿಕ ಹತ್ಯಾಕಾಂಡ ಪ್ರತಿಧ್ವನಿ ಈಗಲೂ ನಮ್ಮ ರಾಜಕೀಯ ಜೀವನದಲ್ಲಿ ಕೇಳಿಬರುತ್ತಿದೆ. ಅಂತರ್ರಾಷ್ಟ್ರೀಯ ರಂಗದಲ್ಲಿ ನಮ್ಮ ಅಲಿಪ್ತ ನೀತಿಯನ್ನು ಕಳಚಿಹಾಕಿ ವಿದೇಶಾಂಗ ನೀತಿಗೆ ಸಾಮ್ರಾಜ್ಯಶಾಹಿ-ಪರ ತಿರುವು ನೀಡಲಾಯಿತು. ಬಿಜೆಪಿ ನೇತೃತ್ವದ ಆಡಳಿತ ನಮ್ಮ ಉಪಖಂಡದಲ್ಲಿ ಪರಮಾಣು ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಹುಟ್ಟುಹಾಕಿ ನಮ್ಮನ್ನು ಪರಮಾಣು ಜ್ವಾಲೆಯ ಅಂಚಿಗೆ ತಂದು ನಿಲ್ಲಿಸಿತು. ತಾನು ನೀತಿಬದ್ಧ ಮತ್ತು ಭಿನ್ನ ರೀತಿಯ ಪಕ್ಷ ಎಂದು ಅಬ್ಬರಿಸಿದರೂ ಬಿಜೆಪಿ ನೇತೃತ್ವದ ಆಡಳಿತ ಭ್ರಷ್ಟಾಚಾರದಲ್ಲಿ ಹಿಂದಿನ ಎಲ್ಲಾ ಸರ್ಕಾರಗಳ ದಾಖಲೆಗಳ್ನು ಮುರಿಯಿತು.

ಐಎಂಎಫ್-ವಿಶ್ವಬ್ಯಾಂಕ್ ರೂಪಿಸಿದ, ಜನಮನ್ನಣೆ ಗಳಿಸಲಾರದ ಹೊಸ ಆರ್ಥಿಕ ನೀತಿಗಳನ್ನು ಈ ಆಡಳಿತ ಅನುಸರಿಸಿದ್ದು ಬಹಳ ಅಸಂತೃಪ್ತಿಯನ್ನು ಹುಟ್ಟುಹಾಕಿತು. ಇದನ್ನು ಅದು 'ಭಾರತ ಪ್ರಕಾಶಿಸುತ್ತಿದೆ' ಪ್ರಚಾರದ ಮೂಲಕ ಮೂಲೆಗೊತ್ತಲು ಪ್ರಯತ್ನಿಸಿತು. ಆ ಪ್ರಚಾರ ವಿಫಲವಾಯಿತು. ಬಿಜೆಪಿ ನೇತೃತ್ವದ ಆಡಳಿತ 2004 ರ ಲೋಕಸಭಾ ಚುನಾವಣೆಗಳಲ್ಲಿ ಒಂದು ಅವಮಾನಕಾರೀ ಸೋಲುಂಡಿತು ಎಂಬುದು ಬೇರೆ ಮಾತು.

ಹೆಚ್ಚಿದ ಜವಾಬ್ದಾರಿ

ಆದರೆ 2004 ರ ಚುನಾವಣೆಗಳು ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲೆ ಭಾರೀ ಹೊಣೆಯನ್ನು ಹಾಕಿವೆ. 17ನೇ ಮಹಾಧಿವೇಶನ (ಹೈದರಾಬಾದ್, ಮಾರ್ಚ್ 2002), ಪಕ್ಷದ ಮುಂದೆ ಮೂರು ನಿರ್ಣಾಯಕ ಕಾರ್ಯಾಭಾರಗಳನ್ನು ಇಟ್ಟಿತ್ತು - ಬಿಜೆಪಿ ನೇತೃತ್ವದ ಕೋಮುವಾದಿ ಶಕ್ತಿಗಳನ್ನು ಪರಾಭವಗೊಳಿಸುವುದು, ಕೇಂದ್ರದಲ್ಲಿ ಒಂದು ಜಾತ್ಯತೀತ ಸರ್ಕಾರ ಬರುವಂತೆ ಮಾಡುವುದು ಹಾಗೂ ಲೋಕಸಭೆಯಲ್ಲಿ ಎಡಪಕ್ಷಗಳ ಬಲ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು. ಈ ಮೂರೂ ಗುರಿಗಳು ಈಡೇರಿವೆ ಎಂಬ ತೃಪ್ತಿಯ ಭಾವನೆ ನಮ್ಮಲ್ಲಿ ಇರಬಹುದು. ವಿಶೇಷವಾಗಿ, ಲೋಕಸಭೆಯಲ್ಲಿ ಈಗ ಎಡಪಕ್ಷಗಳು ಹಿಂದೆ ಯಾವುದೇ ಚುನಾವಣೆಗೆ ಹೋಲಿಸಿದರೂ ಅತಿಹೆಚ್ಚು ಸ್ಥಾನಗಳನ್ನು ಪಡೆದಿದೆ ಹಾಗೂ ಸ್ವಲ್ಪ

ಮಟ್ಟಿಗೆ ಸರ್ಕಾರ ನೀತಿಗಳ ಮೇಲೆ ಪ್ರಭಾವ ಬೀರುವ ಸ್ಥಾನವಲ್ಲಿದೆ. ಆದರೂ, ಒಂದು ಕದನ ಗೆದ್ದಿದ್ದೇವೆಯಷ್ಟೇ, ಇಡೀ ಯುದ್ಧ ಇನ್ನೂ ಮುಗಿದಿಲ್ಲ. ಮುಂಬರುವ 18ನೇ ಮಹಾಧಿವೇಶನ ಎರಡು ರಾಜಕೀಯ ನಿರ್ಣಯ ಹೇಳುವಂತೆ ಕೋಮುವಾದಿ ಕೂಟವನ್ನು ಸೋಲಿಸಲಾಗಿದೆಯಷ್ಟೆ. ಅದರ ಶಕ್ತಿಯನ್ನು ಪೂರ್ಣವಾಗಿ ಉಡುಗಿಸಿಲ್ಲ. ಈ ದಸ್ತಾವೇಜು ಕಾಂಗ್ರೆಸ್ ಮತ್ತು ಯುಪಿಎ ಮಾತ್ರವಲ್ಲ ಹೊರಗಡೆಯಿಂದ ಅದಕ್ಕೆ ಬೆಂಬಲ ನೀಡಿರುವ ಎಡಪಕ್ಷಗಳೂ ಆತಂಕಪಡಬೇಕಾದ ವಿಷಯಗಳನ್ನು ನಿರ್ದಿಷ್ಟವಾಗಿ ಗುರುತಿಸಿದೆ.

ಯುಪಿಎ ಆಡಳಿತ ಕೂಡಾ ಹಿಂದಿನ ಹಲವು ಆಡಳಿತಗಳು - ನರಸಿಂಹರಾವ್,ದೇವೇಗೌಡ, ಗುಜ್ರಾಲ್ ಹಾಗೂ ವಾಜಪೇಯಿ ನೇತೃತ್ವದ ಸರ್ಕಾರಗಳು - ಅನುಸರಿಸಿದ ಜನಮನ್ನಣೆ ಕಳಕೊಂಡ ಆರ್ಥಿಕ ನೀತಿಗಳನ್ನೇ ಅನುಸರಿಸಲು ಕಟಿಬದ್ಧವಾದಂತಿರುವುದು ಪರಿಸ್ಥಿತಿಯನ್ನು ಇನ್ನಷ್ಟು ಕ್ಲಿಷ್ಟಗೊಳಿಸಿದೆ. ಕಳೆದ 14 ವರ್ಷಗಳಲ್ಲಿ ಈ

ದಾಳಿಯಿಂದ ಸಾಧ್ಯವಾದಷ್ಟು ಮಟ್ಟಿಗೆ ರಾಷ್ಟ್ರೀಯ ಹಿತಾಸಕ್ತಿಗಳನ್ನು, ಜನತೆಯ ಹಿತಾಸಕ್ತಿಗಳನ್ನು ರಕ್ಷಿಸುವ ಒಂದು ಪ್ರಯತ್ನವನ್ನು ಲೋಕಸಭೆಯನ್ನು ಎಡಪಕ್ಷಗಳು ಮಾಡಿದವು. ಎಡಪಕ್ಷಗಳು ಹಲವು ಜನ-ಪರ ತಿದ್ದುಪಡಿಗಳನ್ನು ಈ ಮಸೂದೆಯಲ್ಲಿ ಅಳವಡಿಸಲು ಪ್ರಯತ್ನಿಸಿ ಯಶಸ್ವಿಯಾದವು. ಅತ್ತ ಬಿಜೆಪಿ ಹಂತಕ ಪಾತ್ರವನ್ನು ವಹಿಸಿತು. ಕೆಲವೊಮ್ಮೆ ಅದು ಈ ಮಸೂದೆಯ ಬಗ್ಗೆ ಮರಣಾಂತಿಕ ಮೌನ ತಳೆಯಿತು. ಡಿಸೆಂಬರ್ 26, 2004 ರ ಸುಗ್ರೀವಾಜ್ಞೆಯ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗಳನ್ನು ಸೇರಿಸಿಕೊಳ್ಳಲು ನಿರಾಕರಿಸಿತು. ಕೆಲವೊಮ್ಮೆ ಈ ಮಸೂದೆಯ ಅಂಶಗಳನ್ನೆಲ್ಲಾ ಬಿಜೆಪಿ ಆಡಳಿತವೇ ರೂಪಿಸಿದ್ದರಿಂದ ಅದನ್ನು ಪಾಸು ಮಾಡುವಲ್ಲಿ ಸರ್ಕಾರಕ್ಕೆ ಬೆಂಬಲ ನೀಡುವ ಇಂಗಿತಗಳನ್ನು ವ್ಯಕ್ತಪಡಿಸಿತು. ಆದರೆ ಇದ್ದಕ್ಕಿದ್ದಂತೆ ದೇಶದಲ್ಲೆಲ್ಲಾ ಈ ಪ್ರಶ್ನೆಯ ಮೇಲೆ ವ್ಯಕ್ತಗೊಂಡ ಜನತೆಯ ಸಿಟ್ಟು ಮತ್ತು ಪ್ರತಿಭಟನೆಯಿಂದಾಗಿ ತನ್ನ ನಿಲುವು ಬದಲಿಸಿ ತನ್ನ ವಿರೋಧವನ್ನು ಪ್ರಕಟಿಸಿತು. ಬಿಜೆಪಿ (ಎನ್‌ಡಿಎ) ಎಂತಹ ಮೋಸಕ್ಕೂ

...ಸಿ ನಿಲ್ಲುವ ವಿಶ್ವಾಸ

ಹರ್ಕಿಶನ್ ಸಿಂಗ್ ಸುರ್ಜಿತ್

ನೀತಿಗಳನ್ನು ಅನುಸರಿಸಿದ ಯಾವ ಸರ್ಕಾರವೂ ಮತ್ತೆ ಅಧಿಕಾರಕ್ಕೆ ಮರಳಲಿಲ್ಲ ಎಂದರೆ ತಪ್ಪಾಗಲಾರದು.

ಇದೇ ಆಳುವ ಯುಪಿಓ ಎಚ್ಚರದಿಂದಿರುವಂತೆ ಮಾಡಬೇಕಿತ್ತು. ದುರದೃಷ್ಟವಶಾತ್, ಯುಪಿಎ ಅದನ್ನು ಗಮನಿಸುವಲ್ಲಿ ಸೋತಿದೆ. ಎಫ್‌ಡಿಐ ಮಿತಿ ಏರಿಕೆಯಾಗಲಿ, ಬೇರೆ ಪ್ರಶ್ನೆಗಳಲ್ಲಾಗಲೀ ಈ ಆಡಳಿತ ಅನಗತ್ಯವಾಗಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡದಡಿ ಕೆಲಸ ಮಾಡುತ್ತಿದೆ, ಆ ಪ್ರಕ್ರಿಯೆಯಲ್ಲಿ ದೇಶದ, ಜನಗಳ ಬದುಕಿನ ಹಿತಾಸಕ್ತಿಗಳನ್ನು ನಿರ್ಲಕ್ಷಿಸುತ್ತಿದೆ ಎಂದು ನಂಬಲು ಸಾಕಷ್ಟು ಆಧಾರಗಳಿವೆ. ವಿದೇಶಾಂಗ ನೀತಿಗೆ ಸಂಬಂಧಪಟ್ಟಂತೆ, ಮೂರನೇ ಜಗತ್ತಿನ ದೇಶಗಳ ಆತಂಕದಿಂದ ಕೂಗಿಕೊಳ್ಳುತ್ತಿದ್ದರೂ ಅಲಿಪ್ತ ಆಂದೋಲನವನ್ನು ಪುನರುಜ್ಜೀವನ ಗೊಳಿಸುವತ್ತ ಸಾಕಷ್ಟು ಗಮನ ನೀಡಿಲ್ಲ. ಆಗಾಗ ಅರೆಬುದ್ಧಿವಂತಿಕೆಯನ್ನು ಅದು ಪ್ರದರ್ಶಿಸಿದೆ - ಉದಾ: ಇರಾಕಿಗೆ ಸೇನಾ ಪಡೆಗಳು ಚುನಾವಣಾ ಸಿಬ್ಬಂದಿಯನ್ನು ಕಳಿಸುವ ವಿಷಯದಲ್ಲಿ, ಇಸ್ರೇಲಿನೊಂದಿಗೆ ಸಂಬಂಧದ ವಿಷಯದಲ್ಲಿ, ಇತ್ತೀಚಿಗೆ ಈ ಆಡಳಿತ ಅಮೆರಿಕನ್ ಸಾಮ್ರಾಜ್ಯಶಾಹಿ ಗಳು ಬಲೆ ಬೀಸಿರುವುದನ್ನು ಗಮನಿಸಿದಂತೆ ಕಾಣುತ್ತಿಲ್ಲ. ಅವರು ತಮ್ಮ ಒಂದು ಜೇಬಿನಲ್ಲಿ ಭಾರತವನ್ನು, ಇನ್ನೊಂದು ಜೇಬಿನಲ್ಲಿ ಪಾಕಿಸ್ತಾನವನ್ನು ಇಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಇದು ನಮ್ಮ ಉಪಖಂಡದಲ್ಲಿ ಇನ್ನೊಂದು ಸುತ್ತಿನ ಶಸ್ತ್ರಾಸ್ತ್ರ ಪೈಪೋಟಿಯನ್ನು ಆರಂಭಿಸಲಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಇಂತಹ ಇಂದು ಸನ್ನಿವೇಶದಲ್ಲಿ ಕೋಮುವಾದಿ ಶಕ್ತಿಗಳು ನೇಪಥ್ಯದಲ್ಲಿ ಕಾದಿರುವಾಗ ಯುಪಿಎ ಮತ್ತು ಎಡಪಕ್ಷಗಳ ನಡುವಿನ ಕಂದರ ತಮಗೆ ಮತ್ತೊಮ್ಮೆ ಅಧಿಕಾರಕ್ಕೆ ಮರಳಲು ಅವಕಾಶ ಕಲ್ಪಿಸಬಹುದು ಎಂದು ನಿರೀಕ್ಷಿಸುತ್ತಿರುವಾಗ ಬಹಳ ಎಚ್ಚರದಿಂದ ಸಾಗಬೇಕಾಗಿದ್ದು ಸ್ವಾಭಾವಿಕ. ಎಡಪಕ್ಷಗಳಿಗೆ ಇದೊಂದು ಇಕ್ಕಟ್ಟಿನ ಪರಿಸ್ಥಿತಿ, ಐಎಂಎಫ್-ವಿಶ್ವಬ್ಯಾಂಕ್ ನೀತಿಗಳು ಅಡೆ-ತಡೆಯಿಲ್ಲದೆ ಸಾಗಲು ಬಿಡುವಂತಿಲ್ಲ, ಅದೇ ವೇಳೆಗೆ ಬಿಜೆಪಿ ಕಾತುರದಿಂದ ಕಾಯುತ್ತಿರುವ ಅವಕಾಶವನ್ನು ಕೊಡಲು ಸಾಧ್ಯವಿಲ್ಲ.

ಇತ್ತೀಚೆಗೆ ಪೇಟೆಂಟ್ ತಿದ್ದುಪಡಿ ಮಸೂದೆಯಲ್ಲಿ ಮತದಾನ ಒಂದು ಉದಾಹರಣೆ. ಹಿಂದಿನ ಬಿಜೆಪಿ ಆಡಳಿತ ಸಿದ್ಧಪಡಿಸಿದ ಒಂದು ರಾಷ್ಟ್ರ-ವಿರೋಧಿ ಕರಡು ಮಸೂದೆಯ

ಸಿದ್ಧವಾಗಿದೆ. ಯುಪಿಎ ಮತ್ತು ಎಡಪಕ್ಷಗಳ ನಡುವೆ ಭಿನ್ನಾಭಿಪ್ರಾಯದಿಂದ ಯುಪಿಎ ಸರ್ಕಾರ ಪತನಗೊಳ್ಳುವ ದಿನಗಳು ನಿರೀಕ್ಷೆಯಲ್ಲಿವೆ ಎಂಬುದು ಸ್ಪಷ್ಟವಾಗುತ್ತದೆ.

ಭವಿಷ್ಯದ ಸವಾಲುಗಳು

ರಾಷ್ಟ್ರೀಯ ಪರಿಸ್ಥಿತಿ ಎಂತಹ ಇಕ್ಕಟ್ಟಿನದ್ದು ಎಂಬುದಕ್ಕೆ ಇದು ಒಂದು ಉದಾಹರಣೆಯಷ್ಟೆ. ಆಳುವ ಮೈತ್ರಿಕೂಟ ಜನತೆಯ ಹಿತಾಸಕ್ತಿಗಳನ್ನು ನಿರ್ಲಕ್ಷಿಸಲಾಗದಂತೆ ಅದೇ ವೇಳೆಗೆ ಅಸಂತೃಪ್ತಿಯ ಲಾಭವನ್ನು ಬಿಜೆಪಿ ಪಡೆಯಲಾಗದಂತೆ ಮಾಡಲು ಸಿಪಿಐ(ಎಂ) ಬಹಳ ಎಚ್ಚರದಿಂದ ಸೂಕ್ತ ಕಾರ್ಯತಂತ್ರಗಳನ್ನು ರೂಪಿಸಬೇಕಾಗಿದೆ ಎಂಬುದು ಸ್ಪಷ್ಟ. ರಾಷ್ಟ್ರೀಯ ಮಟ್ಟದಲ್ಲಿ ವರ್ಗ ಬಲಾಬಲ ಈಗಿರುವ ರೀತಿಯಲ್ಲೇ ಬಹಳ ದಿನ ಮುಂದುವರೆಯುವುದಿಲ್ಲ ಎಂಬುದೂ ಸ್ಪಷ್ಟ. ಯಾವುದೇ ಆಕಸ್ಮಿಕ ಬೆಳವಣಿಗೆಯನ್ನು ಎದುರಿಸಲು ನಾವು ಅತ್ಯಂತ ಎಚ್ಚರದಿಂದಿರಬೇಕು.

ಇಂತಹ ಸನ್ನಿವೇಶದಲ್ಲೇ ಮುಂಬರುವ ಪಕ್ಷದ ಮಹಾಧಿವೇಶನದ ಮಹತ್ವವನ್ನು ಕಾಣಬೇಕು.

ಒಂದು ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ಮಹಾಧಿವೇಶನ ಒಂದು ಪ್ರದರ್ಶನವಲ್ಲ, ನಿರ್ದಿಷ್ಟ ಅವಧಿಗಳಲ್ಲಿ ಪೂರೈಸಬೇಕಾದ ಕಾಟಾಚಾರದ ಕೆಲಸವಲ್ಲ. ಅದು ಇಡೀ ಪಕ್ಷ ಗಂಭೀರವಾಗಿ ಭಾಗವಹಿಸುವ ಒಂದು ವ್ಯವಹಾರ. ಪಕ್ಷದ ಮಹಾಧಿವೇಶನ ಎರಡು ತಿಂಗಳ ಮೊದಲು ಕೇಂದ್ರ ಸಮಿತಿ ರಾಜಕೀಯ ನಿರ್ಣಯದ ಕರಡನ್ನು



ಪ್ರಕಟಿಸುತ್ತದೆ. ದೇಶಾದ್ಯಂತ ಪಕ್ಷದ ಸದಸ್ಯರು ತಂತಮ್ಮ ಘಟಕಗಳಲ್ಲಿ ಇದನ್ನು ಆಮೂಲಾಗ್ರವಾಗಿ ಚರ್ಚಿಸುತ್ತಾರೆ. ನಿಗದಿತ ದಿನಾಂಕದೊಳಗೆ ತಮ್ಮ ತಿದ್ದುಪಡಿಗಳನ್ನು ಕೇಂದ್ರ ಸಮಿತಿಗೆ ಕಳಿಸುತ್ತಾರೆ. ಕೇಂದ್ರ ಸಮಿತಿ ಅವುಗಳನ್ನು ಪರಿಶೀಲಿಸಿ ಪಕ್ಷದ ಮಹಾಧಿವೇಶನಕ್ಕೆ ವರದಿ ಮಾಡುತ್ತದೆ. ಅದೇ ರೀತಿ ಪಕ್ಷದ ಘಟಕಗಳು ಪ್ರತಿಹಂತದಲ್ಲಿ ತಮ್ಮ ಸಮ್ಮೇಳನಗಳನ್ನು ನಡೆಸುತ್ತದೆ. ಸಮಸ್ಯೆಗಳನ್ನು, ಪ್ರಶ್ನೆಗಳನ್ನು ಚರ್ಚಿಸುತ್ತದೆ, ಮುಂದಿನ ಸಮ್ಮೇಳನದವರೆಗೆ ತಮ್ಮ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುವ ನಿರ್ಣಯಗಳನ್ನು ಅಂಗೀಕರಿಸುತ್ತದೆ ಮತ್ತು ಮೇಲಿನ ಹಂತದ ಸಮ್ಮೇಳನಗಳಿಗೆ ಪ್ರತಿನಿಧಿಗಳನ್ನು ಆರಿಸುತ್ತದೆ. ಹೀಗೆ ರಾಜ್ಯ ಸಮ್ಮೇಳನಗಳು ಆರಿಸಿದ ಪ್ರತಿನಿಧಿಗಳು ಪಕ್ಷದ ಮಹಾಧಿವೇಶನದಲ್ಲಿ ಪಾಲ್ಗೊಳ್ಳುತ್ತಾರೆ. ಇದು ಪಕ್ಷದ ಅತ್ಯುನ್ನತ ಅಂಗ.

ಒಂದು ಕಮ್ಯುನಿಸ್ಟ್ ಪಕ್ಷದ ಕಾರ್ಯನಿರ್ವಹಣೆ ಪಕ್ಷದೊಳಗಿನ ಪ್ರಜಾಪ್ರಭುತ್ವವನ್ನು ಮತ್ತು ಕೇಂದ್ರವಾದವನ್ನು ಸಮಗ್ರೀಕರಿಸುತ್ತದೆ. ಪ್ರಜಾಸತ್ತಾತ್ಮಕ ಕೇಂದ್ರವಾದದ ಈ ಸಂಘಟನಾ ನೀತಿ ಕಾರ್ಯಾಚರಣೆಯಲ್ಲಿನ ಐಕ್ಯತೆ ಮತ್ತು ವೈಯಕ್ತಿಕ ಮುತುವರ್ಜಿಯನ್ನು ಬೆಸೆಯುವಂತದ್ದು. ಪಕ್ಷದ ಮಹಾಧಿವೇಶನದಲ್ಲೂ ಇದನ್ನು ಕಾಣಬಹುದು. ಇದು ಪಕ್ಷದ ಜೀವನದಲ್ಲಿ ಅತ್ಯುಚ್ಚ ಪ್ರಜಾಪ್ರಭುತ್ವವನ್ನು ಕಲ್ಪಿಸುತ್ತದೆ.

ಆದ್ದರಿಂದ ಒಂದು ಕಮ್ಯುನಿಸ್ಟ್ ಪಕ್ಷದ ಇತಿಹಾಸದಲ್ಲಿ ಒಂದು ಮಹಾಧಿವೇಶನ ಯಾವಾಗಲೂ ಒಂದು ಮಹತ್ವದ ಮೈಲಿಗಲ್ಲಾಗಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಅದು ಹಿಂದಿನ ಮಹಾಧಿವೇಶನದ ನಂತರದ ಗಳಿಸಿದ ಯಶಸ್ಸುಗಳು, ಎದುರಿಸಿದ ವಿಫಲತೆಗಳು ಹಾಗೂ ಮಾಡಿದ ಕೆಲಸಗಳನ್ನು ವಿಮರ್ಶಿಸುತ್ತದೆ ಹಾಗೂ ಮುಂದಿನ ಮೂರು ವರ್ಷಗಳಿಗೆ ಕಾರ್ಯತಂತ್ರದ ರೂಪುರೇಷೆಗಳನ್ನು, ರಾಜಕೀಯ ಮತ್ತು ಸಂಘಟನಾ ಕರ್ತವ್ಯಗಳನ್ನು ರೂಪಿಸುತ್ತದೆ. ಸಿಪಿಐ(ಎಂ)ನ ಚರಿತ್ರೆಯಲ್ಲೂ, ಪಕ್ಷದ ಮಹಾಧಿವೇಶನಗಳಲ್ಲೂ ಸಾಮಾನ್ಯ ಪರಿಸ್ಥಿತಿಗಳಲ್ಲೂ, ವಿಶೇಷ ಪರಿಸ್ಥಿತಿಗಳಲ್ಲೂ ಎಲ್ಲಾ ಮಟ್ಟಗಳಲ್ಲಿ ಪಕ್ಷದ ಕಾರ್ಯಕರ್ತರಿಗೆ ಮಾರ್ಗದರ್ಶನ ನೀಡಿವೆ. ಕೆಲವು ಉದಾಹರಣೆಗಳನ್ನು ನೋಡೋಣ. 7ನೇ ಮಹಾಧಿವೇಶನ (1964) ಪರಿಷ್ಕರಣಾವಾದಿ ಬೆದರಿಕೆಯನ್ನು ಎದುರಿಸಿತು. 8ನೇ ಮಹಾಧಿವೇಶನ(1968) ದುಸ್ಸಾಹಸವಾದದ ಸಮಸ್ಯೆಯನ್ನು ಪರಿಶೀಲಿಸಿತು. 10ನೇ ಮಹಾಧಿವೇಶನ(1978) ತುರ್ತುಪರಿಸ್ಥಿತಿಯ ನಂತರದ ಅವಧಿಯಲ್ಲಿ ಮೊತ್ತಮೊದಲ ಬಾರಿಗೆ ಏಕಪಕ್ಷ ಗುತ್ತೇದಾರಿಕೆಯನ್ನು ಮುರಿದ ಸನ್ನಿವೇಶದಲ್ಲಿ ಪಕ್ಷಕ್ಕೆ ಮಾರ್ಗದರ್ಶನ ನೀಡಿತು. 13ನೇ ಮಹಾಧಿವೇಶನ (1988) ಹೆಚ್ಚುತ್ತಿರುವ ಕೋಮುವಾದಿ ಬೆದರಿಕೆಯನ್ನು ಎದುರಿಸುವ ದಾರಿಗಳನ್ನು ತೋರಿಸಿ ಕೊಟ್ಟಿತು. 14ನೇ ಮಹಾಧಿವೇಶನ(1992) ದ ಬಗ್ಗೆ ವಿಶೇಷವಾಗಿ ಉಲ್ಲೇಖಿಸ ಲಾಗುತ್ತದೆ.



ಪೂರ್ವಯುರೋಪಿನಲ್ಲಿ ಸಮಾಜವಾದದ ಪತನ ಹಾಗೂ ಸೋವಿಯತ್ ಒಕ್ಕೂಟದ ವಿಘಟನೆಯನ್ನು ಗಂಭೀರವಾಗಿ ವಿಶ್ಲೇಷಿಸಿ ಕೆಲವು ಅಮೂಲ್ಯ ತೀರ್ಮಾನಗಳಿಗೆ ಬಂತು. ಇದರಿಂದಾಗಿ ಬೇರೆ ಕೆಲವು ದೇಶಗಳಲ್ಲಿ ಕೆಲವು ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳಿಗೆ ಬಂದೊದಗಿದ ದುಃಸ್ಥಿತಿ ಇಲ್ಲಿ ಸಿಪಿಐ(ಎಂ)ನ್ನು ತಟ್ಟಲಿಲ್ಲ. 16 ಮತ್ತು 17ನೇ ಮಹಾಧಿವೇಶನಗಳು ಆಗ ಅಧಿಕಾರದ ಚುಕ್ಕಾಣಿ ಹಿಡಿದಿದ್ದ ಕೋಮುವಾದಿ ಶಕ್ತಿಗಳ ಸವಾಲನ್ನು ಎದುರಿಸುವ ನಿರ್ದಿಷ್ಟ ಕ್ರಮಗಳನ್ನು ರೂಪಿಸಿದವು.

ಈಗ ಸಿಪಿಐ(ಎಂ)ನ 18ನೇ ಮಹಾಧಿವೇಶನ ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ಹೊರಹಾಕಿದ್ದರೂ, ಮತ್ತೆ ಹಿಂದಿರುಗುವ ಸಾಧ್ಯತೆಗಳಿರುವ, ಎಡಪಕ್ಷಗಳನ್ನು ಬಿಟ್ಟು ಇತರ ಜಾತ್ಯತೀತ ಪಕ್ಷಗಳು ಇನ್ನೂ ಕೋಮುವಾದಿ ಬೆದರಿಕೆಯನ್ನು ಪೂರ್ಣವಾಗಿ ಗ್ರಹಿಸಿಲ್ಲದ ಒಂದು ಸಮಯದಲ್ಲಿ ನಡೆಯುತ್ತಿದೆ. ಬಿಹಾರ ಮತ್ತು ಝಾರ್ಖಂಡ್‌ನ ಇತ್ತೀಚಿನ ವಿಧಾನಸಭಾ ಚುನಾವಣೆಗಳು ಜಾತ್ಯಾತೀತ ಶಕ್ತಿಗಳು ಈಗಲೂ ಹರಿದು ಹಂಚಿಹೋಗಿದ್ದರಿಂದ ದೇಶದ ರಾಜಕೀಯ ಎಂತಹ ಗುಂಪುಗಳನ್ನು ಅನುಭವಿಸಬೇಕಾಗಿ ಬರುತ್ತಿದೆ ಎಂಬುದನ್ನು ತೋರಿಸಿದೆ. ಆರ್ಥಿಕ ನೀತಿಗಳಿಗೆ ಸಂಬಂಧಪಟ್ಟಂತೆ ಜಾತ್ಯತೀತ ಪಕ್ಷಗಳು ಇನ್ನೂ ಕೂಡಾ ಸ್ಪಷ್ಟವಾಗಿ ತಮ್ಮನ್ನು ಕೋಮುವಾದಿ ಕೂಟದಿಂದ ಪ್ರತ್ಯೇಕಿಸಿಕೊಂಡಿಲ್ಲ.

ಇವು ಮತ್ತು ಇತರ ಪ್ರಶ್ನೆಗಳು, ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಪ್ರಶ್ನೆಗಳು ಮುಂಬರುವ ಸಿಪಿಐ(ಎಂ) ಮಹಾಧಿವೇಶನದ ಮುಂದಿವೆ. ಮಹಾಧಿವೇಶನ ಇದನ್ನೆಲ್ಲಾ ಕೈಗೆತ್ತಿಕೊಂಡು ಮುಂದಿನ ಮಹಾಧಿವೇಶನದವರೆಗೆ ಪಕ್ಷಕ್ಕೆ ಮಾರ್ಗದರ್ಶನ ನೀಡಲು ಸೂಕ್ತ ಕಾರ್ಯತಂತ್ರಗಳನ್ನು ವಿಕಾಸಗೊಳಿಸುತ್ತದೆ. 'ಮೂರ್ತ ಪರಿಸ್ಥಿತಿಯ ಮೂರ್ತ ವಿಶ್ಲೇಷಣೆ'ಯ ಲೆನಿನ್ ವಾದಿ ಬೋಧನೆಯ ಆಧಾರದಲ್ಲಿ ಸಿಪಿಐ(ಎಂ) ವಿವಿಧ ಏಳು-ಬೀಳುಗಳ ನಡುವೆ ತನ್ನ ಕಾರ್ಯಾಚರಣೆಯ ದಾರಿಯನ್ನು ರೂಪಿಸಿಕೊಳ್ಳುತ್ತಿರುವ ಬಗೆ. ಕಳೆದ ನಾಲ್ಕು ದಶಕಗಳ ಅನುಭವ ಭಾರತೀಯ ಕ್ರಾಂತಿಗೆ ಸಂಬಂಧಪಟ್ಟ ವಿವಿಧ ಪ್ರಶ್ನೆಗಳ ಮೇಲೆ ಸಿಪಿಐ(ಎಂ) ನ ನಿಲುವನ್ನು ಸ್ಪಷ್ಟವಾಗಿ ಸಾಬೀತುಗೊಳಿಸಿವೆ. ಮುಂಬರುವ ಮಹಾಧಿವೇಶನದಲ್ಲಿ ಪ್ರತಿಫಲಗೊಳ್ಳುವ ಪಕ್ಷದ ಸಾಮೂಹಿಕ ವಿವೇಚನೆ ಭವಿಷ್ಯದ ಸವಾಲುಗಳನ್ನು ಎದುರಿಸಲು ನೆರವಾಗುತ್ತದೆ ಎಂಬ ನಿರೀಕ್ಷೆ ನಮಗಿದೆ. ಈ ನಿರೀಕ್ಷೆಯಿಂದ ಇಡೀ ಪಕ್ಷ ಹಾಗೂ ದೇಶದ ಮತ್ತು ವಿದೇಶಗಳ ಅದರ ಹಿತೈಷಿಗಳು ಮುಂಬರುವ ಘಟನೆಯತ್ತ ನೋಡುತ್ತಿದ್ದಾರೆ. ○

ಪೇಟೆಂಟ್ ಕಾಯ್ದೆ ತಿದ್ದುಪಡಿಯಿಂದ ಔಷಧಿ ಬೆಲೆ ದುಬಾರಿಯಾಗಲಿದೆ

ಔಷಧ ಪ್ರತಿನಿಧಿಗಳ ಫೆಡರೇಶನ್‌ನ (FMRI) ಜನರಲ್ ಕೌನ್ಸಿಲ್ ಮೀಟಿಂಗ್ ಬಿಹಾರದ ರಾಜಧಾನಿ ಪಾಟ್ನಾದಲ್ಲಿ ಮಾರ್ಚ್ 18-20, 2005 ರಂದು ನಡೆಯಿತು. ಕಾಂ.ಬಸುದೇವ ಆಚಾರ್ಯ, ಸಿಪಿಎಂ ಲೋಕಸಭಾ ಸದಸ್ಯರು ಹಾಗೂ ಸಂಸದಿಯ ಮುಖಂಡರು, ಜನರಲ್ ಕೌನ್ಸಿಲ್ ಮೀಟಿಂಗ್‌ನ್ನು ಉದ್ಘಾಟಿಸಿದರು.

ವಿಶ್ವವ್ಯಾಪಾರ ಸಂಘಟನೆಯ ಒತ್ತಡಕ್ಕೆ ಮಣಿದು ಭಾರತೀಯ ಪೇಟೆಂಟ್ ಕಾನೂನು 1970 ರ ಸಂಪೂರ್ಣ ಬದಲಾವಣೆ ದೇಶಕ್ಕೆ ಗಂಡಾಂತರ ತರಲಿದೆಯೆಂದು ತಿಳಿಸಿದರು. ಈ ಪೇಟೆಂಟ್ ಕಾನೂನು ಸಹಾಯದಿಂದ ಔಷಧ ಕ್ಷೇತ್ರದಲ್ಲಿ ಸ್ವಾವಲಂಬನೆ ಪಡೆಯಲು ಹಾಗೂ ಇಡೀ ವಿಶ್ವದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ಔಷಧಗಳು ದೊರೆಯುವಂತೆ ಆಯಿತು. ಭಾರತದಲ್ಲಿ ಮಾತ್ರವಲ್ಲದೇ ನೆರೆಯ ಹಲವಾರು ರಾಷ್ಟ್ರಗಳಲ್ಲಿ ಕಡಿಮೆ ಬೆಲೆಯಲ್ಲಿ ಔಷಧಗಳು ದೊರೆಯುವಂತೆ ಆಗಿದೆ. ಆದರೆ ಈಗ ಪೇಟೆಂಟ್ ಕಾನೂನು ಸಂಪೂರ್ಣ ಬದಲಾವಣೆಯಿಂದ ಔಷಧ/ ಕೃಷಿ ಕ್ಷೇತ್ರದಲ್ಲಿ ವಿದೇಶಿ ಕಂಪನಿಗಳು ಏಕಸ್ವಾಮ್ಯತ್ವವನ್ನು ಪಡೆಯಲಿದ್ದು ಔಷಧಗಳ ಬೆಲೆ ಗಗನಕ್ಕೇರಲಿದೆ.

ಪೇಟೆಂಟ್ ಕಾನೂನು ತಿದ್ದುಪಡಿಗೆ ಕೇವಲ ಭಾರತದಲ್ಲಿ ಮಾತ್ರವಲ್ಲದೇ ಇನ್ನಿತರ ದೇಶಗಳಲ್ಲಿ ಕೂಡ ವಿರೋಧ ವ್ಯಕ್ತವಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯಿಂದ ಕೇಂದ್ರ ಸರಕಾರಕ್ಕೆ ಈ ದಿಶೆಯಲ್ಲಿ ಪತ್ರವೊಂದು ಬಂದಿದ್ದು ಪೇಟೆಂಟ್ ತಿದ್ದುಪಡಿ ಕೈಬಿಡುವಂತೆ ಒತ್ತಾಯಿಸಲಾಗಿದೆ. ಪ್ರಪಂಚದ ಹಲವಾರು ದೇಶಗಳಲ್ಲಿ ಭಾರತದ ಔಷಧಗಳು, ಪ್ರಮುಖವಾಗಿ ಹೆಚ್.ಐ.ವಿ/ ಏಡ್ಸ್ ವಿರುದ್ಧ, ಅತಿ ಕಡಿಮೆ ಬೆಲೆಯಲ್ಲಿ ದೊರೆಯುತ್ತಿದ್ದು, ಪೇಟೆಂಟ್ ತಿದ್ದುಪಡಿಯಿಂದ ಈ ಸೌಲಭ್ಯ ವಂಚಿತರಾಗುವರೆಂದು ಆ ಪತ್ರದಲ್ಲಿ ನಮೂದಿಸಲಾಗಿದೆ.

ಔಷಧ ಕ್ಷೇತ್ರದಲ್ಲಿನ ಅನೇಕ ಬೆಳವಣಿಗೆ ಕುರಿತು ದೇಶಾದ್ಯಂತ ಔಷಧ ಪ್ರತಿನಿಧಿಗಳು ಹೋರಾಟ ನಡೆಸುತ್ತಿರುವುದನ್ನು ಶ್ಲಾಘಿಸಿದರು. ಔಷಧ ವ್ಯಾಪಾರ ಕ್ಷೇತ್ರದಲ್ಲಿನ ಕಾಳಸಂತೆ ವಿರುದ್ಧ ನಡೆಸುತ್ತಿರುವ ಸುದೀರ್ಘ ಹೋರಾಟ, ಜನಪರ ಬೇಡಿಕೆಗಳಾದ ಔಷಧಗಳ ಬೆಲೆ ಇಳಿಕೆ, ಜೀವನಾವಶ್ಯಕ ಔಷಧಗಳ ಲಭ್ಯತೆ, ಔಷಧಗಳ ದುರ್ಬಳಕೆ ಮುಂತಾದ ಹೋರಾಟಗಳನ್ನು ಶ್ಲಾಘಿಸಿದರು. ಔಷಧಗಳ ದುರ್ಬಳಕೆ ಹಾಗೂ ಔಷಧಗಳ ಬೆಲೆಗಳಲ್ಲಿನ ವ್ಯತ್ಯಾಸ ಕುರಿತು ಪಾರ್ಲಿಮೆಂಟ್‌ನಲ್ಲಿ ಎಡಪಕ್ಷಗಳು ಹಲವಾರು ಬಾರಿ ವಿಷಯ ಚರ್ಚೆಗೆ ತಂದು ಕೇಂದ್ರ ಸರಕಾರ ಕೆಲವು ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿದೆಯೆಂದು ತಿಳಿಸಿದರು.

ಕೇಂದ್ರ ಸರಕಾರ ದೇಶದ ಜನರ ಆರೋಗ್ಯ ಕ್ಷೇತ್ರಕ್ಕೆ ಮೀಸಲಾಗಿಡತಕ್ಕಂತಹ ಹಣ ಬಹಳ ಕಡಿಮೆಯಾಗಿದೆ. ಭಾರತದಲ್ಲಿ 1 ವೈದ್ಯ 2000 ರೋಗಿಗಳ ಅನುಪಾತದಲ್ಲಿ ಕೆಲಸ ಮಾಡುತ್ತಿದ್ದು, ಅದೇ ಮುಂದುವರಿದ ದೇಶಗಳಲ್ಲಿ ಈ ಅನುಪಾತ 1:130 ಇದೆಯೆಂದು ತಿಳಿಸಿದರು. ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಹಣ ಬಿಡುಗಡೆಗೆ ಎಡಪಕ್ಷಗಳು ಒತ್ತಾಯಿಸುತ್ತಿವೆಯೆಂದು ತಿಳಿಸಿದರು. ○

ಅಭಿವೃದ್ಧಿಗೆ ಅಡ್ಡಗೋಡೆಯಾದ ಕಾವೇರಿ ಸೇನೆ..........

ಪುಟ 5 ರಿಂದ

ಕೆಲಸ ಪ್ರಾರಂಭವಾಗುವಂತೆ ಮಾಡುತ್ತೇನೆ" ಎಂಬ ಆಶ್ವಾಸನೆ ಕೊಟ್ಟರು. ಅವರ ಮಾತಿಗೆ ಮನ್ನಣೆ ಕೊಟ್ಟು ಅಂದು ಹೋರಾಟವನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ ಅವರ ಆಶ್ವಾಸನೆಯಂತೆ ಕೆಲಸ ಪ್ರಾರಂಭವಾಗಲಿಲ್ಲ. ಕೇರಳದ ಬದಿಯಲ್ಲಿಯಂತೆ ರಸ್ತೆ ದುರಸ್ತಿಗೊಳಿಸುವುದಿರಲಿ, ತೇಪೆ ಕೆಲಸಕ್ಕೆ ಸಹಾ ಕನಿಷ್ಠ ಬೇಕಾದ 70 ಲಕ್ಷಕ್ಕೆ ಬಂದದ್ದು ಕೇವಲ 15 ಲಕ್ಷ ಇದನ್ನೇ ಹಿಡಿದುಕೊಂಡು ಲೋಕೋಪಯೋಗಿ ಇಲಾಖೆಯ ಸಿಬ್ಬಂದಿಗಳು ರಿಪೇರಿಯ ನಾಟಕ ನಡೆಸಿ ಜನರ ಕಣ್ಣಿಗೆ ಮಂಕು ಬೂದಿ ಚೆಲ್ಲಬೇಕು ಎನ್ನುವುದು ಇಂದು ಕಾಣುವ ವಾಸ್ತವ ಸ್ಥಿತಿ.

ಇಂತಹ ಸನ್ನಿವೇಶದ ಪರಿಸ್ಥಿತಿಯ ಗಾಂಭೀರ್ಯವನ್ನು ಸರಕಾರದ ಗಮನಕ್ಕೆ ತರಲು ರಸ್ತೆ ಹೋರಾಟ ಸಮಿತಿ ಮತ್ತೆ ಹೋರಾಟ ಪ್ರಾರಂಭಿಸಲು ತೀರ್ಮಾನಿಸಿತು.

ಮಾರ್ಚ್ 22 ರಂದು ಬೆಳಿಗ್ಗೆ 10 ಗಂಟೆಗೆ ವಿವಿಧ ಸಂಘಟನೆಗಳವರು ಕಾರ್ ನಿಲ್ದಾಣದ ಸಮೀಪ ಬಂದು ಸೇರಿ ಘೋಷಣೆಗಳನ್ನು ಕೂಗುತ್ತಾ ಪೆರುಂಬಾಡಿಯತ್ತ ತೆರಳಿ ಅಲ್ಲಿ ಪ್ರತಿಭಟನೆಗಾರರು ರಸ್ತೆಗೆ ಅಡ್ಡವಾಗಿ ಕುಳಿತರು. ಆಗ ಒಂದು ತಮಾಷೆಯ ಘಟನೆ ನಡಯಿತು. ಒಂದಷ್ಟು ಮಂದಿ ಭಾ.ಜ.ಪ.ದವರು ಅಲ್ಲಿಗೆ ಧಾವಿಸಿ ಬಂದರು. "ಶಾಲಾ ಮಕ್ಕಳಿಗೆ ಶಾಲೆಗೆ ಹೋಗುವುದಕ್ಕೆ ನಿಮ್ಮಿಂದ ಅಡ್ಡಿಯಾಗುತ್ತದೆ, ರಸ್ತೆ ದುರಸ್ತಿ ಕೆಲಸ ಸಮರ್ಪಕವಾಗಿ ನಡೆಯುತ್ತಿದೆ. ಆದ್ದರಿಂದ ಯಾವುದೇ ಪ್ರತಿಭಟನೆ ಅಗತ್ಯವಿಲ್ಲ" ಎಂದು ಹೇಳಿ ಪ್ರತಿಭಟನೆಯನ್ನು ವಿರೋಧಿಸಿದರು. ಅಲ್ಲದೆ ರಸ್ತೆ ಹೋರಾಟ ಸಮಿತಿಯ ಕಾರ್ಯಕರ್ತರ ಮೇಲೆ ಧಾಳಿ ಮಾಡುವಂತೆ ಅವರ ಮೇಲೆ ಎರಗಿ ಬಂದರು. ಮರ್ಯಾದಾ ಪುರುಷೋತ್ತಮನಾದ ಪ್ರಭು ರಾಮಚಂದ್ರನ ಪರಮ ಭಕ್ತರಾದ ಈ ಭಾ.ಜ.ಪ ಮಂದಿಯ ಬಾಯಿಗಳಿಂದ "ಅವರ ಹಿಂದೂತ್ವ"ವನ್ನು ಪ್ರದರ್ಶಿಸುವ ಬಯ್ಗುಳಗಳು (ಅದೇ ಅವರ ನಿತ್ಯ ಜಪವಾದ 'ರಾಮನಾಮ') ನಿರರ್ಗಳವಾಗಿ, ಪುಂಖಾನುಪುಂಖವಾಗಿ ಹರಿದುಬರುತ್ತಿದ್ದವು.

ರಾಜ್ಯದಲ್ಲಿ ಅಧಿಕಾರದಲ್ಲಿರುವುದು ಕಾಂಗ್ರೆಸ್-ಜಾತ್ಯಾತೀತ ಜನತಾದಳದ ಸಂಯುಕ್ತ ಸರಕಾರವಾದರೂ ಭಾ.ಜ.ಪ.ದ ಆದೇಶದಂತೆ ವರ್ತಿಸುವ ಪೊಲೀಸ್ ಉನ್ನತಾಧಿಕಾರಿಯೊಬ್ಬರು ಸ್ಥಳಕ್ಕೆ ಬರುತ್ತಲೇ ಭಾ.ಜ.ಪ ಮಂದಿಯ ಅಸಭ್ಯ ವರ್ತನೆ ತಾರಕಕ್ಕೇರಿತು. ಪೊಲಿಸರು ಅವರನ್ನು ತಡೆಯದೇ ಪ್ರತಿಭಟನಾಕಾರರನ್ನು ಮಾತ್ರ ಬಂಧಿಸಿ ತಂದರು.

ವಿರೋಧ ಪಕ್ಷವೇ ಆಡಳಿತ ಪಕ್ಷ

ಈ ಘಟನೆ ತುಂಬಾ ಅರ್ಥಗರ್ಭಿತವಾಗಿದೆ.

ರಾಜ್ಯದಲ್ಲಿ ಅಧಿಕಾರದಲ್ಲಿರುವುದು ಕಾಂಗ್ರೆಸ್-ಜಾತ್ಯಾತೀತ ಜನತಾದಳದ ಸಂಯುಕ್ತ ಸರಕಾರವಾಗಿದೆ. ಭಾ.ಜ.ಪ. ರಾಜ್ಯದಲ್ಲಿ ಭಾ.ಜ.ಪ ವಿರೋಧಿ ಪಕ್ಷವಾಗಿದೆ. ಆದ್ದರಿಂದ 'ನಮ್ಮ ಸರಕಾರ ಉತ್ತಮ ಕೆಲಸ ಮಾಡುತ್ತಿದೆ. ಅದರ ವಿರುದ್ಧ ಪ್ರತಿಭಟಿಸುವುದು ಸರಿಯಲ್ಲ' ಎಂದು ಕಾಂಗ್ರೆಸ್ ಅಥವಾ ಜಾತ್ಯಾತೀತ ಜನತಾದಳದ ಕಾರ್ಯಕರ್ತರೆಂದಿದ್ದರೆ ಅರ್ಥವಾಗುತ್ತಿತ್ತು. ಆದರೆ ಇಲ್ಲಿ ಅವರು ಮೌನಿಗಳಾಗಿದ್ದಾರೆ. ಬಹುಶಃ ಪ್ರಜಾಸತ್ತೆಯಲ್ಲಿ ಪ್ರತಿಭಟಿಸುವ ಹಕ್ಕು ಇದೆ ಎನ್ನುವ ಅರಿವು ಅವರಿಗಿದೆ. ಭಾ.ಜ.ಪ ರಾಜ್ಯದಲ್ಲಿ ವಿರೋಧ ಪಕ್ಷವಾಗಿದೆ. ಸರಕಾರದ ತಪ್ಪುಗಳನ್ನು ಜನರೆದುರು ಬಯಲಿಗೆಳೆಯಬೇಕಾದವರು ಸರಕಾರದ ತಪ್ಪುಗಳನ್ನು ನ್ಯಾಯೀಕರಿಸಲು ಪಾಡುಪಡುವುದನ್ನು ನಾವಿಲ್ಲಿ ಕಾಣುತ್ತಿದ್ದೇವೆ. ಎಂತಹಾ ವಿಪರ್ಯಾಸ!

ಭಾ.ಜ.ಪ ಮಂದಿ ಶಾಲೆ ಮಕ್ಕಳಿಗೆ ಕಷ್ಟವಾಗುತ್ತದೆಂದು ಹೇಳಿ ಪ್ರತಿಭಟನೆಯನ್ನು ವಿರೋಧಿಸಿದ್ದಾರೆ. ಈಗಲಾದರೂ ಶಾಲಾ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಭಾ.ಜ.ಪ ಮಂದಿಯಲ್ಲಿ ಕಳಕಳಿ ಸೃಷ್ಟಿಯಾಗಿರುವುದು ಸಂತೋಷದ ವಿಷಯ.

ಹಿಂದೆ ಶಾಲೆಗಳು ನಡೆಯುತ್ತಿದ್ದಾಗ ಶಾಲೆಗಳಿಗೆ ನುಗ್ಗಿ ಬಲಾತ್ಕಾರದಿಂದ ಗಂಟೆ ಹೊಡೆದು ರಜೆ ಘೋಷಿಸಿ ಅರಾಜಕತೆಯನ್ನು ಸೃಷ್ಟಿಸುತ್ತಿದ್ದವರು ಇವರೆಂದು ನೆನಪು ಮಾಡಿಕೊಳ್ಳಬೇಕು. ಈಗಲಾದರೂ ಈ ಮಂದಿಯಲ್ಲಿ ವಿದ್ಯಾಭ್ಯಾಸದ ಬಗ್ಗೆ ಕಳಕಳಿ ಮೂಡುತ್ತಿದೆ ಎಂದು ಸಂತೋಷಪಡಬಹುದು. ಆದರೆ 10 ಗಂಟೆ ನಂತರ ಪೆರುಂಬಾಡಿಯಿಂದ ಅದೆಷ್ಟು ಮಕ್ಕಳು ಶಾಲೆಗೆ ಬರುತ್ತಾರೆಂದು ಹೇಳಬೇಕು ಈ ಶಿಕ್ಷಣ ಪ್ರೇಮಿಗಳು.

ಭಾ.ಜ.ಪ ಪ್ರಗತಿ ವಿರೋಧಿಗಳಾಗಿರುವುದರಿಂದ, ವಿರೋಧವನ್ನು ಸಹಿಸಲು ಸಿದ್ಧರಿಲ್ಲದ ಫ್ಯಾಸಿಸ್ಟ್ ಮನೋಭಾವದವರಾಗಿರುವುದರಿಂದಲೇ ಅವರಿಗೆ ಪ್ರಗತಿಪರವಾದ, ಯಾವುದೇ ವಿಚಾರಗಳನ್ನೂ ಸಹಿಸಲು ಸಾಧ್ಯವಿಲ್ಲ ಎಂದು ಮೇಲುದ್ಧರಿಸಿದ ಎರಡೂ ಘಟನೆಗಳು ತೋರಿಸುತ್ತವೆ.

ಜನ ಪರವಾದ ಯಾವುದೇ ಕಾರ್ಯಕ್ರಮವೂ, ದೃಷ್ಟಿಕೋನವೂ ಇಲ್ಲದ; ಆಂತರಿಕ ಗುಂಪುಗಾರಿಕೆಯಿಂದ ಕುಸಿಯುತ್ತಿರುವ, ಫ್ಯಾಸಿಸ್ಟ್ ವಾದವನ್ನು ತನ್ನದಾಗಿಸಿಕೊಂಡಿರುವ ಒಂದು ಪಕ್ಷದ ಕಾರ್ಯಕರ್ತರು ಯಾವ ರೀತಿ ವರ್ತಿಸುವುರೆನ್ನುವುದಕ್ಕೆ ಅವರ ಇತ್ತೀಚೆಗಿನ ವರ್ತನೆಗಳು ಉತ್ತಮ ಸಾಕ್ಷಿಗಳಾಗಿವೆ. ಇದನ್ನು ಸಾಮಾನ್ಯ ಜನರು ಅರ್ಥ ಮಾಡಿಕೊಳ್ಳಬೇಕು.

■ ಡಾ. ದುರ್ಗಾಪ್ರಸಾದ್



ಕಾವೇರಿ ಸೇನೆಯನ್ನು ಗಿರೀಶ್ ಮಟ್ಟನವರ್‌ರವರು ಉದ್ಘಾಟನೆ ಮಾಡಿದರು. ಭ್ರಷ್ಟಾಚಾರದ ವಿರುದ್ಧ ಹೋರಾಡ ನಡೆಸುವುದಾಗಿ ಘೋಷಣೆ ಮಾಡಿತ್ತು. ಜಿಲ್ಲಾಮಟ್ಟದಲ್ಲಿ ಒಂದು ಸಮಿತಿ ರಚನೆ ಮಾಡಿಕೊಂಡಿತ್ತು. ಇವರ ಸಂಘಟನೆಯ ಕಾರ್ಯಕರ್ತರೆ ಸರಾಯಿ ದಂಧೆಯಲ್ಲಿ ತೊಡಗಿ, ಪೊಲೀಸ್ ಇಲಾಖೆ ಇದನ್ನು ಪತ್ತೆ ಮಾಡಿತ್ತು. ಆಗ ಕಾವೇರಿ ಸೇನೆಯ ಕಾರ್ಯಕರ್ತರೆ ಪತ್ತೆ ಮಾಡಿದ ರೀತಿಯಲ್ಲಿ ವರ್ತಿಸಿತ್ತು. ಕೊನೆಗೆ ಕಾವೇರಿ ಸೇನೆಯ ಪ್ರಮುಖರ ಕೈವಾಡ ಈ ಕೃತ್ಯದಲ್ಲಿ ಭಾಗಿಯಾಗಿದ್ದರು. ಅಲ್ಲಿಂದ ಕೆಲವು ಸಮಯ ತನಕ ಮೌನವಾಗಿದ್ದ ಕಾವೇರಿ ಸೇನೆ, ನಂತರದ ದಿನಗಳಲ್ಲಿ ಸರ್ಕಾರಿ ಕಚೇರಿಗಳಿಗೆ ನುಗ್ಗಿ ನೌಕರರನ್ನು ಬೆದರಿಸುವುದು ಪ್ರಾರಂಭಿಸಿದರು. ರಾಜಾ ಸೀಟಿನ ನಾಲ್ಕನೇ ದರ್ಜೆಯ ನೌಕರರನ್ನು ನೀರಿನ ಟ್ಯಾಂಕ್ ಶುದ್ಧಗೊಳಿಸಿಲ್ಲ ಎಂದು ಬಹಿರಂಗವಾಗಿ ಕೊಳಕು ನೀರು ಕುಡಿಸಿದರು. ಇದರ ವಿರುದ್ಧ ಸರ್ಕಾರಿ ನೌಕರರ ಒಕ್ಕೂಟ ಬಹಿರಂಗವಾಗಿ ಈ ಕೃತ್ಯದ ವಿರುದ್ಧ ಪುಕಾರು ನೀಡಿ ಕಾವೇರಿ ಸೇನೆಯ ಕಾರ್ಯಕರ್ತರ ಮೇಲೆ ಜಾತಿ ನಿಂದನೇ ಮೊಕದ್ದಮೆ ದಾಖಲು ಮಾಡಿದರು. ಒಂದಲ್ಲ ಒಂದು ರೀತಿಯಲ್ಲಿ ಇವರ ವರ್ತನೆ ಗೂಂಡಾಗಿರಿ ವರ್ತನೆಯಾಗಿ ಇಂದು ಜಿಲ್ಲೆಯಲ್ಲಿ ಇದು.

ಮಾರ್ಚ್ 22 ರಂದು ರಸ್ತೆ ಹೋರಾಟ ಸಮನ್ವಯ ಸಮಿತಿ ವತಿಯಿಂದ ತಾಲೂಕಿನ ರಸ್ತೆ ದುರಸ್ಥಿಗಾಗಿ ಒತ್ತಾಯಿಸಿ ಗಡಿಭಾಗವಾದ ಪೆರುಂಬಾಡಿಯಲ್ಲಿ ರಸ್ತೆಗಾಗಿ ಧರಣಿ ಸತ್ಯಾಗ್ರಹ ನಡೆಸಿದಾಗ ಬೆಳಿಗ್ಗೆ 10.30 ಕ್ಕೆ ವಿರಾಜಪೇಟೆಯಿಂದ ಮೆರವಣಿಗೆ ಎಂದು ತೀರ್ಮಾನಿಸಿ ನಗರದ ವ್ಯಾಪಾರಸ್ಥರ ಸ್ವಯಂ ಘೋಷಿತ ಬಂದ್ ಆಚರಿಸಿ ನಮ್ಮ ಹೋರಾಟಕ್ಕೆ ಬೆಂಬಲ ನೀಡಿದರು. ಇದನ್ನು ಸಹಿಸದ ಕೆಲವು ಕಾವೇರಿ ಸೇನೆಯ ಕಾರ್ಯಕರ್ತರು (ಬಿಜೆಪಿ, ಭಜರಂಗದಳ) ಅಂಗಡಿಗಳನ್ನು ತೆರೆಸಿದರು. ಅಲ್ಲದೆ, ಪೆರುಂಬಾಡಿಯಲ್ಲಿ ಧರಣಿನಿರತ ಸ್ಥಳಕ್ಕೆ ಬಂದು ಅವ್ಯಾಚ್ಯ ಶಬ್ದಗಳಿಂದ ಬೈದು ನಮ್ಮ ಮೇಲೆ ವಾಹನವನ್ನು ಹತ್ತಿಸಲು ಪ್ರಯತ್ನಿಸಿದರು. ಆಗ ಅಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಅವರನ್ನು ತಡೆದರು. ಡಿವೈಎಸ್‌ಪಿ ಬಂದ ಮೇಲೆ ಪ್ರತಿಭಟನಾಕಾರರನ್ನು ತುಚ್ಛವಾಗಿ ಕಂಡು ಕಾವೇರಿ ಸೇನೆಯ ಪರವಾಗಿ ವರ್ತಿಸಿದರು, ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿದ್ದ ನಮ್ಮನ್ನು ಬಂಧಿಸಿ ಕೇಸ್ ದಾಖಲು ಮಾಡಿದ್ದಾರೆ (ಸುಮಾರು 21 ಜನರ ಮೇಲೆ)

ಪ್ರತಿಭಟನೆಯನ್ನು ಹತ್ತಿಕ್ಕಲು ಬಂದ ಕಾವೇರಿ ಸೇನೆಯವರ ಮೇಲೆ ಯಾವುದೇ ಕ್ರಮಕೈಗೊಂಡಿಲ್ಲ. ಆ ಸಂದರ್ಭದಲ್ಲಿ ಪ್ರತಿಭಟನೆಕಾರರು ಕಾವೇರಿ ಸೇನೆಯ ಕೆಲವರ ಮೇಲೆ ದೂರು ನೀಡಿ ಪೊಲೀಸ್ ಕೇಸ್ ದಾಖಲು ಮಾಡಲು ಒತ್ತಾಯಿಸಿದಾಗ ಪೊಲೀಸ್ ಇಲಾಖೆ ಮೌನವಹಿಸಿತ್ತು. ಆಗ ಪ್ರತಿಭಟನಾಕಾರರು ಕೇಸ್ ದಾಖಲಿಸುವಂತೆ ಒತ್ತಾಯಿಸಿ ಡಿವೈಎಸ್‌ಪಿ ಕಚೇರಿ ಮುಂದೆ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಬೆದರಿಕೆ ಹಾಕಿದಾಗ ಒತ್ತಡಕ್ಕೆ ಮಣಿದು ಕಾವೇರಿ ಸೇನೆಯವರ ಮೇಲೆ ಕೇಸ್ ದಾಖಲು ಮಾಡಿದ್ದಾರೆ. ○

ಚಾರಿತ್ರಿಕವಾದ ಕೇರಳದ 18ನೇ ಸಿಪಿಐ[ಎಂ] ನ ರಾಜ್ಯ ಸಮ್ಮೇಳನ

ಚರಿತ್ರೆ ಸೃಷ್ಟಿ ಮಾಡಿದ ಸಿಪಿಐ(ಎಂ) 18ನೇ ಕೇರಳ ರಾಜ್ಯ ಸಮ್ಮೇಳನ ಮಲಪುರಂ ಜಿಲ್ಲೆಯಲ್ಲಿ ಫೆಬ್ರವರಿ 19 ರಿಂದ 22 ರವರೆಗೆ ನಡೆಯಿತು. ಸಿಪಿಐ(ಎಂ) ಉದಯದ ನಂತರ ಕೇರಳದ ಮಲಪುರಂ ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ನಡೆದ ಪಕ್ಷದ ರಾಜ್ಯ ಸಮ್ಮೇಳನ ಇದಾಗಿತ್ತು.

ಪಕ್ಷದ 18ನೇ ರಾಜ್ಯ ಸಮ್ಮೇಳನ ಮಲಪುರಂನಲ್ಲಿ ನಡೆಯುತ್ತದೆ ಎಂದ ಸುದ್ದಿ ಪ್ರಕಟಗೊಂಡ ತಕ್ಷಣದಲ್ಲಿಯೇ ಮಲಪುರಂ ಜಿಲ್ಲೆಯ ಪಕ್ಷದ ಸದಸ್ಯರು ಮತ್ತು ಹಿತೈಷಿಗಳು ಅತ್ಯಂತ ಸ್ಫೂರ್ತಿಯಿಂದ ಪಕ್ಷದ ಕರೆಯನ್ನು ಸ್ವೀಕರಿಸಿದರು. ಕೇರಳ ರಾಜ್ಯದ ಪಕ್ಷದ 26 ಸಾವಿರ ಶಾಖಾ ಸಮ್ಮೇಳನಗಳು ಮುಕ್ತಾಯವಾದ ನಂತರ ಹಾಗೂ ಸ್ಥಳೀಯ ಸಮಿತಿ ಸಮ್ಮೇಳನಗಳು ಮುಗಿದ ನಂತರ 14 ಜಿಲ್ಲಾ ಸಮ್ಮೇಳನಗಳು ನಡೆದಿವೆ. ಈ ಸಮ್ಮೇಳನಗಳಲ್ಲಿ ಜನರ ಭಾಗವಹಿಸುವಿಕೆ ನೋಡಿದಾಗ ಸಿಪಿಐ(ಎಂ) ಪಕ್ಷದ ಬಗ್ಗೆ ಜನಸಮೂಹ ಅಪಾರ ನಿರೀಕ್ಷೆ ಇಟ್ಟಿದ್ದು ಸ್ಪಷ್ಟವಾಗಿ ಕಂಡುಬಂದಿತು.

ಈ ನಿರೀಕ್ಷೆಗೆ ಏನು ಕಾರಣ?

2001 ರ ವಿಧಾನಸಭಾ ಚುನಾವಣೆಯಲ್ಲಿ ಕೇರಳದಲ್ಲಿ ಯುಡಿಎಫ್ ಸರ್ಕಾರಕ್ಕೆ ಮತ ನೀಡಿದ ಜನತೆಗೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರದ ಬಗ್ಗೆ ತೀವ್ರ ನಿರಾಶೆ ಉಂಟಾಗಿದೆ. ನಂತರ ಮೂರು ವರ್ಷ ಬಿಟ್ಟು ನಡೆದ ಲೋಕಸಭಾ ಚುನಾವಣೆಯಲ್ಲಿ ಇಡೀ ರಾಜ್ಯದಲ್ಲಿ ಒಂದು ಸ್ಥಾನ ಹೊರತುಪಡಿಸಿ ಉಳಿದ ಎಲ್ಲಾ ಸ್ಥಾನಗಳು ಎಡರಂಗದ ಪಾಲಾಗಿವೆ ಹಾಗೂ ಇದರಲ್ಲಿ 13 ಸ್ಥಾನಗಳು ಪಕ್ಷಕ್ಕೆ ಲಭ್ಯವಾಗಿವೆ. ಸ್ವಾತಂತ್ರ್ಯದ ನಂತರ ಸಾರ್ವತ್ರಿಕ ಚುನಾವಣೆಗಳು ಆರಂಭವಾದ ಮೇಲೆ ಮಲಪುರಂ ಜಿಲ್ಲೆಯ ಎರಡೂ ಲೋಕಸಭಾ ಸ್ಥಾನಗಳು ಮುಸ್ಲಿಂ ಲೀಗ್‌ನ ಗುತ್ತಿಗೆಯಾಗಿದ್ದವು. ಅದರಲ್ಲೂ ಮುಸ್ಲಿಂ ಲೀಗ್‌ನ ಪ್ರಮುಖ ಕೇಂದ್ರ ಮಂಚೇರಿಯಲ್ಲಿ ಈ ಬಾರಿ ಸಿಪಿಐ(ಎಂ)ನ ಗೆಲುವು ಒಂದು ಮೈಲಿಗಲ್ಲಾಗಿ ಈ ಗೆಲುವು ಪಕ್ಷದ ಸದಸ್ಯರಿಗೆ ಕಾರ್ಯಕರ್ತರಿಗೆ ನೀಡಿದ ಆವೇಶ ಹಾಗೂ ಸ್ಫೂರ್ತಿ ಚಿಮ್ಮಲು ಸಿಪಿಐ(ಎಂ) 18ನೇ ಕೇರಳ ರಾಜ್ಯ ಸಮ್ಮೇಳನ ಮಲಪುರಂನಲ್ಲಿ ನಡೆಯಲು ಒಂದು ಪ್ರಮುಖ ಕಾರಣವಾಯಿತು.

ಸಿಪಿಐ(ಎಂ)ನ 18ನೇ ಕೇರಳ ರಾಜ್ಯ ಸಮ್ಮೇಳನವನ್ನು ಪೂರ್ಣವಾಗಿ ಗಮನಿಸಿದರೆ ಈ ಸಮ್ಮೇಳನ ಬೃಹತ್ ರೀತಿಯಲ್ಲಿ ಆಕರ್ಷಣೀಯವಾಗಿ ನಡೆದಿವೆ. ಸಮ್ಮೇಳನಕ್ಕೆ ಮುಂಚಿತವಾಗಿ ಹಾಗೂ ಸಮ್ಮೇಳನ ನಡೆಯುವ ಸಮಯದಲ್ಲಿಯೂ ಪತ್ರಿಕಾ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಈ ಸಮ್ಮೇಳನ ಪರ - ವಿರೋಧವಾಗಿ ಬಹಳಷ್ಟು ಸುದ್ದಿ ಪ್ರಕಟಗೊಂಡಿತು. ಆದರೆ ಸಮ್ಮೇಳನದ ಯಶಸ್ಸು, ಸಮ್ಮೇಳನದ ತೀರ್ಮಾನಗಳು, ಹೊಸ ನಾಯಕತ್ವದ ಆಯ್ಕೆಯ ನಂತರ ಪಕ್ಷದ ವಿರೋಧಿಗಳ ಮಾತು ಹೊರಬರದೆ ಬಾಯಿ ಒಳಗೆಯೇ ಉಳಿಯಿತು.

ಸಿಪಿಐ(ಎಂ)ನ ಅವಿಸ್ಮರಣೀಯವಾದ ಹಲವು ಕೇರಳ ರಾಜ್ಯ ಸಮ್ಮೇಳನಗಳು ನಡೆದಿವೆ. ಆದರೆ ಈ ಬಾರಿ ನಡೆದಂತಹ ಅದ್ಭುತವಾದ ರೀತಿಯಲ್ಲಿ ಯಾವುದೇ ಹಿಂದಿನ ಕೇರಳ ರಾಜ್ಯ ಸಮ್ಮೇಳನ ನಡೆದಿಲ್ಲ. ಹಲವು ಹಿರಿಯ ಜನರು ತಮ್ಮ ಜೀವನ ಕಾಲದಲ್ಲಿ ಈ ರೀತಿಯ ಒಂದು ಸಮ್ಮೇಳನವನ್ನು ಈ ಹಿಂದೆ ಕಂಡಿಲ್ಲವೆಂಬ ಮಾತು ಸರ್ವ ಸಾಮಾನ್ಯವಾಗಿ ಆಡುವುದು ಕಂಡುಬಂದಿತು. ಫೆಬ್ರವರಿ 19 ರಿಂದ 22ರವರೆಗೆ ಮಲಪುರಂ ಜಿಲ್ಲೆಗೆ ಬೃಹತ್ ರೀತಿಯಲ್ಲಿ ಜನಸ್ತೋಮದ ಆಗಮನವಾಯಿತು. ಹೆಚ್ಚು ಕಡಿಮೆ ಜಿಲ್ಲೆಯ ಪ್ರತಿ ಮನೆಮನೆಯಲ್ಲೂ ಸಮ್ಮೇಳನಕ್ಕಾಗಿ ಬಂದ ನೆಂಟರು ಬಂದುಗಳು ತಂಗಿದ್ದರು.



ರಾಜ್ಯ ಕಾರ್ಯದರ್ಶಿ
ಪಿನರಾಯಿವಿಜಯನ್

ಫೆಬ್ರವರಿ 22 ರಂದು ನಡೆದ ಬಹಿರಂಗ ಸಭೆಯ ಅಂಗವಾಗಿ ನಡೆದ ಮೆರವಣಿಗೆ ಮಧ್ಯರಾತ್ರಿ ಬಹಿರಂಗ ಸಭೆ ಮುಕ್ತಾಯ ಗೊಂಡಿದ್ದರೂ ಮೆರವಣಿಗೆ ಕೊನೆಗೊಂಡಿರಲಿಲ್ಲ. ಈ ಮೆರವಣಿಗೆಯಲ್ಲಿ ಜನರ ಭಾಗವಹಿಸುವಿಕೆ ನೋಡಿ ಮಲಂಪುರಂನ ಗುತ್ತೇದಾರಿಗಳೆಂದು ಹೇಳಿಕೊಳ್ಳುತ್ತಿದ್ದ ಮುಸ್ಲಿಂ ಲೀಗ್‌ಗೆ ಮತಿಭ್ರಮಣೆಯಾಗಿದೆ. ಮಲಂಪುರಂನ ಜಿಲ್ಲೆಯನ್ನು ಮುಸ್ಲಿಂ ಲೀಗ್‌ನವರು ತಮ್ಮ ಖಾಸಗಿ ಆಸ್ತಿ ಎಂದು ತಿಳಿದಿದ್ದರು. ಈ ಕಾರಣದಿಂದ ಅವರು ಸಿಪಿಐ(ಎಂ)ನ ಬ್ಯಾನರ್, ಪೋಸ್ಟರ್‌ಗಳನ್ನು ಹರಿದುಹಾಕುವುದು, ಸಿಪಿಐ(ಎಂ)ನ ಸಮ್ಮೇಳನಕ್ಕೆ ಬೆಂಬಲ ನೀಡಿದ್ದಲ್ಲಿ ಅವರನ್ನು ಮಸೀದಿಗೆ ಸೇರಿಸುವುದಿಲ್ಲ ಎಂಬ ಬೆದರಿಕೆ ಈ ಎಲ್ಲಾ ಪ್ರಕ್ರಿಯೆಗಳು ನಡೆದವು. ಮುಸ್ಲಿಂ ಲೀಗ್‌ನ ಗೂಂಡಾಗಿರಿಗೆ ಸಿಪಿಐ(ಎಂ) ಕಿಂಚಿತ್ತೂ ಮಿಸುಕಾಡದೆ ಎದುರಿಸಿ ನಿಂತಿತ್ತು.

ಸಮ್ಮೇಳನ ಪ್ರಚಾರ ತಿಂಗಳುಗಳ ಮೊದಲೆ ಆರಂಭವಾಗಿತ್ತು. ಮಲಪುರಂ ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಕೆಂಬಾವುಟ, ಬ್ಯಾನರ್, ಕಟ್‌ಔಟ್‌ಗಳು ಕಮಾನುಗಳು ಎದ್ದು ನಿಂತವು. ಜಿಲ್ಲೆಯ ಎಲ್ಲಾ ವಿಭಾಗದ ಜನರಿಂದ ಸಹಾಯ ಈ ಸಮ್ಮೇಳನಕ್ಕೆ ಹರಿದುಬಂದಿದೆ. ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯರಾದ ಪಾಲೋಳಿ ಅಹಮದ್ ಕುಟ್ಟಿ ಅಧ್ಯಕ್ಷರಾಗಿದ್ದ ಹಾಗೂ ಪಕ್ಷದ ಮತ್ತೊಬ್ಬ ಕೇಂದ್ರ ಸಮಿತಿ ಸದಸ್ಯರಾದ ಎ.ವಿಜಯರಾಘವನ್(ಎಂ.ಪಿ) ಇವರು ಸಂಚಾಲಕರಾಗಿದ್ದ ಸ್ವಾಗತ ಸಮಿತಿ ತಂಡ ಈ ಸಮ್ಮೇಳನವನ್ನು ಯಶಸ್ವಿಗೊಳಿಸಿತು. ಸಮ್ಮೇಳನದ ಭಾಗವಾಗಿ ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಒಟ್ಟು 15 ವಿಚಾರ ಸಂಕಿರಣಗಳು ನಡೆದವು.



ಪಕ್ಷದ ಶಾಖೆಗಳಿಂದ ಬೀದಿ ಸಂಗ್ರಹದ ಮೂಲಕ ಈ ಸಮ್ಮೇಳನಕ್ಕೆ ಅವಶ್ಯವಿರುವ ಹಣ ಸಂಗ್ರಹಿಸಲಾಯಿತು. ಈ ಸಮ್ಮೇಳನಕ್ಕೆ ಮುಂಚಿತವಾಗಿ ಮಲಂಪುರಂನಲ್ಲಿ ನಡೆದ ಅನೇಕ ವಿವಾಹ ಸಮಾರಂಭಗಳಲ್ಲಿ ಮಹಿಳೆಯರು ತಮ್ಮ ಚಿನ್ನದ ಆಭರಣಗಳನ್ನೇ ಸಮ್ಮೇಳನದ ಖರ್ಚಿಗೆ ದೇಣಿಗೆಯಾಗಿ ನೀಡಿದ ಘಟನೆಗಳು ಹಲವು ಪತ್ರಿಕೆಗಳಲ್ಲಿ ದೊಡ್ಡ ಸುದ್ದಿಗಳಾದವು. ಜಿಲ್ಲೆಯ ಕಾರ್ಮಿಕ ವರ್ಗ 8 ಲಕ್ಷ ರೂಪಾಯಿಗಳನ್ನು, ಕೃಷಿ ಕೂಲಿಕಾರರು 10 ಲಕ್ಷ ರೂಪಾಯಿಗಳನ್ನು, ರೈತರು 1 ಲಕ್ಷ ತೆಂಗಿನ ಕಾಯಿಗಳನ್ನು ಸಮ್ಮೇಳನಕ್ಕೆ ದೇಣಿಗೆಯಾಗಿ ನೀಡಿದರು.

ಮಲಂಪುರಂ ಸಮ್ಮೇಳನವನ್ನು ಇಎಂಎಸ್ ನಗರದಲ್ಲಿ ಇ.ಕೆ.ನಾಯನಾರ್ ವೇದಿಕೆಯಲ್ಲಿ ಪಕ್ಷದ ರಾಷ್ಟ್ರ ಕಾರ್ಯದರ್ಶಿ ಕಾಂ.ಹರಿಕಿಷನ್ ಸಿಂಗ್ ಸುರ್ಜಿತ್ ಉದ್ಘಾಟಿಸಿದರು. 545 ಪ್ರತಿನಿಧಿಗಳು, 5 ವೀಕ್ಷಕರು ನಾಲ್ಕು ದಿನ ನಡೆದ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಸಮ್ಮೇಳನದ ಭಾಗವಾಗಿ ಹಲವು ಸಾಂಸ್ಕೃತಿಕ ಸಮ್ಮೇಳನಗಳು ನಡೆದವು. ಈ ಸಾಂಸ್ಕೃತಿಕ ಸಮ್ಮೇಳನಗಳಲ್ಲಿ ದೇಶದ ಪ್ರಮುಖ ಬುದ್ಧಿಜೀವಿಗಳು, ರಾಜಕೀಯ ಹಾಗೂ ಸಾಹಿತ್ಯ ರಂಗದ ಪ್ರಮುಖರು ಭಾಗವಹಿಸಿದ್ದರು.


ಮುಸ್ಲಿಂಲೀಗ್ ಕೇವಲ ಸಂಪನ್ನ ವರ್ಗವನ್ನು ಮಾತ್ರ ಕಾಪಾಡಲು ಇರುವ ಪಕ್ಷ ಎಂದು ಅರಿತ ಮಲಪುರಂನ ಸಾಮಾನ್ಯ ಮುಸ್ಲಿಂರು ಪ್ರಮುಖವಾಗಿ ಮುಸ್ಲಿಂ ಮಹಿಳೆಯರು ಬುರ್ಖಾ ಹಾಗೂ ಟೋಪಿ ಧರಿಸಿ ಅರಬ್ ಭಾಷೆಯಲ್ಲಿ ಬರೆದ ಕ್ರಾಂತಿಕಾರಿ ಘೋಷಣೆಗಳನ್ನು ಎತ್ತಿ ಹಿಡಿದು ಮೆರವಣಿಗೆಯಲ್ಲಿ ಭಾಗವಹಿಸಿದ್ದು ಒಂದು ಅವಿಸ್ಮರಣೀಯ ಹಾಗೂ ಚಾರಿತ್ರಿಕ ಸಂದರ್ಭವಾಗಿತ್ತು. 15 ಸಾವಿರ ಸಂಖ್ಯೆಯ ಸ್ವಯಂ ಸೇವಕರ ಪಡೆ ಮೆರವಣಿಗೆಯ ಮುಂಚೂಣಿಯಲ್ಲಿ ಶಿಸ್ತಿನಿಂದ ನಡೆಯಿತು. ಹಲವು ವಾದ್ಯ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು. ಸಾಮ್ರಾಜ್ಯಶಾಹಿಗೆ ವಿರುದ್ಧವಾಗಿ ಘೋಷಣೆಗಳನ್ನು ಮೊಳಗಿಸಿ, ಪಾಲೆಸ್ಟೀನ್ ಕ್ಯೂಬಾ, ಇರಾಕ್ ಜನತೆಗೆ ಬೆಂಬಲ ಸೂಚಿಸಿ ಘೋಷಣೆಗಳೊಂದಿಗೆ ಮೆರವಣಿಗೆ ಸಾಗಿತ್ತು.

ಪಕ್ಷದ ಕೇರಳ ರಾಜ್ಯ ಕಾರ್ಯದರ್ಶಿಯಾಗಿ ಕಾಂ.ಪಿನರಾಯಿ ವಿಜಯನ್ ಮರು ಆಯ್ಕೆಯಾಗಿದ್ದಾರೆ. 76 ಮಂದಿಯ ಹೊಸ ರಾಜ್ಯಸಮಿತಿ ಆಯ್ಕೆಯಾಯಿತು.

ಅನ್ಯಾಯಕ್ಕೆ ಎದುರಾಗಿ ರಕ್ತ ಬೆವರು ಸುರಿಸಿ ಹಾಗೂ ಕಣ್ಣೀರು ಹರಿಸಿ ಬೆಳೆಸಿದ ಜನ ಚಳುವಳಿ ಕೇರಳದ ಮಣ್ಣಿನಲ್ಲಿ ಶಾಶ್ವತವಾಗಿ ನೆಲೆಯೂರುತ್ತದೆ ಎಂಬ ಏಕಸ್ವರದ ಘೋಷಣೆಯೊಂದಿಗೆ ಸಮ್ಮೇಳನ ಮುಕ್ತಾಯಗೊಂಡಿತು.

■ ಇ.ಕೆ.ಎನ್.ರಾಜನ್

ಭಾರೀ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ಕಾಂ. ಪ್ರಕಾಶ್ ಕಾರಟ್



ಹೆಚ್ಚಿದ ಜನಬೆಂಬಲ

ಮೂರು ವರ್ಷಗಳ ಹಿಂದೆ ಕಣ್ಣೂರಲ್ಲಿ ಜರುಗಿದ ಪಕ್ಷದ 17ನೇ ರಾಜ್ಯ ಸಮ್ಮೇಳನವು, ಪಕ್ಷದ ಸಂಘಟನೆಯನ್ನು ಬಲ ಪಡಿಸುವ ಮೂಲಕ, ಪಕ್ಷದ ಶಿಕ್ಷಣ ಮತ್ತು ಪ್ರಚಾರವನ್ನು ಹೆಚ್ಚಿಸುವ ಮೂಲಕ ಮತ್ತು ಬಲಿಷ್ಠ ಜನ ಚಳುವಳಿಗಳನ್ನು ಸಂಘಟಿಸುವ ಮೂಲಕ ಸಿಪಿಐ(ಎಂ) ಕೇರಳದ ಅತ್ಯಂತ ಪ್ರಮುಖ ರಾಜಕೀಯ ಶಕ್ತಿಯಾಗಿ ಹೊರ ಹೊಮ್ಮುವಂತೆ ಮಾಡಲು ದೃಢ ನಿರ್ಧಾರ ಕೈಗೊಂಡಿತ್ತು. 17ನೇ ಸಮ್ಮೇಳನದ ಈ ನಿರ್ಧಾರವನ್ನು ಕೈಗೂಡಿಸಲು ಪಕ್ಷದ ರಾಜ್ಯ ಸಮಿತಿಯು ಈ ಅವಧಿಯಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪ್ರಚಾರ ಪ್ರಕ್ಷೋಭೆಯನ್ನು ಸಂಘಟಿಸಿತು. ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಈ ಅವಧಿಯಲ್ಲಿ ಅನೇಕ ಧೀರೋದಾತ್ತ ಹೋರಾಟಗಳನ್ನು ಸಂಘಟಿಸಿದವು. ಕಾಂಗ್ರೆಸ್ ಸರ್ಕಾರದ ದೌರ್ಜನ್ಯ, ಪೋಲೀಸರ ಅತಿರೇಕಗಳನ್ನು ಧೈರ್ಯ ಹಾಗೂ ತ್ಯಾಗ ಮನೋಭಾವದಿಂದ ಎದುರಿಸಿದರು. ಪರಿಣಾಮವಾಗಿ, ಇದುವರೆಗೆ ಪಕ್ಷದಿಂದ ದೂರ ಉಳಿದಿದ್ದ ಜನ ವಿಭಾಗಗಳಿಂದಲೂ ಬೆಂಬಲದ ಪ್ರವಾಹವೇ ಉಕ್ಕೇರುವಂತಾಯಿತು.

ಇಂದು ಕೇರಳದಲ್ಲಿ ಸಿಪಿಐ(ಎಂ) ಸದಸ್ಯತ್ವ 3,16,305. ಕಳೆದ ಸಮ್ಮೇಳನದ ನಂತರ ಅವಧಿಯಲ್ಲಿ ಒಟ್ಟು ಸುಮಾರು 23 ಸಾವಿರದಷ್ಟು ಸದಸ್ಯತ್ವ ಹೆಚ್ಚಾಗಿದೆ. ಮಹಿಳೆಯರ ಸಂಖ್ಯೆ ಶೇ 7 ರಿಂದ ಶೇ 10.11 ಕ್ಕೆ ಏರಿದೆ. ಒಟ್ಟು ಸದಸ್ಯತ್ವದಲ್ಲಿ ಶೇ 51 ರಷ್ಟು ಕಾರ್ಮಿಕ ವರ್ಗದಿಂದ ಬಂದವರಾಗಿದ್ದರೆ, ಶೇ 25 ರಷ್ಟು ಕೃಷಿ ಕೂಲಿಕಾರರು ಮತ್ತು ಶೇ 21 ರಷ್ಟು ರೈತರು ಆಗಿರುತ್ತಾರೆ. ಪಕ್ಷವು ಈ ರೀತಿಯಲ್ಲಿ ಪ್ರಮುಖ ವಿಭಾಗಗಳನ್ನು ಒಳಗೊಂಡಿರುವುದರಿಂದ ಅದೊಂದು ಕಾರ್ಮಿಕ ವರ್ಗದ ನೇತೃತ್ವ ಹೊಂದಿರುವ ಸಾಮೂಹಿಕ ಕ್ರಾಂತಿಕಾರಿ ಪಕ್ಷವಾಗಿ ಹೊರ ಹೊಮ್ಮುವಂತಾಗಿದೆ. ಕಳೆದ ಸಮ್ಮೇಳನದ ಸಮಯದಲ್ಲಿ 1, 12,95,072 ರಷ್ಟು ಇದ್ದ ಸಾಮೂಹಿಕ ಸಂಘಟನೆಗಳ ಒಟ್ಟು ಸದಸ್ಯತ್ವವು ಈಗ ಒಂದು ಕೋಟಿ 23 ಲಕ್ಷ ದಾಟಿದೆ.

ಪಕ್ಷದ ಮೇಲೆ ಕೇರಳದ ಜನತೆಯ ನಿರೀಕ್ಷೆ ಗಣನೀಯವಾಗಿ ಹೆಚ್ಚಾಗಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರದ ದುರಾಡಳಿತದಿಂದ ಮುಕ್ತರಾಗಲು ಅವರು ಸಿಪಿಐ(ಎಂ) ಮೇಲೆ ಭರವಸೆ ಇಟ್ಟುಕೊಂಡಿದ್ದಾರೆ. ಕಳೆದ ಲೋಕಸಭಾ ಚುನಾವಣೆಗಳಲ್ಲಿ ಮತ್ತು ನಂತರದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪಕ್ಷಕ್ಕೆ ನೀಡಲಾದ ಪ್ರಚಂಡ ಬೆಂಬಲದಲ್ಲಿ ಇದು ವ್ಯಕ್ತವಾಗಿದೆ. ಯುಡಿಎಫ್ ಒಳಗಿರುವಲ್ಲಿ ಅನೇಕರು ಭ್ರಮನಿರಸನಗೊಂಡಿದ್ದು ಸಿಪಿಐ(ಎಂ)ನೊಂದಿಗೆ ಸಹಕರಿಸಲು ಮುಂದಾಗಿದ್ದಾರೆ. ಇದುವರೆಗೆ ಕಮ್ಯುನಿಸ್ಟ್-ವಿರೋಧಿ ಪ್ರಭಾವದ ಅಡಿಯಲ್ಲಿದ್ದ ಜನಗಳು ಸಿಪಿಐ(ಎಂ) ಜೊತೆ ಕೈಜೋಡಿಸುತ್ತಿದ್ದಾರೆ. ಸಿಪಿಐ(ಎಂ) ನ್ನು ವಿರೋಧಿಸುತ್ತಿದ್ದವರು ಸಹ, ಮಲಪುರಂ ಸಮ್ಮೇಳನವನ್ನು ನೋಡಿದ ನಂತರ, ಪಕ್ಷಕ್ಕೆ ಜನ ಬೆಂಬಲವು ಗಣನೀಯವಾಗಿ ಹೆಚ್ಚಾಗಿದೆ ಎಂದು ಒಪ್ಪಿಕೊಳ್ಳುತ್ತಿದ್ದಾರೆ.

ಮಂಗಳೂರಿನಲ್ಲಿ ಹಿಟ್ಲರ್ ಸಂತತಿ

ಕೃಷ್ಣಪ್ಪ ಕೊಂಚಾಡಿ

ಇಟಲಿಯ ಮುಸಲೋನಿ ಮತ್ತು ಜರ್ಮನಿಯ ಹಿಟ್ಲರ್‌ನ ಫ್ಯಾಸಿಸಂ, ನಾಝಿಸಂನಿಂದ ಸ್ಫೂರ್ತಿ ಪಡೆಯುತ್ತಿರುವ ಸಂಘ ಪರಿವಾರಕ್ಕೆ ಸಮಕಾಲೀನ ಜಗತ್ತಿನ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಜನಸಾಮಾನ್ಯರ ಮೇಲೆ, ಸೈನಿಕರ ಮೇಲೆ ಏನು ಮಾಡುತ್ತವೆಯೋ ಅದನ್ನೇ ಭಾರತದಲ್ಲೂ ಮಾಡುತ್ತಿದೆ. ಇರಾಕ್ ಸೈನಿಕರ ಮೇಲೆ ಅಲ್ ಗರೀಬ್ ಬಂಧಿಖಾನೆಯಲ್ಲಿ ಅಮೆರಿಕಾದ ಸೈನಿಕರು ನಡೆಸಿದ ಚಿತ್ರಹಿಂಸೆಯಿಂದ ಪ್ರೇರಣೆ ಪಡೆದು ಮಾರ್ಚ್ 13 ರಂದು ರಾತ್ರಿ 8 ಗಂಟೆಗೆ ಉಡುಪಿಯ ಕಲ್ಯಾಣಪುರದ ಮೂಡಬೆಟ್ಟುವಿನಲ್ಲಿ 60 ವರ್ಷ ಪ್ರಾಯದ ವಯೋವೃದ್ಧ ಹಾಜಬ್ಬ ಮತ್ತು ಅವರ ಮಗ 20 ವರ್ಷ ಪ್ರಾಯದ ಹಸನಬ್ಬರನ್ನು ದನದ ಕರು ಸಾಗಿಸುತ್ತಿದ್ದರೆಂಬ ಕಾರಣಕ್ಕೆ ತಡೆದು ಅವರ ಮೇಲೆ ಮರಣಾಂತಿಕ ಹಲ್ಲೆ ನಡೆಸಿ ಅವರ ದೇಹದಿಂದ ಎಲ್ಲಾ ಬಟ್ಟೆಗಳನ್ನು ಸಂಪೂರ್ಣವಾಗಿ ಕಳಚಿ ಸಾಮೂಹಿಕವಾಗಿ ಸಾರ್ವಜನಿಕರ ಮಧ್ಯೆ ಅಮಾನುಷವಾಗಿ ಹಲ್ಲೆ ನಡೆಯಿತು. ಅವರಿಂದ 15,000 ರೂ. ನಗದು, ವಾಚು, ಮೊಬೈಲ್, ಚಿನ್ನದ ಸರ ಯಾವತ್ತೂ ದನ ತಡೆಯುವ ಈ ಭಜರಂಗಿ ತಂಡ ಲಪಟಾಯಿಸುವಂತೆ ಇಲ್ಲೂ ಎಗರಿಸಿದೆ. ಅಲ್ ಗರೀಬ್‌ನಲ್ಲಿ ನಾಲ್ಕು ಗೋಡೆಗಳ ಮಧ್ಯೆ ಅಮಾನುಷ ಚಿತ್ರಹಿಂಸೆ ನಡೆದರೆ ಇಲ್ಲಿ ಸಾರ್ವಜನಿಕರ ಎದುರು ಸುಮಾರು ಮೂರು ತಾಸುಗಳ ಕಾಲ ನಡೆಯಿತು. ಭಾರತದ ಸಂಘ ಪರಿವಾರದ ಕ್ರೂರ ಮನಸ್ಸು ಎಷ್ಟೊಂದು ಭೀಭತ್ಸವಾಗಿದೆ!

ಮಂಗಳವಾರ(ತಡವಾಗಿ) ಮಾಧ್ಯಮಗಳಲ್ಲಿ ವರದಿಯಾದಂತೆ ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿಯರು ವಿಧಾನಸಭೆಯಲ್ಲಿ ಪ್ರಸ್ತಾಪಿಸುತ್ತಿದ್ದಂತೆಯೇ ವಿವಿಧ ಕಡೆಗಳಲ್ಲಿ ಪ್ರತಿಭಟನೆಗಳ ಧ್ವನಿ ಕೇಳಿಬಂತು. ಮಂಗಳೂರಿನಲ್ಲಿ ಮಾಜೀ ಡಿವೈಎಫ್‌ಐ ನಾಯಕರುಗಳು ಸಭೆ ನಡೆಸಿ ಹೋರಾಟಕ್ಕೆ ಇಳಿಯಲು ನಿರ್ಧರಿಸಲಾಯಿತು. ಮರುದಿನ ಬುಧವಾರ ಹೋರಾಟಗಳ ಮತ್ತು ಆಕಾಂಕ್ಷೆಗಳ ಕೇಂದ್ರ 'ವಿಕಾಸ' ದಲ್ಲಿ ವಿವಿಧ ಸಂಘಟನೆಗಳ ಜಂಟಿ ಸಭೆಗೆ ಸುಮಾರು 70 ಜನ ಮುಂದಾಳುಗಳ ಸಭೆ. ಶುಕ್ರವಾರ ಅಪರಾಹ್ನ 4.00 ಗಂಟೆಗೆ ಪ್ರತಿಭಟಿಸಲು ನಿರ್ಧರಿಸ ಲಾಯಿತು.

ಈತನ್ಮಧ್ಯೆ ಬುಧವಾರ ಉಡುಪಿಯಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಯಶಸ್ವಿ ಪ್ರತಿಭಟನೆ ನಡೆಯಿತು. ಮಾಧ್ಯಮದಲ್ಲಿ ವರದಿಯಾದ ದಿನವೇ ಉಡುಪಿಯಲ್ಲಿ ನೂರಾರು ಜನರು ಘೆರಾಯಿಸಿ ಪ್ರತಿಭಟಿಸಿದರು. ಕ್ರಿಮಿನಲ್ ಗೂಂಡಾ ಪಡೆ ಹಿಂದೂ ಯುವ ಸೇನೆಯಿಂದ ಅಪರಾಧಿತ್ವದ ಪರವಾಗಿ ಪ್ರತಿ ಹೋರಾಟ ಉಡುಪಿಯಲ್ಲಿ ನಡೆಯಿತು. ಈ ಆದಿ ಉಡುಪಿ ಪ್ರಕರಣಕ್ಕೆ ವಿಶೇಷ ಮಹತ್ವವಿಲ್ಲ. ಸಿಪಿಐ(ಎಂ) ಮತ್ತು ಡಿವೈಎಫ್‌ಐ ಕುಟಿಲ ಕಾರ್ಯತಂತ್ರ ಎಂದು ತೀವ್ರ ಟೀಕಾ ಪ್ರಹಾರ ನಡೆಯಿತು. ಈ ಪ್ರತಿಹೋರಾಟ ಗುರುವಾರ ನಡೆಯಿತು. ಶುಕ್ರವಾರ ಮಧ್ಯಾಹ್ನದ ಮೇಲೆ ಜಿಲ್ಲಾಧಿಕಾರಿ ಕಚೇರಿ ಎದುರು ಸಾವಿರ ಸಾವಿರ ಸಂಖ್ಯೆಯಲ್ಲಿ ಪ್ರತಿಭಟನಾಕಾರು ಜಮಾವಣೆಗೊಂಡು ಐಜಿಪಿ ಕಚೇರಿಗೆ ಮುತ್ತಿಗೆ ಮುಂದುವರಿದ ಸೇರಿದ ಜನಸಾಗರ ಏಳೆಂಟು ಸಾವಿರವಿತ್ತು. ಪ್ರಮುಖ ಭಾಷಣಕಾರರಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್‌ರವರು ಸಂಘ ಪರಿವಾರದ ಸಿದ್ಧಾಂತದ ಮೇಲೆ ತೀವ್ರ ಟೀಕೆ ಮಾಡಿದರು. ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಕೆ.ಯಾದವಶೆಟ್ಟಿ, ವಸಂತ ಆಚಾರಿ ಭಾಷಣ ಮಾಡಿದರೆ, ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳಿ ಪ್ರತಿಭಟನಾ ಸಭೆಯ ಕಾರ್ಯಕ್ರಮ ನಿರ್ವಹಿಸಿದರು.

ಈ ಚಳುವಳಿಯನ್ನು ಮತೀಯವಾಗಿ ಬಿಂಬಿಸಲು ಕೆಲವು ಮೂಲಭೂತವಾದಿ ಸಂಘಟನೆಗಳು, ಪತ್ರಿಕೆಗಳು ಮತ್ತು ಸಂಘ ಪರಿವಾರ ಪ್ರಯತ್ನಿಸಿದೆ. ನಾಯಕಸ್ಥಾನದಲ್ಲಿ ಎಡಪಂಥೀಯರು ಇರುವುದರಿಂದ ಈ ಪ್ರಯತ್ನ ವಿಫಲವಾಯಿತು. ಕೆಲವು ಮಾಧ್ಯಮಗಳಲ್ಲಿ ಮುಸ್ಲಿಂ ನಾಯಕರ ಬಗ್ಗೆ ಕುಚೋದ್ಯದಿಂದ ಬರೆದು ಡಿವೈಎಫ್‌ಐ ಮತ್ತು ಇತರ ಸಂಘಟನೆಗಳನ್ನು ಪ್ರಶಂಶಿಸಿ ಆ ಮೂಲಕ ಐಕ್ಯ ಹೋರಾಟಕ್ಕೆ ಪ್ರಹಾರ ನೀಡುವ ಪ್ರಯತ್ನ ಚಳುವಳಿಯ ಮೊದಲೇ ನಡೆದರೂ ಅದು ನಿರೀಕ್ಷಿತ ಫಲ ನೀಡಲಿಲ್ಲ. ಚಳುವಳಿಯ ವರದಿ ಮಾಡುವ ವಿಜಯ ಕರ್ನಾಟಕ ಈ ಚಳುವಳಿ ಜನ ಸಾಗರ ಎಂದು ಹೇಳಿ 'ಮುಸ್ಲಿಂ ಸೆಂಟ್ರಲ್ ಸಮಿತಿ'ಯ ಕಾರ್ಯಕ್ರಮ ಎಂದು ಮತೀಯ ಸ್ವರೂಪ ನೀಡಲು ಉದ್ದೇಶಪೂರ್ವಕವಾಗಿ ಪ್ರಯತ್ನಿಸಿತು.

ಉದಯವಾಣಿಯ ಅವಾಂತರ

ತಲ್ಲಣಗೊಂಡ ಸಂಘ ಪರಿವಾರ ಇಂಗು ತಿಂದ ಮಂಗನಂತಾಯಿತು. ಶನಿವಾರ ಉಡುಪಿಯಲ್ಲಿ ಪ್ರತಿಭಟನೆ ನಡೆಯುವುದರಲ್ಲಿ ಬೃಹತ್ ಜನಸ್ತೋಮ ಸೇರುತ್ತಿರುವುದರಿಂದ ಇದನ್ನು ಯೋಜನಾ ಬದ್ಧವಾಗಿ ತನ್ನ ಮೂಲತಕ್ಕೆಗೆ ಬಳಸಲು ಕಾರ್ಯಯೋಜನೆ ರೂಪಿಸಿ ದಂತೆಯೇ ಆ ಪ್ರತಿಭಟನೆಯಲ್ಲಿ ಮುಸ್ಲಿಂ ಸಮುದಾಯದ ದರ್ಗಾ ಊರುಸ್‌ನಲ್ಲಿ ಉಪಯೋಗಿ ಸುವ ಧ್ವಜವನ್ನು ಮೂಲ ಭೂತವಾದಿ ಸಂಘಟನೆಗಳು ಕೊಂಡೊಯ್ದದನ್ನು ಚಿತ್ರ ಸಮೇತ ಉದಯವಾಣಿ ಪ್ರಕಟಿಸಿ 'ಪಾಕಿಸ್ತಾನದ ಧ್ವಜ ಹಿಡಿದು ಪಾಕಿಸ್ತಾನ ಜಿಂದಾಬಾದ್ ಎಂಬ ಘೋಷಣೆ ಹಾಕುತ್ತಿದ್ದರು ಎಂದು ಬೇಜವಾಬ್ದಾರಿಯಿಂದ ಕೋಮುಗಲಭೆ ನಡೆಯಲೇ ಬೇಕು ಎಂಬ ಇರಾದೆಯಿಂದ ಬರೆಯಿತು. ಸಂಪಾದಕೀಯವೇ ಇಲ್ಲದ ಈ ದೂರ್ತ ಪತ್ರಿಕೆ ಒಂದು ಗಂಭೀರ ವಿಷಯದ ಬಗ್ಗೆ ಬರೆಯಬೇಕಾದರೆ ವಿಷಯದ ನಾಲ್ಕೂ ಮಗ್ಗುಲಲ್ಲಿ ನೋಡಬೇಕಾದ ಕನಿಷ್ಟ ಜ್ಞಾನವೂ ಇಲ್ಲದ ಬೆಪ್ಪುತಕ್ಕಡಿತನವನ್ನು ಪ್ರದರ್ಶಿಸಿತು. ಇದೇ ದಾವೆಯಲ್ಲಿ ಮಂಗಳೂರಿಂದ ಹೊರಡುವ ಇನ್ನೆರಡು ಸಂಜೆ ದೈನಿಕಗಳೂ ಈ ಸುದ್ದಿಯನ್ನೇ ಪ್ರಕಟಿಸಿತು. ಈ ಪತ್ರಿಕೆಗಳಿಗೆ 'ಮಾರಾಟತಂತ್ರ' ಮುಖ್ಯವಾಗಿತ್ತು. ಇದರಿಂದ ಈ ರೀತಿಯ ಉದಯವಾಣಿಯದ್ದನ್ನೇ ರಾಗ ಎಳೆಯಿತು. ಈ ಸಮಯಕ್ಕೆ ಸರಿಯಾಗಿ ಪ್ರತಿಕ್ರಯಿಸಿದ ಸಂಘ ಪರಿವಾರ ಪತ್ರಿಕಾ ಹೇಳಿಕೆಯಲ್ಲಿ 'ಕೋಮು ಉದ್ವಿಗ್ನತೆ ಉಂಟಾಗುವಂತೆ ಸುಳ್ಳು ಪತ್ರಿಕೆ ಹೇಳಿಕೆ ನೀಡಿ ಮೆರವಣಿಗೆಯಲ್ಲಿ ಪ್ರಚೋದನಾಕಾರಿ ಘೋಷಣೆಗಳು ಕೂಗಿದ್ದಾರೆ ಎಂದು ವಿಚಾರಣೆಗೆ ಪೊಲೀಸರು ತೆಗೆದುಕೊಂಡಾಗ ಅಮಾಯಕರ ಮೇಲೆ ಪೊಲೀಸರು ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿ ಪ್ರತಿಭಟನೆ ನಡೆಸಿತು, ಆದಾಗಲೇ ಇದೊಂದು ಪೂರ್ವಯೋಜಿತ ಕೃತ್ಯ - ಸಂಘ ಪರಿವಾರ ದಿಂದ ನಡೆದಿದೆ ಎಂದು ಜನರಾಡಿಕೊಳ್ಳುತ್ತಿದ್ದಾರೆ. ಉಡುಪಿ ಪ್ರಕರಣದ ಮಧ್ಯೆ ಈ ಪ್ರಕರಣ ವನ್ನು ತೂರಿಬಿಟ್ಟು ವಿಷಯಾಂತರಕ್ಕೆ ಪ್ರಯತ್ನಿಸಿ ವಿಫಲವಾದ ಸಂಘ ಪರಿವಾರ ಮತ್ತೊಂದು ಆಘಾತ ಎದುರಿಸಿತ್ತು. ಮಾರ್ಚ್ 21 ರ ಬೆಳಿಗ್ಗೆ ಈ ಅಕ್ರಮ ಗೋಶಾಲೆಯ ಎಲ್ಲಾ ದನಗಳನ್ನು ಸರ್ಕಾರಿ ಸ್ವಾಮ್ಯದ ಸ್ಥಳಕ್ಕೆ ಸ್ಥಳಾಂತರಿಸಿ ಸಂಘ ಪರಿವಾರ 'ಬಿಸಿನೆಸ್'ಗೆ ಕೊನೆ ಎಳೆಯಿತು. ಇದರಿಂದ ತೀವ್ರಮುಖಭಂಗಗೊಂಡ ಸಂಘ ಪರಿವಾರದ ಕ್ರಿಮಿನಲ್‌ಗಳು ಬಸ್ಸಿಗೆ ಕಲ್ಲು


ಉದಯವಾಣಿ

Shalini

...ತ್ತಲೆ ಶಿಕ್ಷೆ ನೀಡಿದವರಿಗೆ ತಕ್ಕ ಶಿಕ್ಷೆ: ಮುಖ್ಯಮಂತ್ರಿ ಭರವ...

ಹುಯಿಲೆಬ್ಬಿಸಿತು' 'ಪಾಕಿಸ್ತಾನ ಜಿಂದಾಬಾದ್', 'ಭಜರಂಗದಳ ಚಟ್ಟಕ್ಕೆ ಹಿಂದೂ ಯುವತಿಯರು ಮಂಚಕ್ಕೆ', 'ಗೋಮಾಂಸ ಭಕ್ಷಣೆ ನಮ್ಮ ಜನ್ಮಸಿದ್ಧ ಹಕ್ಕು' ಎಂಬ ಸುಳ್ಳು ಹೇಳಿಕೆ ಬಹಿರಂಗವಾಗಿಯೇ ನೀಡಿದರು.

ಉಡುಪಿ ಜಿಲ್ಲಾ ಪೊಲೀಸರು ಈ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿ ಸ್ಪಷ್ಟನೆ ನೀಡಿ ಧ್ವಜ ಮತ್ತು ಘೋಷಣೆಗಳ ಬಗ್ಗೆ ಸಂಘ ಪರಿವಾರ ಹಾಗೂ ದೈನಿಕಗಳ ವರದಿಯನ್ನು ಖಂಡಿಸಿದರು ಹಾಗೂ ಅವರ ಮೇಲೆ ಕೇಸ್ ದಾಖಲಿಸಿದ್ದನ್ನು ಘೋಷಿಸಿದರು.

ಉದಯವಾಣಿ ಕಳೆದ ಮೂರು ದಶಕಗಳಿಂದ ಕರಾವಳಿಯಲ್ಲಿ ಸಂಘ ಪರಿವಾರದ ಸಂಘಟನೆಗಳ ಕಾರ್ಯಕ್ರಮ, ಸಿದ್ಧಾಂತಗಳನ್ನು 'ಕೇವಲ ಮಾಧ್ಯಮ' ಎಂದು ಅತಿರಂಜಿತವಾಗಿ ವರದಿ ಮಾಡಿ ಅವರು ಬಲಾಢ್ಯರಂತೆ ಮಾಡಿದ್ದಾರೆ. ಆದಿ ಉಡುಪಿ ಪ್ರಕರಣದಲ್ಲಿ ಓರ್ವ ಕ್ರಿಮಿನಲ್ ಸಂಘ ಪರಿವಾರದ ಕಾರ್ಯಕರ್ತನೆಂದು ನೇರವಾಗಿ ಭಾಗವಹಿಸಿದ ಅಪಾಯಕಾರಿ ಹಂತಕ್ಕೆ ತಲುಪಿದೆ. ಈ ಮಾಧ್ಯಮದ ಬಗ್ಗೆ ಜನಾಂದೋಲನ ರೂಪಿಸದಿದ್ದರೆ ಮುಂದಿನ ದಿನಗಳಲ್ಲಿ ಕೇಂದ್ರ ಸ್ಥಾನದಲ್ಲಿ ಸಂಘ ಪರಿವಾರದ ಮುಖವಾಣಿ ಕೆಲಸ ನಡೆಯಲಿದೆ. ಕೋಮುವಾದದ ವಿರುದ್ಧ ಚಳುವಳಿಯ ಭಾಗವಾಗಿ ಈ ಮಾಧ್ಯಮದ ವಿರುದ್ಧವೂ ಈ ಚಳುವಳಿ ಬೆಳೆಯಬೇಕಾಗಿದೆ. ಬೆಳ್ತಂಗಡಿಯಲ್ಲಿ ಭಜರಂಗ ದಳದವರಿಂದ ನಡೆದ ದಲಿತ ಹುಡುಗಿಯ ಅತ್ಯಾಚಾರ ಮತ್ತು ಬೆತ್ತಲೆ ಪ್ರಕರಣ ವಿರೋಧಿಸಿ ಸಿಪಿಐ(ಎಂ) ಮತ್ತು ಇತರ ಸಂಘಟನೆಗಳು ಜಂಟಿಯಾಗಿ ಪ್ರತಿಭಟನೆ ನಡೆಸಿವೆ. ಪುತ್ತೂರು, ಉಲ್ಲಗಳಲ್ಲಿ ಸುಳ್ಯಗಳಲ್ಲಿಯೂ ನಡೆಯುತ್ತಿದೆ. ಜನ ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ.

ಮಂಗಳೂರಲ್ಲಿ ಚೂರಿ ಇರಿತ

ಈತನ್ಮಧ್ಯೆ ಮಂಗಳೂರಲ್ಲಿ ಸಂಘ ಪರಿವಾರ ಹಳೆಯ ಪೊಲೀಸ್ ಠಾಣೆಯನ್ನು ಅಕ್ರಮವಾಗಿ ಗೋಶಾಲೆಯನ್ನಾಗಿ ರೂಪಿಸಿ 'ದಂಧೆ' ನಡೆಸುತ್ತಿತ್ತು. ಇದರಲ್ಲಿದ್ದ 15 ದನಗಳು 16 ರ ರಾತ್ರೋರಾತ್ರಿ ಕಳುವಾಯಿತು ಎಂದು ಹೇಳಿದೆ. ಈವರೆಗೆ ಪತ್ತೆಯಾಗಲಿಲ್ಲ. ಇದಕ್ಕಾಗಿ ಅದರ ಕೆಲಸಗಾರರನ್ನು ತೂರಾಟ ಮತ್ತು ಓರ್ವ ಗುಜರಿ ಅಂಗಡಿಯ ಲತೀಫ ಎಂಬುವರಿಗೆ ಚೂರಿ ಹಾಕಿದೆ. ಪೊಲೀಸರು ಈ ಬಗ್ಗೆ ಬೇರೆಯೇ ಹೇಳಿಕೆ ನೀಡಿದ್ದಾರೆ. ಆದರೆ ಹತಾಶಗೊಂಡ ಜನ ಪ್ರಚೋದನೆಯಿಂದ ಪುಂಡಾಟಿಕೆಗೆ ಇಳಿಯಲು ವೇದಿಕೆ ಸಜ್ಜುಗೊಳಿಸುವುದೇ ಇದರ ಹುನ್ನಾರವಾಗಿತ್ತು.

ಕಸಾಯಿಖಾನೆಯ ಟೆಂಡರ್ ಕೂಗಿದ ಭಜರಂಗಿಗಳು

ಕಸಾಯಿಖಾನೆಯ ಟೆಂಡರ್ ದಾರರೊಂದಿಗೆ ಪೂರ್ವಭಾವಿ ವ್ಯವಹಾರಗಳಲ್ಲಿ ಈ ಬಾರಿ ಗಳಿಸಲು ವಿಫಲರಾದ ಭಜರಂಗಿಗಳು, ನೇರವಾಗಿ ಟೆಂಡರ್‌ನಲ್ಲಿ ಭಾಗವಹಿಸಿ ಈ ಮೊದಲು 2 ಲಕ್ಷಕ್ಕೆ ಹೋಗುತ್ತಿದ್ದ ಟೆಂಡರ್ 5 ಲಕ್ಷ 10 ಸಾವಿರಕ್ಕೆ ಹರಾಜು ಹಾಕಿದೆ. ಇಲ್ಲಿ 5 ಲಕ್ಷದ ತನಕ ಹರಾಜಿನ ಮೌಲ್ಯ ಘೋಷಿಸಿದವು ಭಜರಂಗಿಗಳು! ಹೇಗಿದೆ Business?

ಸು(ಬೇನಾಮಿ)

ಮೂಡಣ ಕಡಲಲ್ಲಿ ನಡುಗಿತ್ತು ನೆಲವೆಲ್ಲ
ಉಕ್ಕಿಸಿ ಅಲೆಯನ್ನು ತನ್ನೆಲ್ಲೆಯ ಮೀರಿ,
ದಡದಲಿ ದುರಂತದ ಅರಿವಿಲ್ಲದೆ
ಮೈಮರೆತವರು,
ಹಸಿವಿಗಾಗಿ ಸಾಗರಕೆ ಬಲೆಯ ಬೀಸಿದವರು
ಕಡಲಲೆಯ ತೆಕ್ಕೆಗೆ ಸಿಕ್ಕು ಕಣ್ಮರೆಯಾದರು
ಸಾಗರದ ಒಡಲಲಿ 'ಸುನಾಮಿ'

ಅಪ್ಪ ಅಮ್ಮಂದಿರ ಕೂಗು ಕೇಳದ ಕೂಸುಗಳು,
ದಿಕ್ಕು ತೋಚದೆ ಪ್ರಾಣತೆತ್ತ ಜೀವಗಳು
ಎತ್ತ ನೋಡಿದರತ್ತ ಹೆಣಗಳ ರಾಶಿ, ಆಕ್ರಂದನ
ಬದುಕು ನೀಡುವ ತಾಯಿ ಕಾಪಾಡಲಿಲ್ಲ
ಉಣಿಸುವ ಬಟ್ಟಲು ಉಳಿಯಲಿಲ್ಲ
ಸಾಗರದ ಒಡಲಲಿ 'ಸುನಾಮಿ'

ತುಂಬಿದ ಖಜಾನೆ ತೆರೆಯದೆ ಮಂತ್ರಿಗಳ
ಬಂದಿತು ಸಂತಾಪದ ಮಹಾಪೂರ
ಅಲ್ಲಿ ಅಲೆಗಳ ಅಬ್ಬರ, ಇಲ್ಲಿ ಮಂತ್ರಿಗಳ
ಆಡಂಬರ
ಬೀದಿ ಬೀದಿಯಲಿ ಅನ್ನಕ್ಕಾಗಿ ಹಾಹಾಕಾರ
ತಬ್ಬಲಿಯಾದವರಿಗೆ ಅಪರಿಚಿತರ ಮಮಕಾರ
ಸಾಗರದ ಒಡಲಲ್ಲಿ 'ಸುನಾಮಿ'

ವಿಜ್ಞಾನ ಬೆಳೆದಿದೆ ಕೆಲವರ ಒಳಿತಿಗಾಗಿ
ನೀಡದಾಯಿತು ಎಚ್ಚರಿಕೆ ದುರ್ಬಲರಿಗಾಗಿ
ಸಾಗರದ ಒಡಲಲಿ 'ಸುನಾಮಿ'
ಅಸುನೀಗಿದವರು ಬೇನಾಮಿ

- ಶಕು ಎಸ್.ಹಿರೇಮನಿ
ಹಾನಗಲ್ಲ

ನದಿಮುರ ಪಾಕಿಸ್ತಾನ ಡೈರಿ

ಕಮ್ಯುನಿಸ್ಟ್ ತಂಡದ ಜತೆ ಪಾಕಿಸ್ತಾನಕ್ಕೆ ತೆರಳಿದ್ದ ನರೇಶ್ ನದೀಮುರ ಪಾಕಿಸ್ತಾನ ಡೈರಿಯ ಆಯ್ದಭಾಗಗಳ ಸಾರಾಂಶ. ಸುರ್ಜಿತ್‌ರ ಡೈರಿ ವಿಶ್ಲೇಷಣಾತ್ಮಕವಾದರೆ ನರೇಶರ ಭೇಟಿಯ ಹಲವು ಉತ್ಕಟ ಕ್ಷಣಗಳನ್ನು ಉತ್ತಮವಾಗಿ ಸೆರೆಹಿಡಿದಿದೆ.

ಸುರ್ಜಿತ್ ನೋಡಲು ನೂಕುನುಗ್ಗಲು

ಸುರ್ಜಿತ್ ಮುಂದೆ ಇದ್ದ ಕಮ್ಯುನಿಸ್ಟ್ ತಂಡ ಲಾಹೋರ್ ವಿಮಾನನಿಲ್ದಾಣದಿಂದ ಹೊರಗೆ ಬರುತ್ತಿದ್ದಂತೆ, ಹೊರಗೆ ಕಾಯುತ್ತಿದ್ದ ಐನೂರುಕ್ಕೂ ಹೆಚ್ಚು ಎಡ ಕಾರ್ಯಕರ್ತರ ಗುಂಪಿನಲ್ಲಿ ತೀರಾ ನೂಕುನುಗ್ಗಲು ಶುರುವಾಯ್ತು. ಅವರೆಲ್ಲ ಇಡೀ ಭಾರತೀಯ ಉಪಖಂಡದ ಎತ್ತರದ ನಾಯಕ ಮಾತ್ರವಲ್ಲ, ಲಾಹೋರ್‌ನಲ್ಲಿ ಹಿಂದೆ ಸಕ್ರಿಯರಾಗಿದ್ದ ಸುರ್ಜಿತ್ ನೋಡಲು ಬಂದಿದ್ದರು. ಅವರಿಗೆಲ್ಲ ಸುರ್ಜಿತ್ 'ನಮ್ಮವರೇ!' ಸುರ್ಜಿತ್ ನೋಡಲು ನೆರೆದಿದ್ದು ಲಾಹೋರ್‌ನವರು ಮಾತ್ರವಲ್ಲ, ದೂರದ ಪ್ರಾಂತ್ಯಗಳಿಂದ ಹಲವರು ಬಂದಿದ್ದರು.

ಸುದ್ದಿ ಮಾಧ್ಯಮಗಳೂ ಸುರ್ಜಿತ್ ಮತ್ತು ತಂಡದವರನ್ನು ಮಾತನಾಡಿಸಲು ಪ್ರಯತ್ನಪಟ್ಟರು. ಈ ನೂಕುನುಗ್ಗಲಿನಲ್ಲಿ ಬಹಳ ನಾಜೂಕು ಆರೋಗ್ಯ ಸ್ಥಿತಿಯಿರುವ ಸುರ್ಜಿತರಿಗೆ ತೊಂದರೆಯಾಗಬಾರದು ಎಂಬ ಕಾಳಜಿಯಿಂದ ಜಂಟಿ ಎಡರಂಗದ ಕೆಲವು ಕಾರ್ಯಕರ್ತರು ಯಾರನ್ನೂ ಸುರ್ಜಿತ ಹತ್ತಿರ ಬಿಡಲಿಲ್ಲ. ಇದರಿಂದ ಕುಪಿತರಾದ ಕೆಲವು ಪತ್ರಕರ್ತರೂ, ಕಾರ್ಯಕರ್ತರೂ ಲಡಾಯಿಗೆ ನಿಂತರು. ಕೆಲವು ಹಿರಿಯ ಪತ್ರಕರ್ತರು, ಎಡರಂಗದ ನಾಯಕರು ಮಧ್ಯಪ್ರವೇಶಿಸದಿದ್ದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿತ್ತು....

.... ಅಂದು ರಾತ್ರಿ ನಿವೃತ್ತ ನ್ಯಾಯಾಧೀಶರ ಮನೆಯಲ್ಲಿ ಸ್ವಾಗತ ಭಾಷಣ ಏರ್ಪಾಡಾಗಿತ್ತು. ಆ ನಿವೃತ್ತ ನ್ಯಾಯಾಧೀಶರ ಮಗ ಒಂದು ಎಡಪಕ್ಷದ ಕೇಂದ್ರ ಸಮಿತಿ ಸದಸ್ಯ. ಔತಣಕೂಟದಲ್ಲಿ ಹೆಚ್ಚುಕಡಿಮೆ ಮೂರು ಎಡಪಕ್ಷಗಳ ಕೇಂದ್ರೀಯ ನಾಯಕರು ಮಾತ್ರವಲ್ಲದೆ, ಪ್ರಮುಖ ಮಾಧ್ಯಮಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಪಾಕಿಸ್ತಾನದ ಅತಿದೊಡ್ಡ ಟಿ.ವಿ. ಚಾನಲ್ ಜಿಯೋ ಈ ಸಮಾರಂಭವನ್ನು ಬಿತ್ತರಿಸಿತು. ಆ ಸಮಯದಲ್ಲಿ ರೆಕಾರ್ಡ್ ಮಾಡಿದ ಸುರ್ಜಿತ್ ಮತ್ತು ಬರ್ದನ್‌ರ ಸಂದರ್ಶನವನ್ನು ಇಡಿಯಾಗಿ ಬಿತ್ತರಿಸಿತು.

- ಫೆಬ್ರವರಿ 24

ನೆನೆ ನೆನೆ ಆ ದಿನವ....

ಲಾಹೋರ್ ಬಳಿ ಇರುವ ಮುಘಲಪುರ ರೈಲ್ವೇ ನಿಲ್ದಾಣ (ಸುರ್ಜಿತ್ ಭೂಗತರಾಗಿದ್ದಾಗ ಇಲ್ಲೇ ಬಂಧಿತರಾಗಿ ದೀರ್ಘ ಜೈಲುವಾಸ ಅನುಭವಿಸಬೇಕಾಗಿ ಬಂದಿತ್ತು)ಕೆ ಭೇಟಿ ನೀಡುವ ಕಾರ್ಯಕ್ರಮ ಸುರ್ಜಿತ್‌ರು ತೀರಾ ಸುಸ್ತಾಗಿದ್ದರಿಂದ ಕೈಬಿಡಬೇಕಾಯಿತು....

... ಆದರೆ (ಕು)ಖ್ಯಾತ ಲಾಹೋರ್ ಕೋಟೆ (ಶಾಹಿ ಕಿಲಾ) ಭೇಟಿ ಸಾಧ್ಯವಾಯಿತು. ಮುಖ್ಯ ಉದ್ದೇಶ ಸುರ್ಜಿತ್ ಮೂರು ತಿಂಗಳ ಕಾಲ ಏಕಾಕಿ ಬಂಧನಕ್ಕೆ ಒಳಪಡಿಸಿ ಚಿತ್ರಹಿಂಸೆ ಕೊಟ್ಟಿದ್ದ ಸೆಲ್ ನಂ. 3 ನೋಡುವುದು. ಸ್ವಾಭಾವಿಕವಾಗಿಯೇ (ಈಗ ಜರ್ಝರಿತವಾಗಿರುವ) ಗುರುತಿಸಲಾಗದ ಸೆಲ್ ನಂ. 3 ಮುಂದೆ ಮೌನವಾಗಿ ಕೂತಿದ್ದರು. ಬಹುಶಃ ಜೈಲುವಾಸದಲ್ಲಿ ಕಳೆದ ಕರಾಳ ದಿನಗಳನ್ನು, ಭೂಗತ ಚಳುವಳಿಯ ಧೀರ ಹೋರಾಟಗಳನ್ನು ನೆನದಿರಬೇಕು. ಆಮೇಲೆ ಸುರ್ಜಿತ್ ನಮ್ಮ ಜತೆ ಬಂದಿದ್ದ ಎಡ-ಪಕ್ಷಗಳ ಕಾರ್ಯಕರ್ತರು ಮತ್ತು ಅವರನ್ನು ನೋಡಲು ಬಂದಿದ್ದವರ ಪ್ರಶ್ನೆಗಳಿಗೆ ಉತ್ತರಿಸಿದರು.......

.... ಮುಘಲ್ ದೊರೆ ಜಹಾಂಗೀರ್ ಕಟ್ಟಿಸಿದ ಮತ್ತು ಆತನ ಮೆಚ್ಚಿನ ನಗರದ ಪ್ರಸಿದ್ಧ ಕೋಟೆಗೆ ಈ ದುಸ್ಥಿತಿ ಏಕೆ? ಬರಿಯ ಚಾರಿತ್ರಿಕ ಮಹತ್ವ ಗೊತ್ತಿಲ್ಲದ ಅಧಿಕಾರಶಾಹಿ - ಮಿಲಿಟರಿ ನಿರ್ಲಕ್ಷವೇ? ಅಲ್ಲ ಎಂದರು ಜತೆಗೆ ಬಂದಿದ್ದ ಪಾಕಿಸ್ತಾನಿ ಸಂಗಾತಿಗಳು. ಬಹಳಷ್ಟು ಚಾರಿತ್ರಿಕ ಸ್ಥಳಗಳು (ಗುರುದ್ವಾರಾ ದೇರಾ ಸಾಹಿಬ್, ಗುರು ಅರ್ಜುನ್ ದೇವರ 'ಲಂಗರ್', ಸಾಮೂಹಿಕ ಅಡುಗೆ ಮನೆ. ಮಹಾರಾಜ ರಣಜೀತ್ ಸಿಂಗರ ಸಮಾಧಿ, ಡಾ. ಇಕ್ಬಾಲ್‌ರ ಸಮಾಧಿ) ಇದ್ದರೂ ಈ ಸ್ಥಿತಿ.....

ಇದಕ್ಕೆ ಮುಖ್ಯ ಕಾರಣ ಸ್ವಾತಂತ್ರ್ಯದನಂತರದ ಪಾಕಿಸ್ತಾನದಲ್ಲಿ ಇದು ಕುಖ್ಯಾತ ಜೈಲು ಆಗಿಬಿಟ್ಟಿದೆ. ಅಲ್ಲಿನ ಚಾರಿತ್ರಿಕ ಮಹತ್ವದ ಸಂಗತಿಗಳನ್ನು ನೆನಪಿಸಿದರೆ, ಆಕ್ರಮಿತ ಪಾಕಿಸ್ತಾನ ಸರ್ಕಾರಗಳ 'ಕುಖ್ಯಾತ ಕೃತ್ಯ'ಗಳನ್ನು ನೆನಪಿಸಿಕೊಟ್ಟ ಹಾಗೆ ಆಗುತ್ತದೆ. ಇದಕ್ಕೆ ಈ ಕೋಟೆ ಜರ್ಝರಿತವಾಗಲು ಬಿಡಲಾಗಿದೆ ಎನ್ನುತ್ತಾರೆ ಪಾಕಿಸ್ತಾನಿ ಸಂಗಾತಿಗಳು.....

ಈ ಶಾಹಿ ಕಿಲಾ ಜೈಲು ಆಧುನಿಕ ಪಾಕಿಸ್ತಾನದ ಎಡಪಕ್ಷಗಳ ನಾಯಕರು, ಕ್ರಾಂತಿಕಾರಿಗಳನ್ನು ಚಿತ್ರಹಿಂಸೆ ಕೊಟ್ಟು ಕೊಂದ ತಾಣವಾಗಿದೆ. ಇದರಲ್ಲಿ ಪ್ರಮುಖರು ಶಹೀದ್ ಹಸನ್ ನಾಸಿರ್. ದಕ್ಷಿಣದ ಹೈದರಾಬಾದಿನಲ್ಲಿ ತೆಲಂಗಾಣ ಸಶಸ್ತ್ರ ಹೋರಾಟದಲ್ಲಿ ಭಾಗವಹಿಸಿ, ಸ್ವಾತಂತ್ರ್ಯಾನಂತರ ಪಾಕಿಸ್ತಾನಕ್ಕೆ ವಲಸೆಹೋಗಿದ್ದರು ನಾಸಿರ್. ಅಲ್ಲಿ ಜನ-ಪರ ಹೋರಾಟಗಳನ್ನು ಸಂಘಟಿಸಿ ಪಾಕಿಸ್ತಾನಿ ಆಳರಸರಿಗೆ ಸಿಂಹಸ್ವಪ್ನರಾದ ಕಮ್ಯುನಿಸ್ಟ್ ಆಗಿದ್ದರು. 1960 ರಲ್ಲಿ ಮಿಲಿಟರಿ ಆಡಳಿತವು ಅವರನ್ನು ಬಂಧಿಸಿ, ತೀವ್ರ ಚಿತ್ರಹಿಂಸೆ ಕೊಟ್ಟು ಇದೇ ಕೋಟೆಯ ಜೈಲಿನ ಕೋಣೆಯಲ್ಲಿ ಕೊಲ್ಲಲಾಗಿತ್ತು.....

ಜಗತ್ತೊಂದು ಸುತ್ತು
ಶರತ್ ಚಂದ್ರ

ಅಂದು ಲಾಹೋರ್ ಜಿಮ್‌ಖಾನಾದಲ್ಲಿ ಪಾಕಿಸ್ತಾನದ ಧಾರ್ಮಿಕ ಅಲ್ಪಸಂಖ್ಯಾತರು (ಹಿಂದೂ, ಸಿಖ್, ಕ್ರಿಶ್ಚಿಯನ್ನರು) ಪರವಾಗಿ ಮಧ್ಯಾಹ್ನದ ಊಟ ಏರ್ಪಡಿಸಲಾಗಿತ್ತು. ಆ ಔತಣ ಏರ್ಪಡಿಸಿದ ಪ್ರಮುಖರ ಪೂರ್ವಜರು ಮಹಾರಾಜ ರಣಜೀತ್ ಸಿಂಗ್ ಆಸ್ಥಾನ ಉಗ್ರಾಣದ ಪಾಲಕರಾಗಿದ್ದರಂತೆ. ಧಾರ್ಮಿಕ ಅಲ್ಪಸಂಖ್ಯಾತರಲ್ಲಿನ ಹಲವು ಪ್ರಮುಖ ನಾಗರಿಕರು ಔತಣದಲ್ಲಿ ಭಾಗಹಿಸಿದ್ದರು. ಈ ಔತಣಕ್ಕೆ ಲಾಹೋರ್‌ನ ಪ್ರಸಿದ್ಧ (ಸುರ್ಜಿತ್‌ರ ಮೆಚ್ಚಿನ ಮತ್ತು ಯಾವಾಗಲು ಬಳಸುತ್ತಿದ್ದ) ದಯಾಲ್ ಸಿಂಗ್ ಸಂಶೋಧನಾ ಸಂಸ್ಥೆ ಮತ್ತು ಲೈಬ್ರರಿಯ ಡೈರೆಕ್ಟರ ಸಹ ಬಂದಿದ್ದರು. ಸುರ್ಜಿತರಿಗೆ ಅವರು 30-40 ರ ದಶಕದಲ್ಲಿ ಬರೆದಿದ್ದ ಎರಡು ಪುಸ್ತಿಕೆಗಳ ಪ್ರತಿಯನ್ನು ಮತ್ತು ಅದರ ಸುಂದರ ಪ್ರತಿಕೃತಿಯನ್ನು ಕೊಟ್ಟು ಚಕಿತಗೊಳಿಸಿದರು. 1937 ರಲ್ಲಿ ಒಂದು ಪುಸ್ತಿಕೆ ಮತ್ತು 1942 ರಲ್ಲಿ ಬರೆದಿದ್ದ 'ಲೆನಿನ್' ಎಂಬ ಪುಸ್ತಿಕೆ. 1937 ರ ಪುಸ್ತಿಕೆಯಲ್ಲಿ 'ಹರಕಿಶನ್ ಸಿಂಗ್' ಅಂತ ಮಾತ್ರ ಇತ್ತು. 1942 ರ ಪುಸ್ತಿಕೆಯ ಪ್ರಕಾಶಕರು 'ಸುರ್ಜಿತ್ ಅಂಡ್ ಕಂಪನಿ' ಎಂದಿತ್ತು. ಅಂದರೆ 1937-1942ರ ನಡುವೆ ಹರಿಕಿಶನ್ ಸಿಂಗ್ 'ಸುರಜೀತ್' ಆಗಿದ್ದರು.



- ಫೆಬ್ರವರಿ 25

ಭಗತ್ ಸಿಂಗ್ ಹುತಾತ್ಮರಾದ ಜೈಲಿನಲ್ಲಿ....

ಇಂದಿನ ಪ್ರಮುಖ ಭೇಟಿ ಸಾಹಿವಾಲ್ (ಮಾಂಟೊಗೆಮಂ) ಜೈಲಿಗೆ. ಇಲ್ಲಿ ಸುರ್ಜಿತ್ ದೀರ್ಘ ಸೆರೆವಾಸ ಅನುಭವಿಸಿದ್ದರು. ಲಾಹೋರ್ ಜೈಲಿನಂತೆ ಇದೂ ರಾಜಕೀಯ ಕೈದಿಗಳಿಗೆ, ಎಡಪಂಥೀಯರಿಗೆ ಚಿತ್ರಹಿಂಸೆ ಕೊಟ್ಟಿದ್ದಕ್ಕೆ ಕುಖ್ಯಾತ ಜೈಲು....

ಸ್ವತಂತ್ರ ಪಾಕಿಸ್ತಾನದಲ್ಲಿ ಪ್ರಸಿದ್ಧ ಉರ್ದು ಕವಿ ಫೈಜ್ ಅಹ್ಮದ್ ಫೈಜ್ ಮತ್ತು ಹಬೀಬ್ ಜಲಿಬ್ ಇಲ್ಲಿ ಬಂಧಿತರಾಗಿದ್ದರಂತೆ. ಸಾಹಿವಾಲ್‌ನಲ್ಲಿ ಆಮೇಲೆ, ಸುರ್ಜಿತ್ ಎಡರಂಗ ಏರ್ಪಡಿಸಿದ್ದ ದೊಡ್ಡ ರ‍್ಯಾಲಿಯಲ್ಲಿ ಮಾತನಾಡಿದರು.......

... ಆ ಮೇಲೆ (ಈಗ ಗುರುತೇ ಸಿಗದಂತೆ ಮಾಯವಾಗಿರುವ) ಕುಖ್ಯಾತ ಕ್ಯಾಂಪ್ ಜೈಲಿಗೆ ಭೇಟಿ ನೀಡಿದೆವು. ಇಲ್ಲೇ ಭಗತ್ ಸಿಂಗ್ ಮತ್ತು ಅವರ ಸಹಚರರನ್ನು ಗಲ್ಲಿಗೇರಿಸಲಾಗಿತ್ತು. ಆದರೆ ಜೈಲಿನ ಗೋಡೆ ಬಿಟ್ಟರೆ ಬೇರೆ ಏನೂ ಉಳಿದಿಲ್ಲ. ಭಗತ್ ಸಿಂಗ್ ಮತ್ತು ಅವರ ಸಹಚರರನ್ನು ಕಳ್ಳತನದಿಂದ ಒಯ್ದ ಕಳ್ಳ ಬಾಗಿಲೂ ಇಲ್ಲ......

..... ನಗರದ ದರ್ಶನ ನಂತರ ಪ್ರಸಿದ್ಧ ಫೈಜ್ ಅಹ್ಮದ್ ಫೈಜ್‌ರ ಇಬ್ಬರು ಮಗಳು ಮತ್ತು ಅಳಿಯಂದಿರ ಭೇಟಿ ಆಯಿತು.

- ಫೆಬ್ರವರಿ 26

ಜಾಗತೀಕರಣಕ್ಕೆ ಇನ್ನೊಂದು ಮುಖಭಂಗ – ಬೊಲಿವಿಯಾ ಅಧ್ಯಕ್ಷ ರಾಜೀನಾಮೆ

ದಕ್ಷಿಣ ಅಮೇರಿಕಾದಲ್ಲಿ ಸಾಮ್ರಾಜ್ಯಶಾಹಿ ಜಾಗತೀಕರಣವನ್ನು ಹಿಮ್ಮೆಟ್ಟಿಸುವ ಜನ ಚಳುವಳಿ ಇನ್ನೊಂದು ವಿಜಯ ಸಾಧಿಸಿದೆ. ಈಗಾಗಲೇ ಹಲವು ವಿಜಯಗಳನ್ನು ಕಂಡಿರುವ, ಬೊಲಿವಿಯಾದ ಜನತೆ ಪ್ರಾಕೃತಿಕ ಗ್ಯಾಸ್ ಮೇಲೆ ವಿದೇಶಿ ಕಂಪನಿಗಳ ಮೇಲಿನ ತೆರಿಗೆ ಏರಿಕೆ ಬಗ್ಗೆ ಪಾರ್ಲಿಮೆಂಟ್ ಮಂಜೂರು ಮಾಡಿದ ಕಾನೂನನ್ನು ಬದಲಾಯಿಸುವಂತೆ ಭಾರಿ ಪ್ರತಿಭಟನೆಗಳನ್ನು ಮಾಡಿದ್ದಾರೆ. ಇದನ್ನು ಒಪ್ಪದ ಅಧ್ಯಕ್ಷ ಪುನಃ ರಾಜೀನಾಮೆ ಕೊಡುವಂತೆ ಒತ್ತಡ ಹೇರಿದ್ದಾರೆ. ದಕ್ಷಿಣ ಅಮೇರಿಕ ಮತ್ತು ಇಡೀ ಜಗತ್ತಿನ ಜನತೆಯ ಹೋರಾಟಕ್ಕೆ ಇದೊಂದು ಮಹತ್ವದ ಉತ್ಸಾಹದಾಯಕ ಬೆಳವಣಿಗೆ.

ಬೊಲಿವಿಯಾದ ಅಧ್ಯಕ್ಷ ಮೇಸ್ ತೀವ್ರ ಬೀದಿ ಪ್ರತಿಭಟನೆಗಳಿಂದ ರಾಜೀನಾಮೆ ಕೊಡಬೇಕಾಗಿ ಬಂದಿವೆ. ಪ್ರಾಕೃತಿಕ ಗ್ಯಾಸ್ ಮೇಲೆ ವಿದೇಶಿ ಕಂಪನಿಗಳ ಮೇಲೆ ಹೊರಿಸುವ ತೆರಿಗೆ ಪ್ರಮಾಣ ನಿರ್ಧರಿಸುವ ಕಾನೂನು ಬಗ್ಗೆ ಇದ್ದ ವಿವಾದ ಇದಕ್ಕೆ ಕಾರಣ. 1982ಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬಂದ ಬೊಲಿವಿಯಾದ ಪಾರ್ಲಿಮೆಂಟ್‌ನಲ್ಲಿ ಸಾಮ್ರಾಜ್ಯಶಾಹಿ -ಬೆಂಬಲಿಸುವ ಸ್ಥಳೀಯ ಶ್ರೀಮಂತರ ಪಕ್ಷಗಳೇ ಪ್ರಬಲವಾಗಿವೆ. ಜನಪರ ಎಡ-ಪ್ರಗತಿಪರ ಶಕ್ತಿಗಳು ಪ್ರಬಲವಾಗಿದ್ದರೂ, ಪಾರ್ಲಿಮೆಂಟು ಬಹುಮತ ಇಲ್ಲ. ಆದ್ದರಿಂದ ವಿದೇಶಿ ಕಂಪನಿಗಳು ದೇಶದ ಪ್ರಾಕೃತಿಕ ಗ್ಯಾಸ್‌ಗೆ ತೆರಬೇಕಿದ್ದ ತೆರಿಗೆ ಶೇಕಡಾ 18 ಎಂದು ಪಾರ್ಲಿಮೆಂಟ್ ಕಾನೂನು ಪಾಸುಮಾಡಿತು. ಆದರೆ ಎಡಪ್ರಗತಿಪರ ಶಕ್ತಿಗಳ ನಾಯಕತ್ವದಲ್ಲಿ ಶೇಕಡಾ 50 ತೆರಿಗೆ ವಿಧಿಸಬೇಕು. ಬಂದ ಹಣವನ್ನು, ಬೊಲಿವಿಯಾದ ಬೆಳವಣಿಗೆಗೆ ಬಳಸಬೇಕು ಎಂಬುದು ಅವರ ಒತ್ತಾಯವಾಗಿತ್ತು. ಇದನ್ನು ಧಿಕ್ಕರಿಸಿದ ಅಧ್ಯಕ್ಷ, ಪಾರ್ಲಿಮೆಂಟಿಗೆ ಜನ ಮುತ್ತಿಗೆ ಹಾಕಿದರು. ಪ್ರಾಕೃತಿಕ ಗ್ಯಾಸ್ ಕಂಪನಿಗಳು ಕೆಲಸ ಮಾಡುವಂತೆ ದಿಗ್ಬಂಧನ ಹಾಕಿದರು. ಹಲವು ದಿನಗಳ ಈ ಒತ್ತಡ, ದೇಶವ್ಯಾಪಿ ಭಾರಿ ಪ್ರತಿಭಟನೆಗೆ ಅಧ್ಯಕ್ಷ ಮೇಸಾ ರಾಜೀನಾಮೆ ಕೊಟ್ಟಿದ್ದಾರೆ. ರಾಜಕೀಯ ಬಿಕ್ಕಟ್ಟು ಸೃಷ್ಟಿಸಿ, ಕಾನೂನು ಬದಲಾವಣೆ ಮಾಡುವ ಅಗತ್ಯ ಮುಂದೂಡುವುದು ತಂತ್ರ. ಎರಡು ವರ್ಷಗಳ ಹಿಂದೆಯಷ್ಟೇ ಹಿಂದಿನ ಅಧ್ಯಕ್ಷ ಸಾಂಚೇಸ್ ತೀವ್ರ ಜನ-ಚಳುವಳಿಗೆ ಹೆದರಿ ಅಮೇರಿಕಾಕ್ಕೆ ಓಡಿ ಹೋದರೆ, ಉಪಾಧ್ಯಕ್ಷನಾದ ಮೇಸಾ ಅಧ್ಯಕ್ಷನಾಗಿದ್ದ. ಈಗ ಉಪಾಧ್ಯಕ್ಷ ಇಲ್ಲದಿರುವುದರಿಂದ ಸೆನೆಟ್ ಸ್ಪೀಕರ್, ಅಧ್ಯಕ್ಷನಾಗುತ್ತಾನೆ. ಇನ್ನೊಮ್ಮೆ ಮೇಲಿಂದ ಹೊದಿಸಿದ ಕಪಟ ನಾಟಕ 'ಬೂರ್ಜ್ವಾ ಪ್ರಜಾಪ್ರಭುತ್ವ' ವ್ಯವಸ್ಥೆಯ ಉತ್ಪತ್ತಿ ಜನರ ನಿಜವಾದ ಅಧಿಕಾರ ಹತ್ತಿಕ್ಕಲು ಹಾಕುವುದಿಲ್ಲ ಎಂದು ಬೊಲಿವಿಯಾದ ಜನತೆ ತೋರಿಸಿದ್ದಾರೆ. ನಿಜವಾದ ರಾಜಕೀಯ ಅಧಿಕಾರ ಇರಬೇಕಾದ್ದು, ಇರುವಂತಹದ್ದು ಜನಗಳಲ್ಲಿ. ಅದನ್ನು ಹತ್ತಿಕ್ಕಿದಾಗ ಜನ ಬೀದಿಗಿಳಿದು ಅದನ್ನು ಚಲಾಯಿಸುತ್ತಾರೆ ಎಂದು ಪುನಃ ತೋರಿಸಿದ್ದಾರೆ. ಇದು ದಕ್ಷಿಣ ಅಮೇರಿಕಾ ಮಾತ್ರವಲ್ಲ, ಇಡೀ ಜಗತ್ತಿನ ಹೋರಾಟನಿರತ ಜನತೆಗೆ ಉತ್ಸಾಹದಾಯಕ ಮಹತ್ತರ ಬೆಳವಣಿಗೆ.

ಬೊಲಿವಿಯಾ ಹೇರಳ ಪ್ರಕೃತಿಕ ಸಂಪತ್ತು ಇರುವ ಬಡದೇಶ. ದಕ್ಷಿಣ ಅಮೇರಿಕಾದಲ್ಲೇ ಅತ್ಯಂತ ಬಡದೇಶಕ್ಕೆ ಇರುವ ಪ್ರಾಕೃತಿಕ ಸಂಪನ್ಮೂಲ ಬಳಸಲು ಅಮೇರಿಕನ್ - ವಿದೇಶಿ ಕಂಪನಿಗಳ ಕಪಿಮುಷ್ಟಿ ಬಿಟ್ಟೇ ಇಲ್ಲ. ಹಿಂದೆ ಚಿನ್ನ ಮತ್ತು ಬೆಳ್ಳಿ ಗಣಿಗಳನ್ನು ವಿದೇಶಿ ಕಂಪನಿಗಳು ವಶಪಡಿಸಿಕೊಂಡು ಬೊಲಿವಿಯಾವನ್ನು ಲೂಟಿ ಮಾಡಿವೆ. ಸ್ಥಳೀಯರಿಗೆ ಅದರಿಂದ ಯಾವುದೇ ಪ್ರಯೋಜನವಿಲ್ಲ. ಈಗ ತೈಲ, ಪ್ರಾಕೃತಿಕ ಗ್ಯಾಸ್ ಅದನ್ನೇ ಮಾಡುವ ಹುನ್ನಾರ ನಡೆದಿದೆ. ಅದು ಆಗಗೊಡುವುದಿಲ್ಲ ಎಂದು ಜನ ದೃಢ ಪ್ರತಿಜ್ಞೆ ಮಾಡಿದ್ದಾರೆ. ವಿದೇಶಿ ಕಂಪನಿಗಳು ಹೂಡಿದ ಬಂಡವಾಳಕ್ಕೆ ಹತ್ತರಷ್ಟು ಲಾಭ ಮಾಡುತ್ತಿದ್ದು, ಅದೇ ಗ್ಯಾಸನ್ನು ಸ್ಥಳೀಯವಾಗಿ 12 ಪಟ್ಟು ಬೆಲೆಗೆ ಮಾರುತ್ತಿದ್ದಾರೆ. ಇದನ್ನು ಪ್ರಶ್ನಿಸಿರುವ ಜನತೆ ಈ ಬಗ್ಗೆ ತೀವ್ರ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಎರಡು ವರ್ಷಗಳ ಹಿಂದೆ ಅಧ್ಯಕ್ಷ ಸಾಚೇಸ್ ಓಡಿ ಹೋಗಲು ಸಹ, ಗ್ಯಾಸ್ ಒಡೆತನ ಬಗೆಗಿನ ಈ ವಿವಾದವೇ ಕಾರಣ. ಆಮೇಲೆ ಅಧಿಕಾರಕ್ಕೆ ಬಂದ ಮೇಸ್ ಸಮಸ್ಯೆ ಮುಂದೂಡುತ್ತಾ ಈಗ ಅದು ಭುಗಿಲೆದ್ದಿದೆ. ಅಧ್ಯಕ್ಷ ಮೇಸಾ 800 ಪ್ರತಿಭಟನೆ ಎದುರಿಸಬೇಕಾಗಿತ್ತು ಈ ಅವಧಿಯಲ್ಲಿ.

ಬೊಲಿವಿಯಾ ಜನತ್ ಚಳುವಳಿ ಹಿಂದೇನೂ ಇಂತಹ ಮಹಾನ್ ವಿಜಯಗಳನ್ನು ಹೊಂದಿದೆ. ಎರಡು ವರ್ಷಗಳ ಹಿಂದೆ ನಗರವೊಂದನ್ನು ನೀರು ಸರಬರಾಜು ಖಾಸಗೀಕರಣ ವಿರುದ್ಧ ಚಳುವಳಿ ತೀವ್ರವಾಗಿ ನಡೆದು, ವಿದೇಶಿ ಕಂಪನಿ ಓಡಿ ಹೋಗಬೇಕಾಗಿ ಬಂದಿತ್ತು. ಸಾಮ್ರಾಜ್ಯಶಾಹಿ ಜಾಗತೀಕರಣ ತೀವ್ರ ಪರಿಣಾಮದ ಪರಾಕಾಷ್ಠೆಗೊಂಡಿರುವ ಬೊಲಿವಿಯಾದ ಜನತೆ ಈ ಚಳುವಳಿಯ ಮುಂಚೂಣಿಯಲ್ಲಿದ್ದುದು ಆಶ್ಚರ್ಯಕರವಲ್ಲ. ಸ್ಥಾಪಿತ ರಾಜಕೀಯ ವ್ಯವಸ್ಥೆ ಧಿಕ್ಕರಿಸಿ, ಜನತೆ ಅಭಿಮತದ ಅಧಿಕಾರ ಸ್ಥಾಪಿಸುವಲ್ಲಿ ಇದೊಂದು ಮಹತ್ವದ ಮೈಲಿಗಲ್ಲು.

ಸಿನಿಮೇಷ

ಜನಮನವನ್ನು ಆಳವಾಗಿ ಕಲಕಿದ ಭೀಕರ ಘಟನೆಗಳ ಮೇಲೆ ಫಿಲಂ ಮಾಡುವುದು ಕತ್ತಿಯ ಮೇಲೆ ನಡೆದಂತೆ. 1984 ರ ದೆಹಲಿಯ ಸಿಖ್ ಹತ್ಯಾಕಾಂಡದ ಮೇಲೆ ಫಿಲಂ ಮಾಡುವುದು ಹಾಗೆನೇ ಧೈರ್ಯದ ಜವಾಬ್ದಾರಿಯುತ ಕೆಲಸ. ಇದನ್ನು ಉತ್ತಮವಾಗಿ ನಿರ್ವಹಿಸಿದ್ದಾರೆ ಸೊನಾಲಿ ದಾಸ್‌ಗುಪ್ತ 'ಅಮು'ವಿನಲ್ಲಿ. ಈ ಹತ್ಯಾಕಾಂಡದಲ್ಲಿ ಅನಾಥೆಯಾದ ಹುಡುಕಿಯೊಬ್ಬಳು ತನ್ನ ಅಪ್ಪ-ಅಪ್ಪನನ್ನು ಹುಡುಕುತ್ತಾ ಸಿಖ್ ಹತ್ಯಾಕಾಂಡದ ಭೀಕರತೆ ಅರಿವಾಗುತ್ತಾ, ನಮಗೂ ಮಾಡಿಸುತ್ತಾ ಹೋಗುವ ರೂಪದಲ್ಲಿದೆ ಚಿತ್ರ. ಸಿಪಿಐ(ಎಂ) ಹಿರಿಯ ನಾಯಕಿ ಬೃಂದಾ ಕಾರಟ್‌ರಿಂದ ಚಿತ್ರದ ಪಾತ್ರವೊಂದರಲ್ಲಿ ಸೊಗಸಾದ ಅಭಿನಯ ಚಿತ್ರದ ಒಂದು ವಿಶೇಷ. ಇಂಗ್ಲೀಷ್, ಬಂಗಾಳಿ, ಹಿಂದಿ ಮತ್ತು ಇಂಗ್ಲೀಷ್ ಸಬ್‌ಟೈಟಲುಗಳು ಇರುವ ಚಿತ್ರ ಜನಸಾಮಾನ್ಯರನ್ನು ಮುಟ್ಟದೆ ಹೋದೀತು ಎಂಬುದು ಒಂದೇ ನ್ಯೂನ್ಯತೆ ಎನ್ನಬಹುದು.

ದೆಹಲಿ ಸಿಖ್ ಹತ್ಯಾಕಾಂಡಕ್ಕೊಂದು ಹಿನ್ನೋಟ

'ಆಗ ನೀವೇನು ಮಾಡುತ್ತಿದ್ದೀರಿ?' ಎಂದು ಕಾಡಿಸುವ 'ಅಮು'

ದೇಶದ ಜನಮನವನ್ನು ಆಳವಾಗಿ ಕಲಕಿದ ಭೀಕರ ಘಟನೆಗಳ ಬಗ್ಗೆ ಫಿಲಂ ಮಾಡುವವರು ಎರಡು ರೀತಿಯಲ್ಲಿ ಮಾಡಬಹುದು. ಮೊದಲನೆಯದು ಆ ಘಟನಾವಳಿಗಳ ಭೀಕರತೆಯನ್ನು ನೆನಪಿಸಿ ಅದರ ಪರಿಣಾಮವಾಗಿ ಉಂಟಾಗಬಹುದಾದ ತೀವ್ರ ಪರಿಣಾಮ, ದ್ವೇಷ-ವೈಮನಸ್ಯಗಳನ್ನು ಪುನಃ ಉಂಟು ಮಾಡುವುದು ಅಥವಾ ಜಾಸ್ತಿ ಮಾಡುವುದು. ಎರಡನೆಯದು ಆ ಭೀಕರ ಘಟನಾವಳಿಗಳು ಯಾಕಾಯಿತು? ಹೇಗಾಯಿತು? ಅಂತಹ ಭೀಕರತೆ ಮರುಕಳಿಸದಂತೆ ಏನಾದರೂ ಮಾಡಬೇಕಲ್ವಾ? ಎಂದು ಪ್ರಶ್ನಿಸಿಕೊಳ್ಳುವುದು. ಭಾರತ-ಪಾಕಿಸ್ತಾನ ವಿಭಜನೆಯ ಸುತ್ತನಡೆದ ಹತ್ಯಾಕಾಂಡ, ಮುಂಬಯಿ ದಂಗೆಗಳು, ದೆಹಲಿ ಸಿಖ್ ಹತ್ಯಾಕಾಂಡ, ಗುಜರಾತ್ ಹತ್ಯಾಕಾಂಡ, ಬಾಬ್ರಿ ಮಸೀದಿ ನಾಶದ ನಂತರ ದಂಗೆಗಳು - ಇಂತಹ ಘಟನೆಗಳು. ವಿಭಜನೆಯ ಅವಧಿಯ ಬಗ್ಗೆ ಮಾಡಿದ ಫಿಲಂಗಳಲ್ಲಿ ಇವೆರಡು ಬಗೆಯದ್ದು ನೋಡಿದ್ದೇವೆ. 'ಗದರ್' ಮೊದಲನೆಯ ಬಗೆಯದ್ದಾದರೆ, 'ಗರಂ ಹವಾ', 'ತಮಸ್' ಎರಡನೇ ಬಗೆಯದ್ದು. 'ಅಮು' ದೆಹಲಿ ಸಿಖ್ ಹತ್ಯಾಕಾಂಡದ ಬಗ್ಗೆ ಎರಡನೇ ಬಗೆಯ ಫಿಲಂ.

1984 ರಲ್ಲಿ ಇಂದಿರಾಗಾಂಧಿಯವರನ್ನು ಸಿಖ್ ಅಂಗರಕ್ಷಕರು ಹತ್ಯೆ ಮಾಡಿದ ಹಿನ್ನೆಲೆಯಲ್ಲಿ, ದೆಹಲಿ ಮತ್ತಿತರ ಕಡೆ ನಡೆದ ಸಿಖ್-ವಿರೋಧಿ ದಂಗೆಗಳಲ್ಲಿ ಐದು ಸಾವಿರಕ್ಕೂ ಹೆಚ್ಚು ಸಿಖ್‌ರು ಸತ್ತು, ಸಾವಿರಾರು ಸಿಖ್ಖರು ನಿರಾಶ್ರಿತರಾಗಿದ್ದರು. ಈ ದಂಗೆಗಳು ಇಂದಿರಾಗಾಂಧಿ ಹತ್ಯೆಯ ಹಿನ್ನೆಲೆಯಲ್ಲಿ ಆಕ್ರೋಶದಿಂದ ನಡೆದಂತೆ ಮೊದಲ ನೋಟಕ್ಕೆ ಕಂಡರೂ, ಹಲವು ಕಾಂಗ್ರೆಸ್ ನಾಯಕರು ವ್ಯವಸ್ಥಿತವಾಗಿ ನಡೆಸಿದ ಹತ್ಯಾಕಾಂಡ ಎಂದು ಅನ್ನಿಸುವ ಹಲವು ಅಂಶಗಳು ಆಮೇಲೆ ಬೆಳಕಿಗೆ ಬಂದವು. ಖಲಿಸ್ತಾನಿ ಪ್ರತ್ಯೇಕತಾವಾದಿ ಭಯೋತ್ಪಾದಕ ಚಳುವಳಿ, ಅಕಾಲಿ ದಳದ ರಾಜಕೀಯ ಪ್ರಾಬಲ್ಯ ಮುರಿಯಲು ಬಿಂದ್ರನ್‌ವಾಲೆ ಎಂಬ ಸಿಖ್ ಉಗ್ರಗಾಮಿಗೆ ಕಾಂಗ್ರೆಸ್ ಗುಪ್ತ ಕುಮ್ಮಕ್ಕು, ರಾಜ್ಯದಾದ್ಯಂತ ವ್ಯಾಪಕ ಪ್ರತ್ಯೇಕತಾವಾದಿ-ಭಯೋತ್ಪಾದಕ ಚಳುವಳಿ, ಬಿಂದ್ರನ್‌ವಾಲೆ ನಾಯಕತ್ವದ ಭಯೋತ್ಪಾದಕರನ್ನು ಸೆರೆ ಹಿಡಿಯಲು ಅಮೃತಸರ ಸ್ವರ್ಣ ದೇವಾಲಯದ ಮೇಲೆ ಸೈನ್ಯದ ತುಕಡಿಯ ಧಾಳಿ, ಇತ್ಯಾದಿ ಹಿನ್ನೆಲೆಯಲ್ಲಿ ಬಂದ ಈ ಹತ್ಯಾಕಾಂಡ ದೇಶದ ಜಾತ್ಯತೀತ ಸ್ವರೂಪಕ್ಕೆ ತೀವ್ರ ಧಕ್ಕೆ ತಂದಿತ್ತು. ಇಂದಿಗೂ (20 ವರ್ಷಗಳ ನಂತರವೂ) ದಂಗೆಗಳಲ್ಲಿ ಸತ್ತವರ ಕುಟುಂಬದವರಿಗೆ, ನಿರಾಶ್ರಿತರಾದವರಿಗೆ ಸರಿಯಾದ ಪರಿಹಾರ ಇನ್ನೂ ಸಿಕ್ಕಿಲ್ಲ. ದಂಗೆ ನಡೆಸಿದ ನಾಯಕರು, ವ್ಯಕ್ತಿಗಳಿಗೆ ಯಾರಿಗೂ ಶಿಕ್ಷೆಯಾಗಿಲ್ಲ.

ತಂದೆ-ತಾಯಿಗಳಿಗೆ ಹುಡುಕಾಟ

ಅಮೆರಿಕೆಯಿಂದ ರಜೆಯಲ್ಲಿ ಬಂದ (ಈಗ 20 ವರ್ಷ ದಾಟಿದ) ಹುಡುಗಿಗೆ ತನ್ನ ಸ್ವಂತ ನಾಡು, ಹುಟ್ಟಿದ ಸ್ಥಳ, ಈ ದೇಶದ ಸಂಸ್ಕೃತಿ-ಸಾಮಾಜಿಕ - ರಾಜಕೀಯ ಆಗುಹೋಗುಗಳ ಬಗ್ಗೆ ತೀವ್ರ ಆಸಕ್ತಿ. ತನ್ನ ಸಾಕುತಾಯಿ (ಈ ಪಾತ್ರವನ್ನೇ ಬೃಂದಾ ಕಾರಟ್ ನಟಿಸಿರುವುದು) ಹೇಳಿದಂತೆ ದೂರದ ಹಳ್ಳಿಯಲ್ಲಿ ಹುಟ್ಟಿ, ಕೊನೆಗೆ ದೆಹಲಿಯ ಬಳಿ ಬಡ ಕಾಲೋನಿಯೊಂದರಲ್ಲಿ ವಾಸಿಸುತ್ತಿದ್ದ ಪಾಲಕರು ದತ್ತು ಕೊಡಿಸುವ ಏಜೆನ್ಸಿ ಮೂಲಕ ದತ್ತು ಪಡೆದ ಮಗು ತಾನು ಎಂದು ಅರಿತಿರುವ ಹುಡುಗಿಗೆ ಆ ಬಗ್ಗೆ ತೀವ್ರ ಕುತೂಹಲ. ತನ್ನ ತಂದೆ-ತಾಯಿ ಯಾರಿರಬಹುದು?

ಸಾಕು ತಾಯಿಯ ಅಣ್ಣನ ಮನೆಯಲ್ಲಿದ್ದು ಅವರ ಮಗಳು ಮತ್ತುಸಾಕು ತಾಯಿ ಹೊರ ಕಾಲೇಜಿಗೆ ಭೇಟಿ ಕೊಡುವಾಗ ಆಕಸ್ಮಾತ್ತಾಗಿ ಪರಿಚಯವಾಗುವ ದಾಬಾ ನಡೆಸುವವನ ಮನೆಗೆ ಹೋಗುವುದರಿಂದ ಫಿಲಂನ ಕಥೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಆತನ ಕುಟುಂಬದ ಪರಿಚಯದ ನಂತರ ಆ ಪ್ರದೇಶದ ಬಗ್ಗೆ ಮಮತೆ ಬೆಳೆಸಿಕೊಳ್ಳುವ ಹುಡುಕಿ ಪದೇ ಪದೇ ಹೋಗುತ್ತಾಳೆ. ಅಲ್ಲಿ ಸಾವಿರಾರು ಜನ ಸಿಖ್ಖರ ಕೊಲೆ ನಡೆದ 1984 ರ ಸಿಖ್ ದಂಗೆಗಳ ಬಗ್ಗೆ ಮೊದಲು ಕೇಳುತ್ತಾಳೆ. ಆ ನಡುವೆ ತನ್ನ ತಂದೆ-ತಾಯಿ ಹುಡುಕುವ ಪ್ರಯತ್ನದಲ್ಲಿ ಸಾಕು ತಾಯಿ ಕೊಟ್ಟ ತನ್ನ ಬಗ್ಗೆ ವಿವರಗಳು (ದತ್ತು ಕೊಟ್ಟ ಏಜೆನ್ಸಿ, ಹುಟ್ಟಿದ ಹಳ್ಳಿ ಇತ್ಯಾದಿ) ಬಗ್ಗೆ ತೀವ್ರ ಅನುಮಾನ ಹುಟ್ಟುತ್ತದೆ. ಕಾಲೇಜಿನ ಭೇಟಿಯಲ್ಲಿ ಪರಿಚಯವಾದ ಹಿರಿಯ ಐಎಎಸ್ ಅಧಿಕಾರಿಯ ಮಗ ಕಬೀರನಿಗೆ ಹತ್ತಿರವಾಗುತ್ತಾ, ಆತನ ಸಹಾಯದಿಂದ ತನ್ನ ಹುಡುಕಾಟ ಮುಂದುವರೆಸುತ್ತಾಳೆ.



ಬೃಂದಾ ಕಾರಟ್ ಮತ್ತು ಕೊಂಕಣ್ ಶರ್ಮ

ಆಗ ನೀವೇನು ಮಾಡುತ್ತಿದ್ದೀರಿ?

ಈ ನಡುವೆ ಸಾಕು ತಾಯಿಯ ಪೆಟ್ಟಿಗೆಯಲ್ಲಿ ಸಿಗುವ ಮಾಸಿದ ತಾಯಿಯ ಮರಣ ಪತ್ರದಿಂದ ತಾಯಿಯ ಹೆಸರು ಹಿಡಿದು ಪುನಃ ಕಬೀರನ ಜತೆ ಹುಡುಕಲು ಹೊರಡುತ್ತಾಳೆ. ಈ ಹುಡುಕಾಟದಲ್ಲಿ ಸಿಖ್-ವಿರೋಧಿ ಹತ್ಯಾಕಾಂಡದ ಭೀಕರತೆಯ ಅರಿವು ಅವರಿಗೂ, ನೋಡುಗರಾದ ನಮಗೂ ಆಗುತ್ತಾ ಹೋಗುತ್ತದೆ. ತಾಯಿಯ ಹೆಸರು ಶಾಂತಾ ಅಥವಾ ಶನ್ನೋ ಇರಬೇಕು. ತಂದೆಯ ಹೆಸರು ಕುಮಾರ್ ಇರಬೇಕು - ಎಂಬ ಮಾಸಿದ ತಾಯಿಯ ಮರಣ ಪತ್ರದ ಮಾಹಿತಿಯಿಂದ ಹೊರಡುವ ಅವರು ಹಲವು ಕಡೆ ತಪ್ಪಿ, ಯಾರನ್ನೋ ತಂದೆ ತಾಯಿ ಎಂದು ಗುರುತಿಸಲು ಆರಂಭಿಸುತ್ತಾರೆ.

ಭೀಕರ ಹತ್ಯಾಕಾಂಡ ನಡೆಯುತ್ತಿರುವಾಗ ನೀವೇನು ಮಾಡುತ್ತಿದ್ದೀರಿ? ಅದನ್ನು ತಡೆಯಲು ಪ್ರಯತ್ನಿಸಲಿಲ್ಲವೇ? ಎಂದು ಹುಡುಗಿ ತನ್ನ ಸಾಕು ತಾಯಿ-ಮಾವ ಎಲ್ಲರನ್ನೂ, ಕಬೀರ ತನ್ನ ಐಎಎಸ್ ಅಧಿಕಾರಿ ತಂದೆಯನ್ನು ತೀವ್ರವಾಗಿ ಪ್ರಶ್ನಿಸುತ್ತಾರೆ. ಫಿಲಂನ ಗತಿಗೆ ಈ ಹೊತ್ತಿಗೆ ಚುರುಮುಟ್ಟಿದ್ದು, ನಮ್ಮೆಲ್ಲರಿಗೆ ಈ ಪ್ರಶ್ನೆ ಕೇಳುತ್ತಿದೆ ಎನ್ನಿಸುತ್ತದೆ. ಆ ಹತ್ಯಾಕಾಂಡ ನಡೆದಾಗ ವಯಸ್ಕರಾಗಿದ್ದ ನಮ್ಮನ್ನು ನಮ್ಮ ಮಕ್ಕಳು ಪ್ರಶ್ನೆ ಕೇಳುತ್ತಿದ್ದಾರೆ ಎನ್ನಿಸುತ್ತದೆ. ಆ ಹತ್ಯಾಕಾಂಡ ನಡೆದ ಮೇಲೆ ಹುಟ್ಟಿದ ಎಲ್ಲರೂ ನಮ್ಮನ್ನು ಈ ಪ್ರಶ್ನೆ ಕೇಳುತ್ತಿದ್ದಾರೆ ಎನ್ನಿಸುತ್ತದೆ. ಆ ಹತ್ಯಾಕಾಂಡದ ಬಗ್ಗೆ ಗೊತ್ತಿಲ್ಲದ ಎಲ್ಲರಿಗೂ ಅದರ ಅರಿವು ಮಾಡಿಸಿ, ಈ ಪ್ರಶ್ನೆ ಕೇಳುವ ಹಾಗೆ ಮಾಡುತ್ತದೆ. ಹತ್ಯಾಕಾಂಡದ ಬಗ್ಗೆ ಗೊತ್ತಿದ್ದು, ಮರೆತಿರುವವರಿಗೆ ಅದನ್ನು ನೆನಪಿಸಿ ಆಗ ಮಾತ್ರವಲ್ಲ, ಆ ಮೇಲೆ ಏನು ಮಾಡಿದಿರಿ? ಅಂತಹದ್ದು ಮರುಕಳಿಸದಂತೆ ಏನು ಮಾಡಿದಿರಿ? ಇನ್ನೂ ಭೀಕರವಾದ ಮುಂಬಯಿ ದಂಗೆ, ಗುಜರಾತ್ ಹತ್ಯಾಕಾಂಡ ನಡೆದುಹೋಯಿಲ್ಲ? ನೀವೇನು ಮಾಡಿದಿರಿ? ಎಂಬ ಪ್ರಶ್ನೆ ಫಿಲಂ ತುಂಬಾ ಕಾಡುತ್ತದೆ.

'ಅಮು' ಸಿಕ್ಕಳು

ಈ ನಡುವೆ ತಂದೆ-ತಾಯಿ ಹುಡುಕಾಟದಲ್ಲಿ ಇಬ್ಬರಿಗೂ ದಾರಿ ತಪ್ಪುತ್ತದೆ. ಸಿಖ್ಖರ ಹತ್ಯಾಕಾಂಡದಲ್ಲಿ ದಾಬಾವಾಲನ 'ಚಾಚಾ' ಕೊಲೆ ಮಾಡಿದ ಕುಮಾರ್ ತನ್ನ ತಂದೆ ಇರಬಹುದು ಎಂಬ ಗುಮಾನಿ ಮೇಲೆ ಅವನನ್ನು ಹಿಂಬಾಲಿಸುತ್ತಾಳೆ. ಇದು ಸಾಕು ತಾಯಿಗೆ ತಿಳಿದು, ರಾತ್ರಿಯಲ್ಲಿ ಗೂಂಡಾ ಕುಡಿದ ಅಮಲಿನಲ್ಲಿ ಬಡಬಡಿಸುತ್ತಾ ಇದ್ದುದನ್ನು ನೋವಿನಿಂದ ನೋಡುತ್ತಿದ್ದ ಮಗಳನ್ನು ಕರೆದುಕೊಂಡು ಬಂದು ನಿಜ ಹೇಳುತ್ತಾಳೆ - ನಿನ್ನ ನಿಜವಾದ ಹೆಸರು ಅಮೃತಾ. ಅಮು ಎಂದು ಕರೆಯುತ್ತಿದ್ದರು. 1984 ರ ಸಿಖ್-ದಂಗೆಗಳಲ್ಲಿ ನಿನ್ನ ತಂದೆ-ಚಿಕ್ಕ ತಮ್ಮನ ಕೊಲೆ ಆಯಿತು. ಆಮೇಲಿನ ಸಂಕಟ ತಾಳಲಾರದೆ ನನ್ನ ಬಗಲಿಗೆ ನಿನ್ನನ್ನು ಹಾಕಿ, ನಿನ್ನ ತಾಯಿ ಆತ್ಮಹತ್ಯೆ ಮಾಡಿಕೊಂಡಳು. ಸಿಖ್ - ದಂಗೆಯ ನಿರಾಶ್ರಿತರ ಕ್ಯಾಂಪಿನಲ್ಲಿ ಪರಿಹಾರ ಕೆಲಸದಲ್ಲಿ ತೊಡಗಿದ್ದ ನನಗೆ ನಿನ್ನ ತಾಯಿ ಶನ್ನೋ ಪರಿಚಯವಾಯ್ತು. ಶನ್ನೋ ಮಾನಸಿಕವಾಗಿ ಬಳಲುತ್ತಿದ್ದರಿಂದ, ನಿಮ್ಮ ಮನೆಗೆ ಪ್ರತಿದಿನ ಬರುತ್ತಿದ್ದೆ. ನಿನ್ನ ಜತೆ ಆತ್ಮೀಯತೆ ಬೆಳೆಯಿತು. ದಯವಿಟ್ಟು 'ಅಮು'ವನ್ನು ನಿಮ್ಮ ಮಗಳಂತೆ ಸಾಕಿ, ಅವಳಿಗೆ ಈ ಹತ್ಯಾಕಾಂಡದ ಬಗ್ಗೆ, ತಂದೆ-ತಾಯಿಗಳ ಬಗ್ಗೆ ಗೊತ್ತಾಗುವುದೇ ಬೇಡ ಎಂದು ಬರೆದಿಟ್ಟಿದ್ದಳು ನಿನ್ನ ತಾಯಿ ಆತ್ಮಹತ್ಯಾ ಚೀಟಿಯಲ್ಲಿ. 'ಅಮು' ಕಬೀರನ ಜತೆ ಹಳಿಗಳ ಮೇಲೆ ಅದೇ ಕಾಲೋನಿಯಲ್ಲಿ ನಡೆದಾಡುತ್ತಿದ್ದಾಗ ಗೋಧ್ರಾ ನಂತರದ ಹತ್ಯಾಕಾಂಡದ ಸುದ್ದಿ ಬರುವುದರೊಂದಿಗೆ ಕೊನೆಯಾಗಿ 'ನೀವೇನು ಮಾಡಿದಿರಿ' ಎಂಬ ಪ್ರಶ್ನೆ ಫಿಲಂನಲ್ಲಿ ಮರುಕಳಿಸುತ್ತದೆ.

ಸಾಮಾನ್ಯ ಜನರಿಗೆ ಮುಟ್ಟೀತೆ?

ತೀರಾ ಭೀಭತ್ಸ ದೃಶ್ಯಗಳಿಲ್ಲದೆ, ಸಿಖ್ ಹತ್ಯಾಕಾಂಡದ ಭೀಕರತೆ ನೆನಪಿಸುವ ಶಕ್ತಿಯುತ ಚಿತ್ರ 'ಅಮು'. 'ಅಮು'ವಾಗಿ ಕೊಂಕೇನ್ ಸೇನ್‌ಶರ್ಮ, ಸಾಕು ತಾಯಿಯಾಗಿ ಬೃಂದಾ ಕಾರಟ್ ಉತ್ತಮ ಅಭಿನಯ ನೀಡಿದ್ದಾರೆ. ಕಬೀರ, 'ಅಮು'ನ ಮಾವ, ಅಜ್ಜ ಇತ್ಯಾದಿ ಅಭಿನಯವೂ ಉತ್ತಮವಾಗಿದೆ. ಸಿಖ್ - ದಂಗೆ ಪರಿಹಾರ ಶಿಬಿರಗಳಲ್ಲಿ ಕಾರ್ಯಕರ್ತೆಯಾಗಿ ಒಂದು ಸಣ್ಣ ಪಾತ್ರದಲ್ಲಿ ಸುಭಾಷಿಣಿ ಅಲಿ ಸಹ ಕಾಣಿಸಿಕೊಳ್ಳುತ್ತಾರೆ. ಗ್ಲಾಮರ್ ಇಲ್ಲದೆ ಡಾಕ್ಯುಮೆಂಟರಿಯಂತೆ ನಿಧಾನ ಗತಿಯಲ್ಲಿ ಆರಂಭವಾಗುವ 'ಅಮು' ಆಮೇಲೆ ಚುರುಕಾಗಿ ಕುತೂಹಲಕಾರಿಯಾಗಿ ಉತ್ತಮ ಕಥಾ ಚಿತ್ರದಂತೆ ಬೆಳೆಯುತ್ತದೆ. 'ಸ್ವಾಭಾವಿಕ ಡಾಕ್ಯುಮೆಂಟರಿ' ರೂಪದಲ್ಲಿರುವ ಚಿತ್ರ ನಿಜ ಜೀವನದಲ್ಲಿ ಏನು ಮಾತಾಡುತ್ತಾರೋ ಅದೇ ಭಾಷೆಯಲ್ಲಿದೆ - ಇಂಗ್ಲೀಷ್, ಬಂಗಾಳಿ, ಹಿಂದಿ. ಇಂಗ್ಲೀಷ್ ಸಬ್‌ಟೈಟಲ್ ಗಳಿವೆ ಬಂಗಾಳಿ-ಹಿಂದಿ ಬಂದಾಗ. ಇಡೀ ಚಿತ್ರ ಉನ್ನತ-ಮಧ್ಯ ವರ್ಗದವರ ದೃಷ್ಟಿಕೋನದಿಂದ ನೋಡಿದಂತೆ ಇರುವುದರಿಂದ(ದೇಶದ ಎಲ್ಲಾ ಜನತೆಯ ಕಾಳಜಿ ಪ್ರಶ್ನೆಗಲನ್ನು ಎತ್ತಿದರೂ), ಮತ್ತು ಭಾಷೆಯಿಂದ ಸಾಮಾನ್ಯ ಜನರನ್ನು ಇದು ಮುಟ್ಟದೆ ಹೋದೀತು ಎಂಬುದು ಈ ಚಿತ್ರದ ಒಂದೇ ನ್ಯೂನತೆ.

■ ಶರತ್‌ಚಂದ್ರ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ರೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH